ರಂಜನೆ ಬೋಧನೆ ಪ್ರಬೋದನೆ


ಲಂಕೇಶ್


19 ಅಕ್ಟೋಬರ್ 2016 ಪುಟ 20 ರೂ. 15/-




ವೈದಿಕ ಮತ ತಿರಸ್ಕಾರಕ್ಕೆ ಯೋಗ್ಯವಾದದ್ದು

ಅದಾನಿ ಹಾಕಿದ ಕಾವೇರಿ ಬೆಸುಗೆ






ರೈ ಕೊರಳಿಗೆ ಚಾನಲ್ ಉರುಳು



ಮದ್ದೂರು

ತಮ್ಮಣ್ಣನನ್ನು ಸೋಲಿಸಲು ಯೋಗೇಶ್ವರ್ ಎಂಬ ದಾಳ






ಸುಳ್ಯ:

ವಂಚಕ ಇಸ್ಮಾಯಿಲ್‌ನ ಕೊಂದವರ್ಯಾರು?

ಜೋಶಿಗೆ:

ಚೆಡ್ಡಿಗಳ ಭ್ರಷ್ಟತೆ, ಕಾಂಗ್ರೆಗಳ ನಿರ್ವೀರ್ಯತೆ





ಕಾವೇರಿ ವಿವಾದವೆಂಬ ಮೆಗಾ ಸೀರಿಯಲ

ಧಾರಾವಾಹಿಯ ಈ ಕಂತಿನ ಪಾಠಗಳ





ಕಾವೇರಿ ವಿವಾದದ ಈ ಕಂತು ಒಂದು ಹಂತಕ್ಕೆ ಬರುತ್ತಿದೆ. ಈ ಜಲವರ್ಷದ ಉಳಿದ ಭಾಗದಲ್ಲೂ ಮತ್ತೆ ಸಮಸ್ಯೆ ಬರಬಹುದಾದರೂ, ಅದು ತೀವ್ರ ಸ್ವರೂಪ ಪಡೆದುಕೊಳ್ಳುವ ಸಾಧ್ಯತೆ ಕಡಿಮೆ. ಏಕೆಂದರೆ ಆ ಹೊತ್ತಿಗೆ ಬೆಳೆಗೆ ನೀರಿನ ಪ್ರಶ್ನೆಯು ಅಷ್ಟಾಗಿ ಬರುವುದಿಲ್ಲ. ಕಾವೇರಿ ವಿವಾದವು ಕಳೆದ 30 ವರ್ಷಗಳಿಂದ ಮೆಗಾ ಸೀರಿಯಲ್ಲಿನಂತೆ ನಡೆಯುತ್ತಿದೆ. ಆಗಾಗ್ಗೆ ಅಲ್ಲಲ್ಲಿ ಭಿನ್ನವಾದ ತಿರುವುಗಳನ್ನು ಪಡೆದುಕೊಳ್ಳುತ್ತಿದೆಯಾದರೂ, ಪ್ರತೀ ಸಾರಿಯೂ ಬಹುತೇಕ ಒಂದೇ ರೀತಿಯಲ್ಲಿ ಆರಂಭವಾಗಿ, ಅದೇರೀತಿ ಕೊನೆಗೊಳ್ಳುತ್ತಿರುವುದನ್ನು ನೋಡಬಹುದು. ಪ್ರತೀ ಸಾರಿಯಂತೆ ಈ ಸಾರಿಯೂ ಶಾಶ್ವತ ಪರಿಹಾರದ ಕುರಿತು ಮಾತುಗಳು ಕೇಳಿಬರುತ್ತಿವೆ. ಅವೂ ಸಹ ಪ್ರತೀ ಸಾರಿಯಂತೆ, ಬಿಕ್ಕಟ್ಟು ಸರಿದಾದ ನಂತರ ತಣ್ಣಗಾಗುತ್ತವೆ. ಮತ್ತೆ ಹಾಗಾಗಬಾರದೆಂದರೆ, 2016ರಲ್ಲಿ ಬಿಕ್ಕಟ್ಟು ತಲೆದೋರಿದ ಸಂದರ್ಭದಲ್ಲಿ ನಡೆದ ವಿದ್ಯಮಾನಗಳಿಂದ ಕಲಿಯಬಹುದಾದ ಪಾಠಗಳು ಏನಾದರೂ ಇವೆಯೇ ಎಂಬುದನ್ನು ಪರಿಶೀಲಿಸಬೇಕಿದೆ.

ವಿಧಾನಮಂಡಲದ ಎರಡನೇ ವಿಶೇಷ ಅಧಿವೇಶನದಲ್ಲಿ ತೆಗೆದುಕೊಂಡ ನಿರ್ಣಯವನ್ನು ಕೆಲವರು ಸುಪ್ರೀಂಕೋರ್ಟಿನ ಮುಂದೆ ಸರ್ಕಾರವು ಕೊನೆಗೂ ಮಂಡಿಯೂರಿತು ಎಂದು ಅರ್ಥೈಸುತ್ತಿದ್ದಾರೆ. ಆದರೆ ಒಟ್ಟಾರೆ ಬೆಳವಣಿಗೆಗಳನ್ನು ಗಮನಿಸಿದರೆ, ಇದನ್ನು ಹೀಗೂ ಅರ್ಥೈಸಬಹುದು. ಸುಪ್ರೀಂಕೋರ್ಟ್‌ಅನ್ನೂ ಹೆದರಿಸುವುದು ಸಾಧ್ಯ ಎಂದು ಈ ಸಾರಿ ಸಾಬೀತಾಯಿತು. ಅದು ಹೇಗೆ ಎಂಬುದನ್ನು ವಿಶ್ಲೇಷಿಸುವ ಮುಂಚೆ ಇನ್ನೂ ಕೆಲವು ಸಂಗತಿಗಳ ಪಟ್ಟಿ ಮಾಡುವ ಅಗತ್ಯವಿದೆ.

ಯಥಾಪ್ರಕಾರ ಈ ಸಾರಿಯೂ ಸಮಸ್ಯೆ ಆರಂಭವಾದದ್ದು ನೀರಿಲ್ಲದಾಗ. ಆದರೆ, ಮಳೆ ಕಡಿಮೆಯಾಗಿದೆ ಮತ್ತು ತಮಿಳುನಾಡು ಕೋರ್ಟಿನ ಮೆಟ್ಟಿಲು ಹತ್ತಲಿದೆ ಎಂಬುದು ಖಚಿತವಾಗಿದ್ದರೂ, ಕರ್ನಾಟಕ ಸರ್ಕಾರವು ಅದಕ್ಕೆ ಬೇಕಾದ ತಯಾರಿಯನ್ನು ಮಾಡಿಕೊಂಡಿತ್ತೇ ಎಂಬ ಪ್ರಶ್ನೆ ಇದೆ. ತಯಾರಿ ಎಂದರೆ - ಮೇಲುಸ್ತುವಾರಿ ಸಮಿತಿಗೆ ಸಾಕಷ್ಟು ಮುಂಚೆಯೇ ಸಮಸ್ಯೆ ಆಗಬಹುದು, ಆ ಕುರಿತು ನೀವು ಮಧ್ಯಪ್ರವೇಶಿಸಬೇಕು ಎಂದು ಮನವರಿಕೆ ಮಾಡಿಕೊಡುವುದು, ಕರ್ನಾಟಕವೂ ಸತತ ಬರಗಾಲದಿಂದ ಸಂಕಷ್ಟದಲ್ಲಿದೆ, ನಮ್ಮ ರೈತರಿಗೆ ಒಂದು ಬೆಳೆಗಾದರೂ ನೀರು ಇರುವಂತೆ ನೋಡಿಕೊಳ್ಳಿ ಎಂದು ಒತ್ತಾಯಿಸುವುದು, ಸುಪ್ರೀಂಕೋರ್ಟಿಗೆ ಹೋಗುವ ಸಾಧ್ಯತೆ ಬಂದರೆ ಅದಕ್ಕೆ ಬೇಕಾದ ತಯಾರಿ ಮತ್ತು ರೈತರಿಗೆ ಅವರ ಆತಂಕಗಳನ್ನು ಕಡಿಮೆ ಮಾಡಲು ತೆಗೆದುಕೊಳ್ಳಬೇಕಾದ ಕ್ರಮಗಳು, ಇರುವಷ್ಟು ನೀರಿನ ಮಿತಬಳಕೆ ಮತ್ತು ಸದ್ಬಳಕೆ ಹೇಗೆ ಎಂಬುದನ್ನು ಮೊದಲೇ ಯೋಜಿಸಿ ಅದಕ್ಕೆ ಕ್ರಮ ತೆಗೆದುಕೊಳ್ಳುವುದು, ಪರ್ಯಾಯ ಬೆಳೆ ಪದ್ಧತಿ ಇತ್ಯಾದಿಗಳ ಕುರಿತು ರೈತರಿಗೆ ಪ್ರೋತ್ಸಾಹ ಮತ್ತು ಜಾಗೃತಿ ಇತ್ಯಾದಿ ಇತ್ಯಾದಿ. ಈ ನಿಟ್ಟಿನಲ್ಲಿ ಒಂದಷ್ಟನ್ನು ಸರ್ಕಾರ ಮಾಡಿದೆ. ಆದರೆ, ಅದನ್ನು ಪರಿಣಾಮಕಾರಿಯಾಗಿ ಮಾಡಲಿಲ್ಲ. ಇಷ್ಟನ್ನು ಹೇಳಲು ಬೇಕಾದ ಪುರಾವೆಗಳಿವೆ. ಇಲ್ಲೇ ನಾವು ಪ್ರತೀ ಸಾರಿಯೂ ಸೋಲುತ್ತಿದ್ದೇವೆ. (ನಾವು ಎಂದರೆ ಕರ್ನಾಟಕ ಎಂದು ಮಾತ್ರ ಅರ್ಥವಲ್ಲ). ಈ ಸಾರಿಯೂ ಗೆಲ್ಲಲಿಲ್ಲ. ಹಾಗಾಗಿ ಸಿದ್ದರಾಮಯ್ಯನವರ ಸರ್ಕಾರಕ್ಕೆ ವಿಶೇಷ ಅಂಕಗಳನ್ನೇನೂ ನಾವು ಕೊಡಬೇಕಿಲ್ಲ; ಅದೇ ಸಂದರ್ಭದಲ್ಲಿ ಈ ಹಿಂದಿನ ಸರ್ಕಾರಗಳಿಗಿಂತ ಅವರು ಕಳಪೆಯೂ ಆಗಿರಲಿಲ್ಲ.

ಇನ್ನು ಆಡಳಿತ ಪಕ್ಷಗಳು ಮತ್ತು ವಿರೋಧ ಪಕ್ಷಗಳ ನಡುವಿನ ಆರೋಪ ಪ್ರತ್ಯಾರೋಪಗಳೂ ಸಹ - ಕಡೆಯ 10 ದಿನ ಬಿಟ್ಟು - ಈ ಹಿಂದಿನಂತೆಯೇ ಇದ್ದವು. ಯಡಿಯೂರಪ್ಪ ಮತ್ತು ಈಶ್ವರಪ್ಪನವರು ಅವನ್ನು ಈಗಲೂ ಮುಂದುವರೆಸುತ್ತಿದ್ದಾರೆ. ಅದೇರೀತಿ ಚಳವಳಿಗಾರರೂ ಸಹ, ಹಿಂದಿನ ಹೋರಾಟದ ರೂಪುಗಳನ್ನೇ ಅನುಸರಿಸಿದರು ಮತ್ತು ಹಿಂದಿನಿಂದಲೂ ಮುಂದಿಟ್ಟುಕೊಂಡು ಬರುತ್ತಿದ್ದ ಬೇಡಿಕೆಗಳನ್ನೇ ಈ ಸಾರಿಯೂ ಇಟ್ಟರು. ಬಂದ್ ಕರೆಯೂ ಯಥಾಪ್ರಕಾರ ಹೊರಬಿತ್ತು, ಬಂದ್ ಸಹ ಆಯಿತು. ಹಿಂದಿಗಿಂತ ಈ ಸಾರಿ ರೈಲು ತಡೆಗಳು ಕಡಿಮೆಯಾಗಿದ್ದವು. ಏಕೆಂದರೆ, ಕಳೆದ ಸಾರಿ ರೈಲು ತಡೆದ ಎಲ್ಲರ ಮೇಲೂ ರೈಲ್ವೇ ಪೊಲೀಸರು ಕೇಸು ದಾಖಲಿಸಿ ಅಲೆದಾಡಿಸಿದರು. ಕರ್ನಾಟಕದವರೇ ಮೂರು ಜನ ರೈಲ್ವೇ ಮಂತ್ರಿಗಳು ಬಂದುಹೋದರೂ, ಯಾವ ಕೇಸನ್ನೂ ಹಿಂತೆಗೆದುಕೊಳ್ಳಲಿಲ್ಲ. ನೀರಿನ ಬದಲಿಗೆ ರಕ್ತ ಕೊಡುತ್ತೇವೆ ಎಂದು ಈಗಲೂ ಕೆಲವರು ಹೇಳಿದರು. ಆದರೂ ಹಿಂದಿಗಿಂತ ರಕ್ತದ ಮಾತು ಕಡಿಮೆ ಇತ್ತು.

ಕರ್ನಾಟಕದ ಮುಖ್ಯಮಂತ್ರಿ ಸೇರಿದಂತೆ, ಈ ರಾಜ್ಯದ ಎಲ್ಲರೂ ನಾಲಾಯಕ್‌ಗಳು, ತಮಿಳುನಾಡಿನವರು ಮಾತ್ರ ಲಾಬಿ ಮಾಡುವುದರಲ್ಲಿ ಬಲಾಢ್ಯರು ಎಂದು ವಿವಿಧ ರೀತಿಯಲ್ಲಿ ಯಥಾಪ್ರಕಾರ ಬಣ್ಣಿಸಲಾಯಿತು. ಶಾಶ್ವತ ಪರಿಹಾರದ ಮಾತುಗಳು ಕೇಳಿಬಂದವು. ಅದರ ಸುತ್ತಲೂ ಹಲವೆಡೆ ಚರ್ಚೆಗಳು, ಸಭೆಗಳು ನಡೆದವು. ಇವು ಮುಂದಕ್ಕೂ ಮುಂದುವರೆಯುತ್ತವೆಯೇ ಎಂಬುದನ್ನು ಕಾಲವೇ ಹೇಳಬೇಕು. ಆದರೆ, ಇದುವರೆಗಿನ ಇತಿಹಾಸ ಅದಕ್ಕೆ ನಕಾರಾತ್ಮಕ ಉತ್ತರವನ್ನಷ್ಟೇ ನೀಡುತ್ತದೆ. ಇರಲಿ, ಇವೆಲ್ಲವೂ ನಕಾರಾತ್ಮಕ ಸಂಗತಿಗಳು. ಆದರೆ, ಈ ಸಾರಿ ಒಂದು ಬದಲಾವಣೆ ಕಂಡುಬಂದಿತು. ಅದೇನೆಂದರೆ, ರಾಜ್ಯ ಮತ್ತು ಕೇಂದ್ರದಲ್ಲಿ ಭಿನ್ನ ಪಕ್ಷಗಳ ಸರ್ಕಾರಗಳಿದ್ದರೂ, ಕೇಂದ್ರ ಸರ್ಕಾರವು ಅತ್ಯಂತ ಬೇಜವಾಬ್ದಾರಿತನದಿಂದ ನಡೆದುಕೊಂಡರೂ, ಅಂತಿಮವಾಗಿ ಕೇಂದ್ರವನ್ನೂ, ಸುಪ್ರೀಂಕೋರ್ಟನ್ನೂ ಮಣಿಸಲು ಸಾಧ್ಯವಾಗಿದೆ.

ಹೌದು. ಮೊನ್ನೆಯ (ಸೋಮವಾರದ) ಕೇಂದ್ರ ಸರ್ಕಾರದ ಅಫಿಡವಿಟ್ ಮತ್ತು ನಿನ್ನೆಯ (ಮಂಗಳವಾರದ) ಸುಪ್ರೀಂಕೋರ್ಟಿನ ಆದೇಶಗಳು ಅವೆರಡನ್ನೂ ಬಗ್ಗಿಸಲು ಸಾಧ್ಯವಾಗಿದ್ದಕ್ಕೆ ನಿದರ್ಶನ. ಈ ವಿಚಾರದಲ್ಲಿ ಕರ್ನಾಟಕ ಸರ್ಕಾರವು ತೋರಿದ ಜಾಣ್ಮೆಯನ್ನು ಮೆಚ್ಚಬೇಕು. ನಿಮ್ಮ ಆದೇಶವನ್ನು ನಾವು ಉಲ್ಲಂಘಿಸಿಯೇ ತೀರುತ್ತೇವೆ ಎಂದು ಬಹಿರಂಗವಾಗಿ ಘೋಷಿಸದೇ ಇದ್ದರೂ, 'ಈ ಸಾರಿ ಬಹುಶಃ ಕರ್ನಾಟಕ ಸರ್ಕಾರವು ಆದೇಶವನ್ನು ಉಲ್ಲಂಘಿಸುತ್ತದೆ ಮಾತ್ರವಲ್ಲ ಒಂದು ಸಾಂವಿಧಾನಿಕ ಬಿಕ್ಕಟ್ಟು ಸೃಷ್ಟಿಯಾಗುತ್ತದೆ' ಎಂಬ ವಾತಾವರಣವಂತೂ ನಿರ್ಮಾಣವಾಯಿತು. ಅದಕ್ಕೆ ಬೇಕಾದ ಪೂರಕ ಸಿದ್ಧತೆಯನ್ನು ಸರ್ಕಾರ ಮಾಡಿತ್ತು. ಸರ್ವಪಕ್ಷಗಳ ಸಭೆಯನ್ನು ಕರೆದು, ವಿಧಾನಸಭೆಯ ಅಧಿವೇಶನವನ್ನೂ ಕರೆದು ಜಾಣ್ಮೆಯ ನಿರ್ಣಯ ಅಂಗೀಕಾರವಾಗುವಂತೆ ನೋಡಿಕೊಂಡಿತು. ಅದಕ್ಕೆ ತಿರುಗೇಟು ನೀಡುವಂತೆ 'ನಿಮ್ಮ ನಿರ್ಣಯ ಇರಲಿ, ನಾವು ನ್ಯಾಯಾಂಗ ನಿಂದನೆಯ ಅಂಶವನ್ನು ಈಗಲೇ ವಿಚಾರಣೆಗೆ ತೆಗೆದುಕೊಳ್ಳುವುದಿಲ್ಲ, ಮೊದಲು ನೀರು ಬಿಟ್ಟು ಬನ್ನಿ' ಎಂದು ಸುಪ್ರೀಂಕೋರ್ಟು ಹೇಳಿತಾದರೂ, ರಾಜ್ಯ ಸರ್ಕಾರ ಅದಕ್ಕೆ ಸೊಪ್ಪು ಹಾಕಲಿಲ್ಲ, ವಾಸ್ತವದಲ್ಲಿ ಕೋರ್ಟು ಸ್ವಲ್ಪ ಮೆತ್ತಗಾಯಿತು.

ಮೇಲಿಂದ ಮೇಲೆ ಸುಪ್ರೀಂಕೋರ್ಟು ತಪ್ಪು ಆದೇಶಗಳನ್ನು ನೀಡಿದ್ದೂ ರಾಜ್ಯ ಸರ್ಕಾರಕ್ಕೆ ವರದಾನವಾಯಿತು. ಕಾವೇರಿ ನಿರ್ವಹಣಾ ಮಂಡಳಿ ಸ್ಥಾಪಿಸಬೇಕೆನ್ನುವ ಆದೇಶ ಮತ್ತು ಕಾವೇರಿ ಮೇಲುಸ್ತುವಾರಿ ಸಮಿತಿಯ ನಿರ್ಣಯವನ್ನು ತಾನೇ ಉಲ್ಲಂಘಿಸಿ ಹೆಚ್ಚಿನ ನೀರು ಬಿಡಬೇಕೆಂದು ಹೇಳಿದ್ದು ಸರ್ವೋಚ್ಚ ನ್ಯಾಯಾಲಯದ ನೈತಿಕ ಮೇಲ್ಮೆಯನ್ನು ತಗ್ಗಿಸಿತು. ಇವೆಲ್ಲಾ ಕಾರಣಗಳಿಂದ ಸರ್ಕಾರದ ಮುಖ್ಯ ಸ್ಥಾನದಲ್ಲಿದ್ದವರು ಕೋರ್ಟನ್ನು ಬಯ್ಯದಿದ್ದರೂ, ಇತರ ಕೋನಗಳಿಂದ ಅದಕ್ಕೆ ಸಾಕಷ್ಟು ಟೀಕೆ ಕೇಳಿಬಂತು. ಒಂದು ವೇಳೆ ರಾಜ್ಯ ಸರ್ಕಾರವು ಮತ್ತೆಯೂ ನೀರು ಬಿಡದಿದ್ದರೆ, ಸುಪ್ರೀಂಕೋರ್ಟು ಮತ್ತು ಕೇಂದ್ರ ಸರ್ಕಾರದ ಪರಿಸ್ಥಿತಿ ಕಷ್ಟವಾಗುತ್ತಿತ್ತು. ಸರ್ಕಾರವನ್ನು ವಜಾ ಮಾಡಿ, ರಾಜ್ಯಪಾಲರ ಆಡಳಿತದಲ್ಲಿ ನೀರು ಬಿಡಿಸುವುದು ಬಿಜೆಪಿ ಸರ್ಕಾರಕ್ಕೆ ಸುಲಭವಾಗಿರಲಿಲ್ಲ. ಸರಿಯಾಗಿ ಅದೇ ಹೊತ್ತಿಗೆ ದೇವೇಗೌಡರು ಉಪವಾಸ ಕೂತರು. ಇವೆಲ್ಲವೂ ಬಿಜೆಪಿಗೆ ನಡುಕ ಹುಟ್ಟಿಸಿತು. ಈಗಾಗಲೇ ಮಹದಾಯಿ ವಿಚಾರದಲ್ಲಿ ಉತ್ತರ ಕರ್ನಾಟಕ ಭಾಗದ ಜನರ ಆಕ್ರೋಶಕ್ಕೆ ಗುರಿಯಾಗಿರುವ ಬಿಜೆಪಿಯು ತಾನೇ ಮುಂದೆ ನಿಂತು ಎಲ್ಲವನ್ನೂ ಸರಿಪಡಿಸಬೇಕಾದ ಪರಿಸ್ಥಿತಿಗೆ ದೂಡಲ್ಪಟ್ಟಿತು.

ಹಾಗಾಗಿಯೇ ಕಾವೇರಿ ನಿರ್ವಹಣಾ ಮಂಡಳಿ ರಚನೆ ಸಾಧ್ಯವಿಲ್ಲ ಎಂಬ ಅಫಿಡವಿಟ್ ಹಾಕುವ ತೀರ್ಮಾನವನ್ನು ಅದು ಶನಿವಾರವೇ ಕೈಗೊಂಡಿತ್ತು. ಸುಪ್ರೀಂಕೋರ್ಟು ಮೆತ್ತಗಾಗುವ ಸೂಚನೆ ಸಿಕ್ಕಿದ್ದರಿಂದ, 'ಎಲ್ಲಾ ಹಾದಿಗಳನ್ನು ಮುಕ್ತವಾಗಿರಿಸುವಂತಹ' 'ರಾಜ್ಯದ ಹಿತದೃಷ್ಟಿಯಿಂದ ಮತ್ತು ರೈತರ ಬೆಳೆಗಳ ಹಿತದೃಷ್ಟಿಯಿಂದ' ಸೂಕ್ತ ತೀರ್ಮಾನ ತೆಗೆದುಕೊಳ್ಳುವ ಅಧಿಕಾರವನ್ನು ರಾಜ್ಯ ವಿಧಾನ ಮಂಡಲವು ತೆಗೆದುಕೊಂಡಿತು. ಮರುದಿನ ಸುಪ್ರೀಂಕೋರ್ಟು ಕಾವೇರಿ ನಿರ್ವಹಣಾ ಮಂಡಳಿಯ ರಚನೆಯ ಆದೇಶದಿಂದ ಹಿಂದೆ ಸರಿಯಿತು; ತಜ್ಞರ ತಂಡ ಕಳಿಸುವ ಆದೇಶವನ್ನೂ ಮಾಡಿತು; ಬಿಡಬೇಕಾದ ನೀರಿನ ಪ್ರಮಾಣವನ್ನು ದಿನಕ್ಕೆ 2,000 ಕ್ಯೂಸೆಕ್ಸ್‌ಗೆ ಇಳಿಸಿತು. ಕರ್ನಾಟಕದ ವಿಧಾನಮಂಡಲ ಗುಟುರು ಹಾಕದಿದ್ದರೆ ಇವ್ಯಾವುವೂ ಸಾಧ್ಯವಾಗುತ್ತಿರಲಿಲ್ಲ. ಸಿದ್ದರಾಮಯ್ಯನವರು ನಡೆಸಿದ ವಿವಿಧ ಸಭೆಗಳು, ದೇವೇಗೌಡರನ್ನು ಭೇಟಿ ಮಾಡಿದ್ದು, ಅವರು ಸ[…] ಸ್ಪಂದಿಸಿದ್ದು ಎಲ್ಲವೂ ಫಲಕೊಟ್ಟಿತು. ಬಿ[…] ಮುಂದೆಯೂ ಹೆಚ್ಚಿನ ಆಯ್ಕೆಗಳಿರಲಿಲ್ಲ. ಅಂತಿ[…] ಮಂಡಿಯೂರಿದ್ದು ಬಿಜೆಪಿ ಪಕ್ಷ ಮತ್ತು ಮ[…] ಸುಪ್ರೀಂಕೋರ್ಟು. ಈ ಗೆಲುವನ್ನು ತಮ್ಮ […] ಬಳಸಿಕೊಳ್ಳುವ ಜಾಣ್ಮೆ ಇರುವುದು ದೇವೇಗೌಡರಿಗ[…] ಕಾಂಗ್ರೆಸ್ ಪಕ್ಷಕ್ಕೆ ಅಂತಹ ಸಾಮರ್ಥ್ಯ ಇಲ್ಲವೇ […]

ಆದರೆ, ಈ ಇಡೀ ವಿದ್ಯಮಾನದಲ್ಲಿ ಸೋಲಿನ […] ಬಂದು ನಿಂತಿರುವುದು ರೈತ ಸಮುದಾಯ. ಇದ[…] ಯಥಾಪ್ರಕಾರ ಮರುಕಳಿಸುತ್ತಿರುವ ಸಂಗತಿಯೇ […] ನದೀ ತೀರದ (ಪಾಂಡವಪುರ ಮತ್ತು ಶ್ರೀರಂಗಪ[…] ಕೆಲವು ಭಾಗಗಳ) ಗದ್ದೆಗಳು ಮತ್ತು ವಿ.ಸಿ. ನಾಲೆ ಅ[…] ಆರಂಭದ ಭಾಗ (ಮಂಡ್ಯ ತಾಲೂಕಿನ ಸ್ವಲ್ಪ ಭಾಗ[…] ವಿಧಾನಮಂಡಲದ ಹೊಸ ನಿರ್ಣಯದ ಲಾ[…] ಸ್ವಲ್ಪಮಟ್ಟಿಗೆ ಪಡೆದುಕೊಳ್ಳಬಹುದು. ಉಳಿದಂತೆ ಮ[…] ಮತ್ತು ಮಳವಳ್ಳಿ ತಾಲೂಕಿನ ರೈತರು ಆಗಲೇ […] ಆಸೆ ಬಿಟ್ಟಿದ್ದಾರೆ. ಈಗ ಹರಿಯುವ ನೀರು ಜಾನುವಾ[…] ಸ್ವಲ್ಪ ಮೇವನ್ನು ಬೆಳೆದುಕೊಡಬಹುದು ಅಷ್ಟೇ[…] ಉಂಟಾಗುವ ಬೆಳೆ ನಷ್ಟವನ್ನು ಸರ್ಕಾರವೂ […] ಅಂದಾಜು ಮಾಡುತ್ತದೆ ಮತ್ತು ಅವರು ಪೂರಾ ನ[…] ಅಂದಾಜಿಸಿದರೂ, ಅಸಲೀ ನಷ್ಟದ 10ನೇ ಒಂದ[…] ಪರಿಹಾರ ಮಾತ್ರ ರೈತರಿಗೆ ಸಿಗುತ್ತದೆ. […] ನಡೆಯಲೇಬೇಕಾದ ಅಸಲೀ ಹೋರಾಟ […] ಸರಿಯದಂತೆ ಎಚ್ಚರ ವಹಿಸುವ ಕೆಲಸ ಎಲ್ಲರದ್ದೂ[…]

ಕಾವೇರಿಯ ಜೊತೆಗೆ ರಾಜ್ಯದ ಇತರ […] ನದೀ ಅಚ್ಚುಕಟ್ಟು ಪ್ರದೇಶದ ಕುರಿತು ಈಗೀಗ […] ಕಾಳಜಿ ವ್ಯಕ್ತವಾಗುತ್ತಿರುವುದೂ, ಆಯಾ ಭಾಗಗಳ[…] ನಿರಂತರ ಹೋರಾಟದಿಂದಾಗಿಯೇ ಎಂಬುದಂತ[…] ಆದರೂ, ಕಾವೇರಿಗೆ ತೋರಿದಷ್ಟು ಕಾಳಜಿ […] ಬಗ್ಗೆ ಆಳುವವರಿಗೆ ಇಲ್ಲವೆಂಬುದೂ ಸತ್ಯ. ಹೀಗಾ[…] ಬೀದರ್, ಗುಲ್ಬರ್ಗ, ಯಾದಗಿರಿ ಜಿಲ್ಲೆಗಳ ನೆರೆ […] ಅಷ್ಟಾಗಿ ಗಮನ ಸೆಳೆಯದೇ ಹೋಯಿತು. […] ಮತ್ತು ದುರ್ಬಲ ಮುಂಗಾರು ಮಲೆನಾ[…] ಒಳಗೊಂಡಂತೆ ರಾಜ್ಯದಲ್ಲಿ ಬಹುತೇಕ ಜಿಲ್ಲೆ[…] ಬಾಧಿಸಿದೆ. ಅದು ಒಂದಾದಮೇಲೆ ಒಂದರಂತೆ […] ರೈತಾಪಿಯನ್ನು ಕಾಡುತ್ತಿರುವ ಸಂಕಷ್ಟದ ಮುಂದ[…] ಯಾಗಿರುವುದರಿಂದ ಸರ್ಕಾರವು ಸಮರೋ[…] ಕಾರ್ಯಾಚರಣೆಗಿಳಿಯಬೇಕು. ಕಾವೇರಿ ವಿಚಾರದ […] ಗೆಲುವು ಮೂಡಿಸಿರುವ ಅಲ್ಪತೃಪ್ತಿಯು ಇವೆ[…] ಮರೆಸುತ್ತದೆ.

ಈ ವರ್ಷ ಪದೇಪದೇ ಚರ್ಚೆಗೆ ಬಂದ ಇನ್[…] ಸಂಗತಿಗೂ ನಮಗೆ ಮುಳುವಾಗಲಿದೆ. 'ನಮಗೆ ಕುಡಿ[…] ನೀರಿಲ್ಲ, ನಮಗೆ ಕುಡಿಯುವ ನೀರಿಗೇ ಸಮಸ್ಯೆಯಾ[…] ಎಂಬ ವಾದದಲ್ಲಿ ಸಮಸ್ಯೆ ಇತ್ತು. ಸಂಕಷ[…] ಹಂಚಿಕೊಳ್ಳುವುದೆಂದರೆ ಏನು? ನೀರನ್ನು […] ಹಂಚಿಕೊಳ್ಳೋಣ ಎಂದಷ್ಟೇನಾ? ಕರ್ನಾಟಕದ […] ಅಚ್ಚುಕಟ್ಟು ಪ್ರದೇಶದಲ್ಲಿ ರೈತರು ಒಂದು ಬೆಳೆ[…] ಬೆಳೆಯಲು ಸಾಧ್ಯವಾಗುತ್ತಿಲ್ಲ, ತ.ನಾಡಿನಲ್ಲಿ ಎರಡನೇ[…] ನೀರು ಕೇಳಲಾಗುತ್ತಿದೆ ಎಂಬುದನ್ನು ಹೇಳಬ[…] ರೀತಿಯಲ್ಲಿ ಹೇಳಲಿಲ್ಲ. ಸಂಕಷ್ಟದ ವರ್ಷದಲ್ಲಿ […] ಒಂದಷ್ಟು ಭಾಗ ಬೆಳೆ ನಷ್ಟವುಂಟಾದರೆ, ತ.ನಾಡಿ[…] ಬೆಳೆ ನಷ್ಟ ಉಂಟಾಗುತ್ತದೆ ಅಲ್ಲವೇ? ಹಾಗಾಗಿ, […] ಬೆಳೆಗಳಿಗೆ ನೀರಿಲ್ಲ ಎಂಬ ವಾದ ಹೆಚ್ಚು ಬರಲೀ[…]

ಬಹುಶಃ ಅದನ್ನು ಹೆಚ್ಚಿಚ್ಚು ಹೇಳಿದರೆ, ವೈ[…] ಪರಿಹಾರದ ವಾದ ಹೆಚ್ಚು ಬಲ ಪಡೆದುಕೊ[…] ಎಂಬುದು ಅಧಿಕಾರಸ್ಥರ ಆತಂಕವಿರಬಹು[…] ಸಿದ್ದರಾಮಯ್ಯನವರ ಸರ್ಕಾರ ಈ ವಿಚಾರದಲ್ಲೂ '[…] ಪ್ರಕರಣ'ವನ್ನು ನಿಭಾಯಿಸಿದಂತೆಯೇ ನಿಭಾಯಿಸ[…] ದೇವೇಗೌಡರಿಗೂ ಇದರಲ್ಲಿ ಹೆಚ್ಚಿನ ಅನುಕೂಲ[…] ರಾಜ್ಯ ಸರ್ಕಾರವು ರೈತರಿಗೆ ತನ್ನ ಪಾಲಿನ […] ಪ್ಯಾಕೇಜ್‌ಅನ್ನು ಮೊದಲು ಘೋಷಿಸಬೇಕು. ಸ[…] ಸಂಸ್ಥೆಗಳ ಸಂಪೂರ್ಣ ಸಾಲಮನ್ನಾ ಮಾಡಬೇಕು. ಕೇಂದ್ರ ಸರ್ಕಾರದ ಮೇಲೆ ವಿಶೇಷ ಪ್ಯಾಕೇಜ್‌ಗಾಗಿ […] ತರಬೇಕು. ಇದನ್ನು ಮಾಡದೇ ಇದ್ದಲ್ಲಿ, ಕಾವೇರಿ ವಿಚಾರದ ಜಾಣ್ಮೆಗೆ ಸಲ್ಲಬೇಕಾದ ಅಭಿನಂದನೆ ಅ[…] ದಕ್ಕುವುದಿಲ್ಲ.

ತುರ್ತಾದ ಈ ಸಂಗತಿಯನ್ನೂ ಒಂದು ಪಾಠ[…] ನಾವೆಲ್ಲರೂ ಪರಿಗಣಿಸಿ, ಶಾಶ್ವತ ಪರಿಹಾರಕ್ಕೆ ಚ[…] ಪ್ರಯತ್ನಗಳತ್ತ ಗಮನ ಹರಿಸಬೇಕು. ಇಲ್ಲದಿದ್ದರೆ […] ಕರೆಗೆ ನಾವು ಓಗೊಟ್ಟಂತಾಗುವುದಿಲ್ಲ.



ಸುಂಕಣ್ಣನ ಪ್ರತಿಭಟನೆ ಮತ್ತು ಅಪ್ಪಾರಾವ್‌ನ ಬಹಿಷ್ಕಾರ

ಯಾವುದೇ ಉನ್ನತ ಶಿಕ್ಷಣ ಪಡೆದಿರುವ ವ್ಯಕ್ತಿಗೆ ತನ್ನ ಡಾಕ್ಟರೇಟ್ ಪದವಿ ಸ್ವೀಕರಿಸುವುದು ಅವಿಸ್ಮರಣೀಯ ಘಳಿಗೆ. ಪ್ರತಿಯೊಬ್ಬರೂ ಆ ಕ್ಷಣದ ಫೋಟೋ ತೆಗೆಸಿಕೊಂಡು ತಮ್ಮ ಮನೆಯಲ್ಲೋ, ಆಫೀಸಿನಲ್ಲೋ ಪ್ರಮುಖ ಜಾಗದಲ್ಲಿ ಎಲ್ಲರಿಗೂ ಕಾಣಿಸುವಂತೆ ಗೋಡೆ ಮೇಲೆ ತಗುಲಿಹಾಕಿರುತ್ತಾರೆ.



ಅಂತಹ ಒಂದು ಅವಿಸ್ಮರಣೀಯ ಘಳಿಗೆ ಇತ್ತೀಚೆಗೆ ಅಕ್ಟೋಬರ್ ಒಂದರಂದು ಒಬ್ಬ ಪಿಎಚ್.ಡಿ ವಿದ್ಯಾರ್ಥಿಯ ಜೀವನದಲ್ಲೂ ಬಂತು. ಆದರೆ ಆತ ತನ್ನ ಡಾಕ್ಟರೇಟ್ ಪದವಿಯನ್ನು ತಾನು ಓದಿದ ವಿಶ್ವವಿದ್ಯಾಲಯದ ಉಪಕುಲಪತಿಯ 'ಅಮೃತಹಸ್ತ'ದಿಂದ ಎಲ್ಲರೆದುರೇ ಸ್ವೀಕರಿಸಲು ನಿರಾಕರಿಸಿದ. ಉಪಕುಲಪತಿ ಅದೆಷ್ಟೇ ಕೇಳಿಕೊಂಡರೂ ಆತ ತಮ್ಮಿಂದ ಸ್ವೀಕರಿಸುವುದಿಲ್ಲ ಎಂದು ಪಟ್ಟು ಹಿಡಿದು ಆತನ ಮುಂದೆ ಕೈಕಟ್ಟಿಕೊಂಡು ನಿಂತ. ಕೊನೆಗೆ ವಿಧಿಯಿಲ್ಲದೆ ಉಪಕುಲಪತಿ ತನ್ನ ವಿಶ್ವವಿದ್ಯಾಲಯದ ಮತ್ತೊಬ್ಬ ಅಧಿಕಾರಿಯನ್ನು ಕರೆದು ಅವರ ಕೈಗಳಿಂದ ಆ ವಿದ್ಯಾರ್ಥಿಗೆ ಆತನ ಡಾಕ್ಟರೇಟ್ ಪದವಿಯನ್ನು ಕೊಡಿಸಬೇಕಾಯಿತು. ಕೊನೆಗೂ ಆ ವಿದ್ಯಾರ್ಥಿ ತಾನು ಕಷ್ಟಪಟ್ಟು ಗಳಿಸಿದ್ದ ಡಾಕ್ಟರೇಟ್ ಪದವಿಯನ್ನು ಪಡೆದಾಗ ಸಭಾಂಗಣದಲ್ಲಿದ್ದ ಎಲ್ಲರೂ ಎದ್ದು ನಿಂತು ಚಪ್ಪಾಳೆ ತಟ್ಟಿದರು.

ಇಷ್ಟೆಲ್ಲ ಸಂಭವಿಸಿದ್ದು ಕೇವಲ 35 ಸೆಕೆಂಡುಗಳಲ್ಲಿ. ಆದರೆ ಆ ದೃಶ್ಯಾವಳಿಯು ಮಾರನೆ ದಿನದ ಬೆಳಗ್ಗೆ ಹೊತ್ತಿಗೆ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿ ಲಕ್ಷಾಂತರ ಜನರು ವೀಕ್ಷಿಸಿದ್ದರು ಮಾತ್ರವಲ್ಲ ಎಲ್ಲರೂ ಆ ವಿದ್ಯಾರ್ಥಿಯನ್ನು ಕೊಂಡಾಡಿದರು. ಆ ವಿದ್ಯಾರ್ಥಿಯ ಹೆಸರು ವೇಲ್ಪುಲ ಸುಂಕಣ್ಣ. ಆತ ಬೇರೆ ಯಾರೂ ಅಲ್ಲ, ಇದೇ ಜನವರಿಯಲ್ಲಿ ನಕ್ಷತ್ರದ ಧೂಳಾದ ಪ್ರತಿಭಾವಂತ ದಲಿತ ವಿದ್ವಾಂಸ ರೋಹಿತ್ ವೇಮುಲನ ಮಿತ್ರ.

ಕೇಂದ್ರದಲ್ಲಿ ನರಹಂತಕ ನರೇಂದ್ರ ಮೋದಿಯ ಬಿಜೆಪಿ ಪಕ್ಷ ಅಧಿಕಾರಕ್ಕೆ ಬಂದಮೇಲೆ ಹೈದರಾಬಾದ್ ಕೇಂದ್ರ ವಿಶ್ವವಿದ್ಯಾಲಯದ ಉಪಕುಲಪತಿಯಾಗಿ ವಕ್ಕರಿಸಿದವನೇ ಅಪ್ಪಾರಾವ್. ದಲಿತ ದ್ವೇಷಿಯಾದ ಈ ಅಪ್ಪಾರಾವ್ ಕೇಂದ್ರ ಮಂತ್ರಿಗಳಾದ ಬಂಡಾರು ದತ್ತಾತ್ರೇಯ ಮತ್ತು ಸ್ಮೃತಿ ಇರಾನಿಯ ಕುಮ್ಮಕ್ಕಿನಿಂದ ದಲಿತ ವಿದ್ಯಾರ್ಥಿಗಳಾದ ರೋಹಿತ್ ವೇಮುಲ ಸೇರಿದಂತೆ ಐವರಿಗೆ 'ಬಹಿಷ್ಕಾರ' ಹಾಕಿಸಿದ್ದ. ಅವರನ್ನು ವಿಶ್ವವಿದ್ಯಾಲಯದ ಹಾಸ್ಟೆಲ್, ಗ್ರಂಥಾಲಯ, ಆಡಳಿತ ಕಚೇರಿ ಮತ್ತು ಊಟದ ಕೇಂದ್ರಗಳಿಂದೆಲ್ಲ ಹೊರಹಾಕಿದ್ದ. ಜೊತೆಗೆ ಅವರ್‍ಯಾರಿಗೂ ತಿಂಗಳಾನುಗಟ್ಟಲೆ ವಿದ್ಯಾರ್ಥಿವೇತನ ಸಿಗದಂತೆ ಮಾಡಿದ್ದ. ಆಗ ಅವರೆಲ್ಲ ಬಂಡಾಯವೆದ್ದು ವಿವಿಯ ಬಯಲಲ್ಲೇ ಚಿಕ್ಕದೊಂದು ಟೆಂಟ್ ನಿರ್ಮಿಸಿಕೊಂಡು ಅದಕ್ಕೆ 'ವೇಳಿವಾಡ' (ದಲಿತರ ಕೇರಿ) ಎಂದು ಹೆಸರಿಟ್ಟು ಅಲ್ಲೇ ಠಿಕಾಣಿ ಹೂಡಿದ್ದರು. ಅವರೆಲ್ಲರೂ ತಮ್ಮ ಕುಟುಂಬದಲ್ಲಿ ವಿದ್ಯೆ ಪಡೆದ ಮೊದಲ ತಲೆಮಾರಿನವರಾಗಿದ್ದರು. ಬಡ ಹಿನ್ನೆಲೆಯಿಂದ ಬಂದಿದ್ದ ಅವರು ತಾನೆ ಅದೆಷ್ಟು ದಿನ ಇಂತಹ ಅವಮಾನ ಮತ್ತು ಸಾಂಸ್ಥಿಕ ಹಿಂಸೆಯನ್ನು ತಡೆದುಕೊಳ್ಳಬಲ್ಲರು? ಇಂತಹ ಸಾಮಾಜಿಕ ಹಿಂಸೆಗೆ ಮೊದಲು ಬಲಿಯಾದವನೇ ರೋಹಿತ್ ವೇಮುಲ. ಆತನ ಸಾವು ಇಡೀ ದೇಶವೇ ಬೆಚ್ಚಿಬೀಳುವಂತೆ ಮಾಡಿತ್ತಲ್ಲದೆ, ದೇಶದಾದ್ಯಂತ ಹಲವಾರು ವಿಶ್ವವಿದ್ಯಾಲಯಗಳಲ್ಲಿ ಪ್ರತಿಭಟನೆಗಳಿಗೂ ಕಾರಣವಾಗಿತ್ತು. ಈಗ ಕರ್ನಾಟಕದಲ್ಲಿ ನಡೆಯುತ್ತಿರುವ 'ಚಲೋ ಉಡುಪಿ' ಎಂಬ ಜಾಥಾಕ್ಕೂ ಅದು ಪ್ರೇರಣೆ ಆಗಿದೆ.

ಸಾವಿರಾರು ವರ್ಷಗಳಿಂದ ಸಾಮಾಜಿಕ, ಸಾಂಸ್ಕೃತಿಕ ಮತ್ತು ಆರ್ಥಿಕ ದಮನಕ್ಕೆ ತುತ್ತಾಗಿರುವ ಸಮುದಾಯಗಳಿಗೆ ನ್ಯಾಯ ಕೊಡಬೇಕೆಂಬ ನಿಟ್ಟಿನಲ್ಲಿ ಮೀಸಲಾತಿಯನ್ನು ಕಲ್ಪಿಸಲಾಯಿತು. ಈ ಮೀಸಲಾತಿಯಿಂದಾಗಿಯೇ ಇವತ್ತು ದಮನಿತ ವರ್ಗಗಳ ಪ್ರತಿಭಾವಂತ ಯುವಕರು ಹೈದರಾಬಾದ್ ಕೇಂದ್ರ ವಿಶ್ವವಿದ್ಯಾಲಯದಂತಹ ಪ್ರಮುಖ ಶಿಕ್ಷಣ ಕೇಂದ್ರಗಳನ್ನು ಪ್ರವೇಶಿಸುವಂತಾಗಿದೆ. ಆದರೆ ಈಗಲೂ ಈ ಶಿಕ್ಷಣ ಕೇಂದ್ರಗಳಲ್ಲಿ ಜಾತಿ ತಾರತಮ್ಯ ಲಂಗುಲಗಾಮಿಲ್ಲದೆ ನಡೆಯುತ್ತದೆ. ದಲಿತ ವಿದ್ಯಾರ್ಥಿಗಳಿಗೆ ಸರಿಯಾದ ಸಮಯಕ್ಕೆ ವೇತನ ಕೊಡದಿರುವುದು, ಕೊಟ್ಟರೂ ಅವರಿಗೆ ಭಿಕ್ಷೆ ಬಿಸಾಕುತ್ತಿರುವಂತೆ ವರ್ತಿಸುವುದು, ಸೂಕ್ತ ಗೈಡ್‌ಗಳಿಲ್ಲದೆ ಅವರು ಪರದಾಡುವಂತೆ ಮಾಡುವುದು, ಅವರನ್ನು ಅವಮಾನಿಸುವ ಮೂಲಕ ಅವರು ಆತ್ಮಸ್ಥೈರ್ಯ ಕಳೆದುಕೊಂಡು ಕಡಿಮೆ ಅಂಕ ಗಳಿಸುವಂತೆ ನೋಡಿಕೊಳ್ಳುವುದು, ಹಾಸ್ಟಲ್ ಮೆಸ್‌ಗಳಲ್ಲಿ ಪೌಷ್ಟಿಕ ಆಹಾರ ಸಿಗದಂತೆ ಎಚ್ಚರ ವಹಿಸುವುದು, ಅದರ ಬಗ್ಗೆ ಪ್ರತಿಭಟಿಸಿದರೆ ದಲಿತ ಗೂಂಡಾಗಳನ್ನು ಛೂಬಿಟ್ಟು ಪ್ರತಿಭಟನಾಕಾರರನ್ನು ಥಳಿಸುವುದು... ಹೀಗೆ ಚಿತ್ರವಿಚಿತ್ರ ರೀತಿಯಲ್ಲಿ ಹಿಂಸಿಸಲಾಗುತ್ತದೆ. ಈಗ ಮೋದಿ ಸರ್ಕಾರ ಅಧಿಕಾರಕ್ಕೆ ಬಂದಮೇಲೆ ಚಕಾರವೆತ್ತಿದ ದಲಿತ ವಿದ್ಯಾರ್ಥಿಗಳ ಮೇಲೆ ದೇಶದ್ರೋಹ, ಜಾತಿವಾದದಂತಹ ಆರೋಪ ಹೊರಿಸುವುದೂ ನಡೆದಿದೆ. ಇದೆಲ್ಲದರಿಂದಾಗಿ ಹಲವರು ಶಿಕ್ಷಣ ಪಡೆದರೂ ಸೂಕ್ತ ವೃತ್ತಿಗೆ ಅನರ್ಹರಾಗಿ ವಿಶ್ವವಿದ್ಯಾಲಯಗಳಿಂದ ಹೊರಹೊಮ್ಮುತ್ತಾರೆ, ಇನ್ನೂ ಕೆಲವರು ಶಿಕ್ಷಣವನ್ನೇ ತೊರೆಯುತ್ತಾರೆ, ರೋಹಿತ್ ವೇಮುಲ ತರಹದವರು ತಮ್ಮ ಪ್ರಾಣವನ್ನೇ ಕಳೆದುಕೊಳ್ಳುತ್ತಾರೆ.



ಇವತ್ತು ನಮ್ಮ ವಿಶ್ವವಿದ್ಯಾಲಯಗಳಲ್ಲಿ ಪ್ರತಿಭಾವಂತ ದಲಿತ ವಿದ್ಯಾರ್ಥಿಗಳ ಮೇಲಾಗುತ್ತಿರುವ ಎಲ್ಲಾ ತರಹದ ದಮನ, ಅನ್ಯಾಯ ಮತ್ತು ಅವಮಾನಗಳಿಗೆ ಸಾಂಕೇತಿಕ ಕಾರಣೀಭೂತನಾಗಿ ಅಪ್ಪಾರಾವ್ ನಿಂತಿದ್ದಾನೆ. ಆದರೆ ಆತ ಎಂತಹ ಹುಂಬ ಎಂದರೆ ಆತನ ವಿರುದ್ಧ ಪೊಲೀಸ್ ಕೇಸ್‌ಗಳು ದಾಖಲಾಗಿದ್ದರೂ, ಆತ ಉಪಕುಲಪತಿ ಸ್ಥಾನದಿಂದ ತೊಲಗಬೇಕೆಂಬ ಒತ್ತಾಯಗಳಿದ್ದರೂ ಆತ ಅಲ್ಲಾಡದೆ ಇನ್ನೂ ಅಧಿಕಾರದಲ್ಲಿ ಉಳಿದಿದ್ದಾನೆ.

ರೋಹಿತ್ ವೇಮುಲನ ಸಾಂಸ್ಥಿಕ ಕೊಲೆಯ ನಂತರ ಸತ್ಯಸಂಶೋಧನಾ ತಂಡದೊಂದಿಗೆ ಆ ವಿಶ್ವವಿದ್ಯಾಲಯಕ್ಕೆ ಭೇಟಿ ನೀಡಿದ್ದ ಚಿಂತಕ ಮತ್ತು ಲೇಖಕ ಆನಂದ್ ತೇಲ್ತುಂಡೆ ಅವರು ಅಪ್ಪಾರಾವ್‌ಗೆ ಕೇಳಿದ ಮೊದಲ ಪ್ರಶ್ನೆ "ಯಾವಾಗ ನೀನು ರಾಜೀನಾಮೆ ನೀಡುತ್ತೀಯಾ?" ಎಂದು. ಆಗ ಈ ನಾಚಿಕೆಗೆಟ್ಟವ ರಾಜೀನಾಮೆ ಕೊಟ್ಟಿರಲಿಲ್ಲ. ಬದಲಾಗಿ (ದಿವೈರ್.ಇನ್ ಎಂಬ ವೆಬ್‌ಸೈಟ್‌ನಲ್ಲಿ ಕಲ್ಪನಾ ಕನಾಬಿರನ್ ಅವರು ಬರೆದಿರುವಂತೆ) ತನ್ನ ವಿರುದ್ಧದ ಪ್ರತಿಭಟನೆಗಳಲ್ಲಿ ವಿದ್ಯಾರ್ಥಿಗಳೊಂದಿಗೆ ಭಾಗವಹಿಸಿದ ಉಪನ್ಯಾಸಕರ ವಿರುದ್ಧ ಪೊಲೀಸರಿಗೆ ದೂರು ಕೊಟ್ಟ, ಆ ದೂರನ್ನು ಆಧರಿಸಿ ಪೊಲೀಸರು ಆ ಉಪನ್ಯಾಸಕರನ್ನು ಬಂಧಿಸಿದರು, ಬಂಧನವಾಗಿದ್ದಕ್ಕೆ ಆ ಉಪನ್ಯಾಸಕರನ್ನೇ ವಿಶ್ವವಿದ್ಯಾಲಯದಿಂದ ವಜಾಗೊಳಿಸಿದ. ಆ ಮೂಲಕ ತನ್ನ ವಿರುದ್ಧ ವಿದ್ಯಾರ್ಥಿಗಳಿರಲಿ, ಉಪನ್ಯಾಸಕರೂ ಚಕಾರವೆತ್ತಿದರೆ ಅವರನ್ನು ಹೇಗೆ ಬಲಿ ಕೊಡಲಾಗುತ್ತದೆ ಎಂದು ತೋರಿಸಿದ.

ಇಂಥವನಿಂದ ಡಾಕ್ಟರೇಟ್ ಪದವಿ ಸ್ವೀಕನ್ನಿಸಬೇಕು ಎಂದಾದಾಗ ವೇಲ್ಪುಲ ಸುಂಕಣ್ಣನಿಗೆ ಹೇಗೆನಿಸಿರಬೇಕು. ಆತನೇ ಹೇಳಿರುವಂತೆ ಆತ ವೇದಿಕೆಯ ಮೇಲೆ ಹೋಗಿ ನಿಲ್ಲುವವರೆಗೂ ಹೀಗೇ ಮಾಡಬೇಕು ಎಂದೇನು ಮುಂದಾ ಲೋಚನೆ ಇರಲಿಲ್ಲವಂತೆ. ಆದರೆ ಆ ಕ್ಷಣದಲ್ಲಿ ಆತನಿಗೆ ಅಪ್ಪಾರಾವ್‌ನ ಕೈಯಿಂದ ತನ್ನ ಡಾಕ್ಟರೇಟ್ ಪದವಿ ಸ್ವೀಕರಿಸುವುದು ಅಸಾಧ್ಯ ಎನಿಸಿದ್ದರಿಂದ ಹಾಗೆ ಮಾಡಿದನಂತೆ. ಅದೇನೇ ಇರಲಿ ಆತ ಮಾಡಿದ್ದು ಸರಿಯಾದದ್ದು ಮಾತ್ರವಲ್ಲ ಶ್ಲಾಘನೀಯ ಕೂಡ. ಯಾಕೆಂದರೆ "ದಲಿತ ವಿದ್ಯಾರ್ಥಿಗಳನ್ನು ಅವಮಾನಿಸುವ, ದನಿ ಎತ್ತಿದವರನ್ನು ದಮನಿಸುವ, ಶಿಕ್ಷಣ ಎಂದರೆ ಬರೀ ಉರುಹಚ್ಚಿ ಹೇಳುವುದೇ ಹೊರತು ಪ್ರಶ್ನಿಸುವುದಲ್ಲ ಎಂದು ನಂಬಿರುವ, ಅಸಮಾನತೆಯನ್ನು ಪೋಷಿಸುವ, ರೋಹಿತ್ ವೇಮುಲನ ರಕ್ತವನ್ನು ನಿನ್ನ ಕೈಗಳಿಗೆ ಮೆತ್ತಿಕೊಂಡಿರುವ ನಿನ್ನಂತಹವನಿಂದ ನಾನು ಎಲ್ಲಾ ತರಹದ ಮಾನಸಿಕ ಹಿಂಸೆ, ದೈಹಿಕ ಅವಮಾನವನ್ನೂ ಸಹಿಸಿ, ಕಷ್ಟಪಟ್ಟು ಓದಿ ಪಡೆದಿರುವ ಈ ಡಾಕ್ಟರೇಟ್‌ಅನ್ನು ಸ್ವೀಕರಿಸಲಾರೆ. ಹಾಗೊಮ್ಮೆ ಸ್ವೀಕರಿಸಿದರೆ ನನ್ನ ಡಾಕ್ಟರೇಟ್ ಪದವಿಗೇ ಕಳಂಕ ತಂದುಕೊಂಡಂತಾಗುತ್ತದೆ" ಎಂಬ ಸಂದೇಶವನ್ನು ಸುಂಕಣ್ಣ ಇವತ್ತು ಬರೀ ಅಪ್ಪಾರಾವ್ ಎಂಬಾತನಿಗೆ ಮಾತ್ರ ರವಾನಿಸಿಲ್ಲ, ಬದಲಾಗಿ ಆತ ಪ್ರತಿನಿಧಿಸುವ ಎಲ್ಲಾ ಮೇಲ್ವರ್ಗ ಮತ್ತು ಜಾತಿಯವರ ವಿರುದ್ಧವೂ ಮೆಲುದನಿಯಲ್ಲೇ ದೊಡ್ಡ ಧಿಕ್ಕಾರವನ್ನು ಹಾಕಿದ್ದಾನೆ.

• ಗೌರಿ ಲಂಕೇಶ್

editorlankesh@gmail.com


ಜೊತೆಗೆ ಸುಂಕಣ್ಣ ಇನ್ನೊಂದು ಮುಖ್ಯ ಸಂದೇಶವನ್ನೂ ರವಾನಿಸಿದ್ದಾನೆ. ಅದೇನೆಂದರೆ "ಅಪ್ಪಾರಾವ್, ನೀನು ಉಪಕುಲಪತಿ ಸ್ಥಾನದಿಂದ ತೊಲಗದಿದ್ದರೂ, ನನ್ನಂತಹವರ ಪಾಲಿಗೆ ನೀನು ಅಪ್ರಸ್ತುತ. ನಾವೆಲ್ಲರೂ ನಿನ್ನನ್ನು ಬಹಿಷ್ಕರಿಸಿದ್ದೇವೆ" ಎಂಬುದನ್ನೂ ಸುಂಕಣ್ಣ ದಿಟ್ಟವಾಗಿ ಹೇಳಿದ್ದಾನೆ.

ರೋಹಿತ್ ವೇಮುಲ ಇನ್ನೂ ಜೀವಂತ ಎಂಬುದಕ್ಕೆ ವೇಲ್ಪುಲ ಸುಂಕಣ್ಣನೇ ಸಾಕ್ಷಿ.

ಈ ಯುವಕನಿಗೊಂದು ದೊಡ್ಡ ಸಲಾಂ. ■

ಚಲೋ ಉಡುಪಿ ಜಾಥಾದ ಆರಂಭದಲ್ಲಿ ದೇವನೂರ ಮಾತು

ಭಾರತದಲ್ಲಿ ಭಯೋತ್ಪಾದನೆ ಹೆಚ್ಚುತ್ತಿದೆ. ಅದರ ಜೊತೆಗೆ ಇಂದು ನಕಲಿ ಗೋ ರಕ್ಷಕರಿಂದ ಗೋ ಭಯೋತ್ಪಾದನೆ ಹೆಚ್ಚುತ್ತಿದೆ. ವಿಶ್ವಕ್ಕೆ ಹೊಸದೊಂದು ಗೋ ಭಯೋತ್ಪಾದನೆಯನ್ನು ಭಾರತ ನೀಡುತ್ತಿದೆ. ಭಾರತದಲ್ಲಿ ಸತ್ತಿರುವ ಪ್ರೇತಾತ್ಮಗಳು ಹೆಚ್ಚು ಕ್ರಿಯಾಶೀಲವಾಗಿವೆ. ಅವು ಮನುಷ್ಯನ ಮೈದುಂಬಿಕೊಂಡು ಚೇಷ್ಟೆ ಮಾಡುತ್ತಿವೆ. ಇಂದು ಬದುಕಿರುವವರು ಎಚ್ಚರಗೊಳ್ಳಬೇಕಿದೆ. ಪ್ರಜ್ಞೆ ಪಡೆದುಕೊಳ್ಳಬೇಕಿದೆ. ಇಲ್ಲದೇ ಇದ್ದರೆ ಯಾರು ಬದುಕಿದ್ದಾರೆ ಯಾರು ಸತ್ತಿದ್ದಾರೆ ಗೊತ್ತಾಗುವುದಿಲ್ಲ, ಭಾರತದಲ್ಲಿ ಒಂದು ಆತ್ಮ ತುಂಡು ಬಿದ್ದಿದೆ. ಅದು ವರ್ಷಕ್ಕೊಮ್ಮೆ ಭೂಮಿ ಮೇಲಕ್ಕೆ ಬರುತ್ತದೆ. ಅದು ಯಾವುದಪ್ಪ ಅಂದರೆ ಬಲಿ ಚಕ್ರವರ್ತಿ. ಒಂದು ಮಲೆಯಾಳಂನ ಓಣಂ ಪದ್ಯದ ಪ್ರಕಾರ ಬಲಿ ರಾಜ್ಯವಾಳುವಾಗ ಎಲ್ಲರೂ ಸಮಾನರಾಗಿದ್ದರು. ಅವರಿಗೆ ಕೆಡಕು ಆಗುತ್ತಿರಲಿಲ್ಲ, ಆ ಕಾಲದಲ್ಲಿ ಸುಳ್ಳು ಆಶ್ವಾಸನೆಗಳು ಇರಲಿಲ್ಲ ಮತ್ತು ವಂಚನೆ ಇರಲಿಲ್ಲ. ಎಲ್ಲಾ ಜನ ಸೇರಿ ಒಂದೇ ಜಾತಿಯಾಗಿದ್ದರು. ಇದೊಂದು ಹಾಡು ಸಾಕು ನಮಗೆ ನಾಡು ಕಟ್ಟಲಿಕ್ಕೆ. ಇಂತಹ ಬಲಿ ಚಕ್ರವರ್ತಿಯನ್ನು ಭಾರತ ತುಳಿದು ಹಾಕಿಬಿಟ್ಟಿದೆ.




ನಾನು ಯೋಚನೆ ಮಾಡಿದೆ. ಏನೇನು ಇರಬಹುದು ಆವಾಗ ಅಂತ. ಮಾತಿಗೆ ತಪ್ಪದ, ವಚನಭ್ರಷ್ಟನಾಗದ ಬಲಿ ಚಕ್ರವರ್ತಿಯನ್ನು ಒಂದು ಮುಗ್ಧ ಮಗುವಿನ ಮೂಲಕ ಮಾತಿಗೆ ಸಿಕ್ಕಿಸಿಬಿಟ್ಟು, ವಶ ತಗೊಂಡು ಆತನನ್ನು ನೆಲಮಾಳಿಗೆಯಲ್ಲಿಟ್ಟು ಬಿಟ್ಟರು. ಜನಸಮುದಾಯ ಭುಗಿಲೆದ್ದಾಗ ಅವರ ಆಕ್ರೋಶ ತಣಿಸಲಿಕ್ಕೆ ಆಯ್ತಪ್ಪ ವರ್ಷಕ್ಕೊಮ್ಮೆ ಬಂದು ಮುಖ ತೋರಿಸ್ತಾನೆ ಅಂತ ಜನಗಳಿಗೆ ಹೇಳಿ ಸಮಾಧಾನ ಮಾಡಿದ್ದಾರೆ.

ಆ ಬಲಿ ಚಕ್ರವರ್ತಿ ಓಣಂ ದಿನ ಸಂಭ್ರಮದಿಂದ ನೃತ್ಯ ಮಾಡುತ್ತಾರೆ. ನೀವು ನನ್ನನ್ನು ಹೊರಗಡೆ ಬಿಡುವ ದಿನ ಯಾರು ಅಳಬಾರದು ಎಂದಿದ್ದಾನೆ. ಅಂತಹ ದೊಡ್ಡ ವ್ಯಕ್ತಿತ್ವ ಆತನದು. ಇಂದು ಭಾರತದಲ್ಲಿ ಪ್ರೀತಿಸಲು ಸಹ ಬಿಡದ ಪರಿಸ್ಥಿತಿ ಇದೆ. ಇಂತಹ ಸಂದರ್ಭದಲ್ಲಿ ನೀವು ಹೊಸ ಅಕ್ಷರಗಳನ್ನು ಬರೆಯುತ್ತಿದ್ದೀರಿ. ನಿಮಗೆ ವಂದನೆಗಳು.

■ ದೇವನೂರ ಮಹಾದೇವ


ಅಗಲಿದ ಮಿತ್ರ ಯೂಸಫ್ ಅರಕಲ್



ಖ್ಯಾತ ಕಲಾವಿದ ಯೂಸಫ್ ಅರಕಲ್ ನನ್ನ ಹಲವು ದಶಕಗಳ ಮಿತ್ರ. ನನಗಿಂತ 16 ವರ್ಷ ಹಿರಿಯರಾಗಿದ್ದರೂ, ಅಂತರ ರಾಷ್ಟ್ರೀಯ ಮಟ್ಟದಲ್ಲಿ ಅವರು ಖ್ಯಾತಿ ಪಡೆದಿದ್ದರೂ ಅವರು ಯಾವಾಗಲೂ ನನ್ನನ್ನು ತಮ್ಮ ಸಮಾನಳು ಎಂಬಂತೆ ನನ್ನೊಂದಿಗೆ ನಡೆದುಕೊಳ್ಳುತ್ತಿದ್ದರು.

ಮೂಲತಃ ಕೇರಳದವರಾದ ಅರಕಲ್ ಕೇರಳ ರಾಜ್ಯವನ್ನಾಳಿದ ಏಕೈಕ ಮುಸಲ್ಮಾನ ರಾಜವಂಶದ ಕುಡಿಯಾಗಿದ್ದರು. ಚಿತ್ರಕಲೆಯಲ್ಲಿ ಬಾಲ್ಯದಿಂದಲೇ ಆಸಕ್ತಿ ಹೊಂದಿದ್ದ ಅವರು ತಮ್ಮ 17ನೇ ವಯಸ್ಸಿನಲ್ಲೇ ಬೆಂಗಳೂರಿಗೆ ಓಡಿ ಬಂದಿದ್ದರು. ಅಲ್ಲಿಇಲ್ಲಿ ಚಿಕ್ಕಪುಟ್ಟ ಕೆಲಸ ಮಾಡುತ್ತಾ ಚಿತ್ರಕಲಾ ಪರಿಷತ್ತಿನಿಂದ ಪದವಿ ಪಡೆದಿದ್ದರು. ನನಗೆ ಅವರ ಪರಿಚಯ ಆದಾಗ ಅವರಾಗಲೇ ಅಪಾರ ಖ್ಯಾತಿ ಪಡೆದಿದ್ದರು. ಹೀಗೆ ಒಮ್ಮೆ ಅವರೊಂದಿಗೆ ಹೋಟೆಲ್ ಒಂದರಲ್ಲಿ ಕಾಫಿ ಹೀರುತ್ತಿದ್ದಾಗ "ನೀವು ನನ್ನ ಮಿತ್ರ. ಆದರೆ ನಿಮ್ಮ ಕಲೆಯನ್ನು ಖರೀದಿಸುವಷ್ಟು ಹಣ ನನ್ನಲ್ಲಿಲ್ಲ" ಎಂದಿದ್ದೆ. ಅದಾದ ಕೆಲವು ದಿನಗಳ ನಂತರ ನನಗೆ ಫೋನ್ ಮಾಡಿ "ಕಾಫಿ ಕುಡಿಯೋಣ ಬಾ ಗೌರಿ" ಎಂದಿದ್ದರು ಅರಕಲ್. ನಾನು ಅವರನ್ನು ಭೇಟಿ ಆದಾಗ ನನಗೊಂದು ಅಚ್ಚರಿ ಕಾದಿತ್ತು, ಅವರು ನನಗಾಗಿ ಒಂದು ಆಯಿಲ್ ಪೈಂಟಿಂಗ್ ಮಾಡಿ ತಂದಿದ್ದರು. "ತಗೋ, ಇದು ನಿನಗೆ" ಎಂದು ನಗುತ್ತಾ ಕೊಟ್ಟಿದ್ದರು. ಅಷ್ಟು ಸೂಕ್ಷ್ಮ ವ್ಯಕ್ತಿತ್ವ ಅವರದ್ದು.


ಅಪ್ಪನ ಬಗ್ಗೆಯೂ ಅರಕಲ್ ಅವರಿಗೆ ಅಪಾರ ಅಭಿಮಾನ ಮತ್ತು ಪ್ರೀತಿ ಇತ್ತು. ಒಮ್ಮೆ ಅಪ್ಪನ 'ಬಿರುಕು' ಕಾದಂಬರಿಯ ಮುಖಪುಟಕ್ಕೆ ಸೂಕ್ತವಾದ ಚಿತ್ರಕ್ಕಾಗಿ ಹುಡುಕಾಟ ನಡೆಸುತ್ತಿದ್ದಾರೆ ಇಂಟರ್‌ನೆಟ್‌ನಲ್ಲಿ ಒಂದು ಚಿತ್ರ ನನ್ನ ಗಮನ ಸೆಳೆಯಿತು. ನೋಡಿದರೆ ಅದು ಅರಕಲ್ ಅವರು ರಚಿಸಿದ್ದಾಗಿತ್ತು. ಆಗ ನಾನು ಅವರಿಗೆ ಫೋನ್ ಮಾಡಿ "ನಿಮ್ಮ ಈ ಕಲಾಕೃತಿಯನ್ನು ಅಪ್ಪನ ಕಾದಂಬರಿ ಮುಖಪುಟಕ್ಕೆ ಉಪಯೋಗಿಸಲೇ?" ಎಂದು ಕೇಳಿದೆ. ಅದಕ್ಕೆ ಅವರು "ಖಂಡಿತವಾಗಿಯೂ ಉಪಯೋಗಿಸಿಕೋ ಗೌರಿ. ಅಷ್ಟೇ ಅಲ್ಲ, ನನ್ನ ಹಲವಾರು ಕಲಾಕೃತಿಗಳ ಚಿತ್ರವಿರುವ ಪುಸ್ತಕವನ್ನು ನಿನಗೆ ಕಳುಹಿಸಿಕೊಡುತ್ತೇನೆ. ನಿನಗೆ ಯಾವುದು ಇಷ್ಟವಾಗುತ್ತೋ, ಯಾವುದು ಸೂಕ್ತ ಅನ್ನಿಸುತ್ತದೆಯೋ ಅದನ್ನು ನೀನು ಬಳಸಬಹುದು" ಎಂದಿದ್ದರೆ ಅರಕಲ್ ಎಂದಿನ ಅದೇ ಪ್ರೀತಿಯಿಂದ.



ಇವತ್ತು ಮಂಗಳವಾರ ಬೆಳಗ್ಗೆ ನನ್ನ ಮಿತ್ರ ಅರಕಲ್ ತಮ್ಮ 70ನೇ ವಯಸ್ಸಿನಲ್ಲಿ ನಮ್ಮನ್ನೆಲ್ಲ ಅಗಲಿದ್ದಾರೆ. ಅವರಂತಹ ಪ್ರತಿಭಾವಂತ ಮತ್ತು ಪ್ರೀತಿಯ ಮಿತ್ರನನ್ನ ಕಳೆದುಕೊಂಡ ನಾನು ಬಡವಳಾಗಿದ್ದೇನೆ.

■ ಗೌರಿ

ಸುಳ್ಯ: ವಂಚಕ ಇಸ್ಮಾಯಿಲ್‌ನ ಕೊಂದವರ್ಯಾರು



ಇಸ್ಮಾಯಿಲ್



ಕೊಲೆಯಾದ ಸ್ಥಳ- ಇನ್ನೋವಾ ಕಾರು ಡೆಡ್ ಬಾಡಿ



ಇಸ್ಮಾಯಿಲ್ ದಂಪತಿ

ಅದು ಶುಭ ಶುಕ್ರವಾರ. ಕಳೆದ ಸೆಪ್ಟೆಂಬರ್ ತಿಂಗಳ ಇಪ್ಪತ್ತೊಂಬತ್ತನೇ ದಿನ. ಮಟಮಟ ಮಧ್ಯಾಹ್ನ. ದಿನಕ್ಕೆ ಮೂರು ಬಾರಿ ನಮಾಜು ಮಾಡುವ ಸುಳ್ಯದ ನೆಲ್ಯಮಜಲು ಎಂಬ ಹಳ್ಳಿಯ ಮಹಾವಂಚಕ ಗಡ್ಡ ಇಸ್ಮಾಯಿಲ್ ಐವರ್ನಾಡು ಜುಮ್ಮಾ ಮಸೀದಿಗೆ ಹೋಗಿದ್ದಾನೆ. ಸದಾ ಒಂದಿಲ್ಲೊಂದು ಕ್ರಿಮಿನಲ್ ಕರಾಮತ್ತಿನಲ್ಲಿ ನಿರತನಾಗಿರುತ್ತಿದ್ದ ಈ ರೌಡಿ ಶೀಟರ್ ಆ ಕಿರಾತಕತನದಿಂದಲೇ ಊರು ತುಂಬ ಶತ್ರುಗಳನ್ನು ಸೃಷ್ಟಿಸಿಕೊಂಡಿದ್ದ. ಕಂಡ-ಕಂಡವರ ಹೆಣ್ಣು-ಹೊನ್ನು-ಮಣ್ಣಿನ ಮೇಲೆ ಕಣ್ಣು ಹಾಕುತ್ತಿದ್ದ ಇಸ್ಮಾಯಿಲ್‌ನ ಕತ್ತರಿಸಿ ಎಸೆಯುವ ಸ್ಕೆಚ್ ಹಾಕಿಕೊಂಡಿದ್ದ. ಹಂತಕ ಪಡೆಯೊಂದು ಮಸೀದಿ ಮಗ್ಗುಲಲ್ಲೇ ಅವಿತುಕೊಂಡಿತ್ತು. ಸಾವಿನ ಕರೆಗೆ ಹೊರಬಂದಂತೆ ಇಸ್ಮಾಯಿಲ್ ಮಸೀದಿಯಿಂದ ಆಚೆ ಬಂದಿದ್ದಾನೆ. ಕೊಲೆಗಡುಕರು ಆತನ ಅಟ್ಟಾಡಿಸಿ ಕೊಚ್ಚಿ-ಕೊಚ್ಚಿ ಕೊಂದೆಸೆದು ಪರಾರಿಯಾಗಿ ಬಿಡುತ್ತಾರೆ....

ಇಸ್ಮಾಯಿಲ್ ಜಾತಕ

ಬೆಣ್ಣೆಯಿಂದ ಕೂದಲು ತೆಗೆದಂಥ ಗಿಲೀಟು ಮಾತುಗಾರಿಕೆಯ ಇಸ್ಮಾಯಿಲ್ ಸುಳ್ಯ-ಪುತ್ತೂರು ಸೀಮೆಯಲ್ಲಿ ಕುಖ್ಯಾತ ಕಾಂಗ್ರೆಸ್ ಪುಢಾರಿ ಎಂದೇ ಗುರುತಿಸಿಕೊಂಡಿದ್ದ. ಸದಾ ಬೆಳ್ಳಬೆಳ್ಳಗಿನ ಬಟ್ಟೆ ತೊಟ್ಟು ಅಚ್ಚ ಬಿಳಿ ಇನ್ನೋವಾ ಕಾರಲ್ಲೇ ಅಂಡಲೆಯುತ್ತಿದ್ದ ಈತನ ಇತಿಹಾಸ-ಭೂಗೋಳ ಮಾತ್ರ ಕಡು ಕಪ್ಪು-ಕಪ್ಪು! ಯಾರ್‍ಯಾರ ತಲೆಗೆ ಯಾವ್ಯಾವ ಸೈಜಿನ ಟೋಪಿ ಇಡಬಹುದೆಂಬ ಕಲೆ ಕರಗತ ಮಾಡಿಕೊಂಡಿದ್ದ ಇಸ್ಮಾಯಿಲ್ ಸ್ಥಳೀಯ ಕಾಂಗ್ರೆಸ್‌ನಲ್ಲಿ ಸಕ್ರಿಯವಾಗೇನೂ ಇರಲಿಲ್ಲ. ಆದರೆ ಬೆಂಗಳೂರು-ದಿಲ್ಲಿಯ ಕಾಂಗ್ರೆಸ್ ಕಿಂಗ್‌ಗಳ ಹೆಸರು ಬಳಸಿಕೊಂಡು 'ವಿಶಿಷ್ಟ' ಪ್ರಭಾವಶಾಲಿಯಾಗಿ ಹೊರಹೊಮ್ಮಿದ್ದ.

ಇಸ್ಮಾಯಿಲ್‌ನ ಬಗಲಲ್ಲಿ ಸದಾ ಸುರಸುಂದರಿಯಾದ ಹೆಂಡತಿ ಇರುತ್ತಿದ್ದಳು. ಬೆಳ್ಳಾರೆ ಗ್ರಾಮ ಪಂಚಾಯ್ತಿಗೆ ಸತತ ನಾಲ್ಕು ಸಲ ಗೆದ್ದು ಬಂದಿದ್ದ ಈಕೆ ಒಮ್ಮೆ ಅಧ್ಯಕ್ಷೆಯೂ ಆಗಿದ್ದಳು. ಗಂಡನಿಗಿಂತಲೂ ಚಿಮಕ್ ಮತ್ತು ಚಾಲಾಕಿ ಈ ವಹೀದಾ. ಹೀಗಾಗಿ ಇಸ್ಮಾಯಿಲ್ ಪಾಲಿಗೆ ಹೆಂಡತಿ ನಡೆದಾಡುವ ಚೆಕ್‌ಬುಕ್‌ನಂತಾಗಿದ್ದಳು. ಆತನ ಎಲ್ಲ ಗೋಲ್‌ಮಾಲ್ ಕಾರ್ಯಾಚರಣೆಗಳೂ ನಗದಾಗುತ್ತಿದ್ದುದು ವಹೀದಾ ಚಲಾವಣೆಯಿಂದಲೇ! ವಹೀದಾಳ ಬೆಡಗು-ಬಿನ್ನಾಣದಿಂದಾಗಿಯೇ ಇಸ್ಮಾಯಿಲ್ ಬೆಂಗಳೂರಿನ ಕಾಂಗ್ರೆಸ್ ಶಕ್ತಿಕೇಂದ್ರದಲ್ಲಿ ಚಿರಪರಿಚಿತನಾಗಿ ಹೋಗಿದ್ದ.

ಹಾಗಂತ ಇಸ್ಮಾಯಿಲ್‌ನ ಕಂಡರೆ ಸ್ಥಳೀಯ ಮಂತ್ರಿ ರಮಾನಾಥ ರೈ ಆದಿಯಾಗಿ ಯಾವ ಶಾಸಕನಿಗೂ ಆಗುತ್ತಿರಲಿಲ್ಲ. ತನ್ನ ತಲೆಹಿಡುಕ ನಡೆಯಿಂದ ಬೆಂಗಳೂರು ಮಟ್ಟದಲ್ಲೇ ಬೆಳೆದುನಿಂತಿದ್ದ ಇಸ್ಮಾಯಿಲ್ ಜಿಲ್ಲೆಯ ಕಾಂಗ್ರೆಸ್ ನಾಯಕರಿಗ್ಯಾರಿಗೂ ಕ್ಯಾರೇ ಎನ್ನುತ್ತಿರಲಿಲ್ಲ. ವಹೀದಾ ಕಾಂಗ್ರೆಸ್ ನಾಯಕರ ನಂಟಿನಿಂದ ಸರ್ಕಾರದ ಹಲವು ನಿಗಮಗಳಲ್ಲಿ ಸದಸ್ಯೆಯಾಗಿದ್ದರೆ, ಗಂಡನನ್ನು ಕೆಪಿಸಿಸಿಯ ಅಲ್ಪಸಂಖ್ಯಾತ ಘಟಕದ ಕರಾವಳಿ ವಿಭಾಗದ ಅಧ್ಯಕ್ಷನನ್ನಾಗಿ ನೇಮಕ ಮಾಡಿಸಿದ್ದರು. ಈ ಗಂಡ-ಹೆಂಡತಿ ಅದೆಷ್ಟು ಆ್ಯಂಟಿ ಇಮೇಜು ಬೆಳೆಸಿಕೊಂಡಿದ್ದಾರೆಂದರೆ ಸ್ಥಳೀಯ ಮಂತ್ರಿ ರಮಾನಾಥ ರೈ-ಶಾಸಕಿ ಶಕುಂತಲಾ ಶೆಟ್ಟಿಯಂಥವರ ಹಂಗಿಲ್ಲದೆ ಅಧಿಕಾರಿಗಳ ಬಳಸಿಕೊಂಡು ದಗಲುಬಾಜಿ ದಂಧೆ ಸಾಂಗೋಪಾಂಗವಾಗಿ ನಡೆಸಿಕೊಂಡು ಬಂದಿದ್ದರು!

ಎರಡು ವರ್ಷದ ಹಿಂದಾಗಿತ್ತು ಅಟ್ಯಾಕ್!

ಮೋಸ-ವಂಚನೆ-ದಗಾ ದಂಧೆ ಮಾಡಿಕೊಂಡಿದ್ದ ನಡು ವಯಸ್ಸಿನ ಇಸ್ಮಾಯಿಲ್‌ನ ಖತರ್‌ನಾಕ್ ಕರಾಮತ್ತುಗಳೆಲ್ಲ ಜೋರಾಗಿತ್ತು, ಆತನ ಹೆಂಡತಿ ವಹೀದಾ ಬೆಳ್ಳಾರೆ ಗ್ರಾಮ ಪಂಚಾಯ್ತಿ ಅಧ್ಯಕ್ಷಳಾದ ನಂತರ ಆತ ದಿನ-ದಿನವೂ ಪುಂಡಾಟವನ್ನೇ ನಡೆಸಿಕೊಂಡಿದ್ದ. ಯಾರ್‍ಯಾರದೋ ಜಾಗ ಕಬಳಿಸುವುದು, ಕಾಸು ಎಗರಿಸುವುದು, ಅದನ್ನೆಲ್ಲ ಪ್ರಭಾವಿಗಳ ಸಖ್ಯಾ ಬಲದಿಂದ ದಕ್ಕಿಸಿಕೊಳ್ಳೋದು ಇಸ್ಮಾಯಿಲ್‌ನ ನಿತ್ಯಕರ್ಮದಂತಾಗಿ ಹೋಯ್ತು! ಸ್ವ-ಧರ್ಮದ ಮುಸ್ಲಿಮರನ್ನೇ ಸತಾಯಿಸಿ 'ಸಂಪಾದನೆ' ಮಾಡುವ ಕಾಯಕಕ್ಕೆ ಕೈಹಾಕಿದ್ದ. ಇದರಿಂದ ಸಾಬಿಗಳು ರೋಸತ್ತು ಹೋದರು. ಆತನ ಮೇಲೆ ಬೆನ್ನು-ಬೆನ್ನಿಗೆ ಕ್ರಿಮಿನಲ್ ಕೇಸುಗಳಾದವು. ಕೊನೆಗೆ 'ರೌಡಿ ಶೀಟರ್' ಎಂಬ ಬಿರುದೂ ಸಿಕ್ಕಿತು!

ನಯ-ನಾಜೂಕಿನ ಮಾತಾಡುತ್ತಲೇ ಯಾರ್‍ಯಾರದೋ ಕೋಟಿ-ಕೋಟಿ ಕಾಸಿಗೇ 'ದೀಕ್ಷೆ' ಕೊಡುತ್ತಿದ್ದ ಇಸ್ಮಾಯಿಲ್ ಇನ್ಯಾರದೋ ಭೂವ್ಯಾಜ್ಯಗಳಲ್ಲಿ ತಲೆ ತೂರಿಸಿ ಆ ಜಾಗ ಲಪಟಾಯಿಸಲು ಹವಣಿಸುತ್ತಿದ್ದ. ಬೆಳ್ಳಾರೆಯಲ್ಲಿ ಆತ ರಿಯಲ್ ಎಸ್ಟೇಟ್ ಉದ್ಯಮಿಯಾಗುವ ತೆವಲಿಂದ ಮಾಡಿದ ಭೂ ಭಾನ್ಗಡಿಗಳು ಅಮಾಯಕ ಮುಸ್ಲಿಮರ ಹೈರಾಣಾಗಿಸಿಬಿಟ್ಟದೆ.

ಇಸ್ಮಾಯಿಲ್ ಕೊಡುತ್ತಿದ್ದ ಚಿತ್ರಹಿಂಸೆ ತಾಳಲಾರದೆ ಆತನನ್ನು ಕೊಂದು ಹಾಕುವ ಪ್ರಯತ್ನವೂ ಎರಡು ವರ್ಷದ ಹಿಂದಾಗಿತ್ತು! ಇಸ್ಮಾಯಿಲ್ ಮತ್ತವನ ಮಡದಿ ವಹೀದಾ ಚೂರಿ ಇರಿತದಿಂದ ತಿಂಗಳುಗಟ್ಟಲೆ ಆಸ್ಪತ್ರೆ ಪಾಲಾಗಿದ್ದರು. ಇಷ್ಟಾದರೂ ಯಾರೂ ತಲೆ ಕೆಡಿಸಿಕೊಂಡಿರಲಿಲ್ಲ. ಮಾಡಿದ್ದುಣ್ಣೋ ಮಹರಾಯ ಎಂದರೇ ಹೊರತು ಕನಿಷ್ಠ ಕನಿಕರವೂ ತೋರಿಸಲಿಲ್ಲ. ಜಿಲ್ಲಾ ಮಂತ್ರಿ ರಮಾನಾಥ ರೈ ಸ್ವ-ಪಕ್ಷದ ಮುಖಂಡ-ಮುಖಂಡೆ ಮಾರಣಾಂತಿಕ ಹಲ್ಲೆಗೀಡಾದರೂ ಶಿಷ್ಟಾಚಾರಕ್ಕೂ ಸಾಂತ್ವನ ಹೇಳಲಿಲ್ಲ. ಇದಿಷ್ಟೇ ಸಾಕು ಇಸ್ಮಾಯಿಲ್-ವಹೀದಾರ ಸಮಾಜಸೇವೆಯ ಪರಿ ಪರಿಚಯಿಸಲಿಕ್ಕೆ!

ಮೂಸಾ ಕುಟುಂಬಕ್ಕೆ ಕಿರಿಕ್


ಇಸ್ಮಾಯಿಲ್ ದಂಪತಿಗಳ ದೋಖಾಗಿರಿಗೆ ಬೆಳ್ಳಾರೆ ಏರಿಯಾದ ಸಾಬಿ ಸಂಕುಲ ಕಂಗಾಲಾಗಿ ಹೋಗಿತ್ತು. ವಹೀದಾ ಬುರ್ಖಾ ಹಾಕದೆ ಬಿಂದಾಸಾಗಿ ಓಡಾಡುತ್ತ ಸ್ವ-ಧರ್ಮದ ಸಜ್ಜನರಿಗೇ ಕಂಟಕಕಾರಿಯಾಗಿದ್ದಾಳೆಂಬುದು ಕರ್ಮಠ ಬ್ಯಾರಿಗಳ ಆಕ್ಷೇಪವಾಗಿತ್ತು. ಅತ್ತ ಆಕೆಯ ಗಂಡ ಇಸ್ಮಾಯಿಲ್ ತನ್ನ ರಾಜಕೀಯ ಬಲ ಬಳಸಿ ಊರಿನ ಸಣ್ಣಪುಟ್ಟ ಜಗಳ-ವೈಮನಸ್ಯಗಳಲ್ಲಿ ಸುಖಾಸುಮ್ಮನೆ ತಲೆ ತೂರಿಸಿ ದುರ್ಲಾಭ ಹೊಡೆಯಲು ಹವಣಿಸುವುದು ಮುಸ್ಲಿಮರನ್ನು ಕೆರಳಿಸಿತ್ತು. ಬೆಳ್ಳಾರೆಯ ಜುಮ್ಮಾ ಮಸೀದಿಯ ಆಡಳಿತಗಾರರಿಗೆ ಮತ್ತು ಎಂ.ಆರ್. ಮೂಸಾ ನಡುವಿನ ಭೂವಿವಾದ ಇಸ್ಮಾಯಿಲ್ ಕೈವಾಡದಿಂದ ಘನಘೋರ ಕಾಳಗವಾಗಿ ಮಾರ್ಪಟ್ಟಿತ್ತು. ಒಂದು ಮೂಲದ ಪ್ರಕಾರ ಈ ಜಾಗದ ಮೇಲೆ ಕಣ್ಣಿಟ್ಟಿದ್ದ ಇಸ್ಮಾಯಿಲ್ ಪಾಜಪಳ್ಳ ಇಸಾಕ್ ಹಾಜಿ ಪ್ರಕರಣವನ್ನು ವಕ್ಫ್‌ಗೆ ಒಯ್ಯುವಂತೆ ಕಿತಾಪತಿ ನಡೆಸಿದ್ದನಂತೆ. ಈ ಕುತಂತ್ರಿ ಇಸ್ಮಾಯಿಲ್‌ನಿಂದಾಗಿಯೇ ತಮ್ಮ ಜಾಗದ ಪ್ರಕರಣ ಬಿಗಡಾಯಿಸಿದೆ ಎಂಬ ಆಕ್ರೋಶ ಮೂಸಾರ ಮಕ್ಕಳಾದ ಸಿದ್ದೀಕ್ ಮತ್ತು ರೆಹಮಾನ್‌ರಲ್ಲಿ ಮೂಡಿತ್ತು.

ಸಿದ್ದೀಕ್ ಹಾಗು ಇಸ್ಮಾಯಿಲ್ ನಡುವೆ ಆಗಾಗ ಗುರಾಯಿಸುವಿಕೆ-ಜಗಳ-ಪೊಲೀಸ್ ಕಂಪ್ಲೇಟು ನಡೆಯುತ್ತಲೇ ಇತ್ತು. ಇಸ್ಮಾಯಿಲ್ ತನ್ನ ರಾಜಕೀಯ ಪ್ರಭಾವ ಪ್ರಯೋಗಿಸಿ ಸಿದ್ದೀಕ್‌ನ ಮೇಲೆ ರೌಡಿ ಕೇಸ್ ಹಾಕಿಸಿದ್ದ. ಇದರಿಂದ ಕೆರಳಿದ್ದ ಸಿದ್ದೀಕ್ ವೈರಿಯನ್ನು ಕೊಂದೇ ಹಾಕುವ ನಿರ್ಧಾರಕ್ಕೂ ಬಂದುಬಿಟ್ಟಿದ್ದ. ಸೇಡು ತೀರಿಸಿಕೊಳ್ಳಲು ಸಮಯ ಸಾಧಿಸುತ್ತಿದ್ದ ಸಿದ್ದೀಕ್ 2014ರ ಏಪ್ರಿಲ್ 30ರಂದು ಮಧ್ಯಾಹ್ನ ಸುಳ್ಯದ ಗಾಂಧಿನಗರದಲ್ಲಿ ಏಕಾಏಕಿ ಇಸ್ಮಾಯಿಲ್ ಮೇಲೆ ಚೂರಿಯಿಂದ ದಾಳಿ ನಡೆಸಿದ್ದ. ಆ ಹೊತ್ತಲ್ಲಿ ವಹೀದಾ ಗಂಡನ ಜತೆಯೇ ಇದ್ದಳು. ಹಲ್ಲೆಯಿಂದ ಗಂಡನ ರಕ್ಷಿಸಲು ಹೋದ ಆಕೆಯ ಕೈಬೆರಳುಗಳಿಗೆ ಗಾಯಗಳಾಗಿತ್ತು. ಗಂಡ-ಹೆಂಡತಿ ಇಬ್ಬರೂ ಆಸ್ಪತ್ರೆಯಲ್ಲಿ ತಿಂಗಳುಗಟ್ಟಲೆ ಕಳೆದು ಬಚಾವಾಗಿ ಬಂದಿದ್ದರು. ಅಂದು ವಹೀದಾಗೇ ಹೆಚ್ಚು ಪೆಟ್ಟಾಗಿತ್ತು. ಇಸ್ಮಾಯಿಲ್‌ಗೆ ಸಣ್ಣ ಪ್ರಮಾಣದ ಗಾಯಗಳಾಗಿದ್ದವು.


ಈ ಚಾಕು ದಾಳಿಯ ನಂತರ ವಹೀದಾ ತನ್ನ ಬೆಂಗಳೂರು ಸಂಪರ್ಕಗಳ ಮೂಲಕ ಪೊಲೀಸ್ ಅಂಗರಕ್ಷಕರನ್ನು ನೇಮಿಸಿಕೊಂಡಿದ್ದಳು; ಗಂಡನಿಗೂ ಬಾಡಿಗಾರ್ಡ್ ವ್ಯವಸ್ಥೆ ಮಾಡಿಸಿದ್ದಳು. ದಂಪತಿಗಳಿಬ್ಬರೂ ಹೊರಗೆ ಓಡಾಡುವಾಗ ಗನ್‌ಮ್ಯಾನ್ ಜತೆಗಿರುತ್ತಿದ್ದ; ಮನೆಗೆ ಸದಾ ಗನ್‌ಮ್ಯಾನ್ ಕಾವಲು ಇರುತ್ತಿತ್ತು. ಅಷ್ಟೇ ಅಲ್ಲ, ಇಸ್ಮಾಯಿಲ್‌ನ ಸೊಂಟದಲ್ಲಿ ಯಾವಾಗಲೂ ಲೋಡೆಡ್ ಕಂಟ್ರಿ ಪಿಸ್ತೂಲೊಂದು ಇದ್ದೇ ಇರುತ್ತಿತ್ತು. ಆದರೆ ಆತ ನಮಾಜಿಗೆ ಹೋಗುವಾಗ ಗನ್ ಒಯ್ಯುತ್ತಿರಲಿಲ್ಲ; ಗನ್ ಮ್ಯಾನೂ ದೂರ ಇರುತ್ತಿದ್ದರು. ಇದೆಲ್ಲ ಹಂತಕರು ಕರಾರುವಾಕ್ಕಾಗಿ ಗೊತ್ತು ಮಾಡಿಕೊಂಡಿದ್ದರು. ಐವರ್ನಾಡು ಮಸೀದಿಯಿಂದ ಹೊರಬಿದ್ದ ಇಸ್ಮಾಯಿಲ್ ಅನತಿ ದೂರದ ಅಂಗಡಿಯೊಂದರ ಬಳಿ ನಿಲ್ಲಿಸಿದ್ದ ತನ್ನ ಇನ್ನೋವಾ ಕಾರಿನ ಬಳಿ ಹೋಗುತ್ತಿದ್ದಂತೆಯೇ ಬಾಡಿಗೆ ಹಂತಕರು ತಲವಾರಿಂದ ಕಡಿದಿದ್ದಾರೆ. ಕಾರಿನ ಡ್ಯಾಶ್ ಬೋರ್ಡ್‌ನಲ್ಲಿದ್ದ ರಿವಾಲ್ವರ್ ತೆಗೆಯಲು ಹವಣಿಸಿದ್ದಾನೆ ಇಸ್ಮಾಯಿಲ್. ಆದರೆ ಆತನ ಕೈಯನ್ನೇ ತುಂಡರಿಸಿದ ಹಂತಕರು ಸಿಕ್ಕಸಿಕ್ಕಲ್ಲಿ ಕಡಿದು ಹಾಕಿದ್ದಾರೆ. ಆತ ಸ್ಥಳದಲ್ಲೇ ಬಿದ್ದು ಒದ್ದಾಡಿ ಜೀವ ಬಿಟ್ಟಿದ್ದಾನೆ.

ಯಾಕೊಬ್‌ಗೆ ಪಂಗನಾಮ!

ಸುಳ್ಯ ಪೊಲೀಸರ ಮೇಲೆ ಬೆಂಗಳೂರಿಂದ ಒತ್ತಡ ಹೇರಿಸಿ ತನ್ನನ್ನು ರೌಡಿ ಲಿಸ್ಟ್‌ಗೆ ಸೇರಿಸಿದ್ದ ಇಸ್ಮಾಯಿಲ್‌ನ ಮೇಲಿನ ದ್ವೇಷದಿಂದ ಆತನ ತಲೆ ತೆಗೆಯಲು ವಿಫಲ ಪ್ರಯತ್ನ ನಡೆಸಿದ್ದ ಸಿದ್ದೀಕ್ ಜೈಲು ಪಾಲಾಗಿದ್ದ. ಆತ ಜಾಮೀನು ಪಡೆದು ಊರೇ ಬಿಟ್ಟುಹೋಗಿದ್ದ. ಗೋವಾಕ್ಕೆ ಹೋಗಿ ನೆಲೆಸಿದ್ದ ಸಿದ್ದೀಕ್ ಅಲ್ಲಿ ಹೊಟೇಲು ನಡೆಸಿಕೊಂಡಿದ್ದ. ಈ ಚಾಕು ಇರಿತ ಕೇಸಲ್ಲಿ ಸಿದ್ದೀಕ್



ಯಾಕೂಬ್



ಅಣ್ಣ ರೆಹಿಮಾನ್ ಮೇಲೂ ಕೇಸು ಬಿದ್ದಿತ್ತು. ಸಿ... ಮತ್ತು ರೆಹಮಾನ್ ಇಸ್ಮಾಯಿಲ್ ಮೇಲೆ ಹಗೆ ಸಾಧಿ... ಇದ್ದರು. ಯಾಕೂಬ್ ಖಾನ್‌ನ ಮೂರು ಎಕರೆ ಜಾ... ಮೋಸದಿಂದ ಲಪಟಾಯಿಸಿದ್ದ ಇಸ್ಮಾಯಿಲ್ ವಿರುದ್ಧ... ಹಾಕಲು ಸಿದ್ದೀಕ್ ವಕೀಲರೊಬ್ಬರನ್ನು ನೇಮಿ... ಯಾಕೂಬ್ ಖಾನ್‌ಗೆ ನೆರವಾಗಿದ್ದ.


ಯಾಕೂಬ್ ಖಾನ್ ಮೂರು ದಶಕ... ಕೊಲ್ಲಿಯಲ್ಲಿದ್ದ. ಅಲ್ಲಿ ದುಡಿದು ಒಂದಿಷ್ಟು... ಮಾಡಿಕೊಂಡು ಬಂದಿರುವ ಆತ ಮಂಗಳೂರಿನ... ನ್ಯೂರೋಡ್‌ನ ರಾಜ್ ಹೋಮ್ಸ್ ಎಂಬಲ್ಲಿ ನೆಲೆ ನಿಂ... ಈತ ಸುಳ್ಯದ ಬೆಳ್ಳಾರೆ-ನೆಟ್ಟಾರು ನಡುವಿನ ಕೋ... ಎಂಬಲ್ಲಿ ಏಳು ಎಕರೆ ಜಾಗ ಖರೀದಿಸಿದ್ದರು. ... ಸೈಟು ಮಾಡಿ ಮಾರುವ ಪ್ಲಾನ್ ಆತ ಹಾಕಿದ್ದ. ... ಗೊತ್ತಾಗಿದ್ದೇ ತಡ ಇಸ್ಮಾಯಿಲ್ ತನ್ನ ನಾಲ್ಕು ... ಇಪ್ಪತ್ತು ಬುದ್ಧಿ ಬಳಸಿ ಯಾಕೂಬ್‌ನ ಸಖ್ಯ ಬೆಳೆಸಿ... ತಾನು ಗಿರಾಕಿ ತಂದು ಕೊಡುವ ಮತ್ತು ಜಾ... ನಾನ್ ಅಗ್ರಿಕಲ್ಚರ್ ಆಗಿ ಪರಿವರ್ತಿಸಲು ಸಹ... ಮಾಡುವೆನೆಂದು ನಂಬಿಸಿದ್ದಾನೆ.

ಇಸ್ಮಾಯಿಲ್‌ನ ರಾಜಕೀಯ ನಂಟು, ಅಧಿಕಾ... ಜತೆಗಿನ ದೋಸ್ತಿ, ಆತನ ಹೆಂಡತಿಯ ತಾಕತ್ತು, ... ನಾಜೂಕಿನ ಮಾತುಗಾರಿಕೆಗೆ ಮರುಳಾಗುತ್ತಾನೆ ಯಾಕ... ತನ್ನ ಕೋಟ್ಯಾಂತರ ವ್ಯವಹಾರಕ್ಕೆ ಇಂಥವನ ಸಾಥ್... ಎಲ್ಲ ಕೆಲಸ-ಕಾರ್ಯ ಸಲೀಸಾಗುತ್ತದೆಂದು ಲೆಕ್ಕ ಹಾಕ... ಆದರೆ ಇಸ್ಮಾಯಿಲ್ ಆತನ ಕೋಟಿ-ಕೋಟಿ ... ಬೆಳ್ಳಾರೆಯ ಕೋಟ್ಯಂತರ ರೂ. ನೆಲವನ್ನು ಕಬ... ದೂ(ರು)ರಾಲೋಚನೆ ಮಾಡುತ್ತಾನೆ. ಉಪಾಯ... ಯಾಕೂಬ್‌ನ ಒಲಿಸಿಕೊಂಡ ಇಸ್ಮಾಯಿಲ್ ಆತನ ... ಎಕರೆ ಜಾಗದ ಭೂಪರಿವರ್ತನೆ ಮತ್ತು ಸೈಟ್ ... ಮಾರಾಟ ಮಾಡುವ ಕಾರ್ಯದ ಜನರಲ್ ಪವರ್ ... ಆಟಾರ್ನಿ (ಜಿಪಿಎ) ಪಡೆದುಕೊಂಡು ಬಿಡುತ್ತಾನೆ. ಇಸ್ಮಾಯಿಲ್‌ನ ದಗಾ ಪ್ಲಾನ್‌ನ ಒಂದು ... ಯಶಸ್ವಿಯಾಗೇ ಮುಗಿಯುತ್ತದೆ.

ಈ ನಾಲ್ಕು ಎಕರೆ ಜಾಗದ ಪಕ್ಕದಲ್ಲಿನ ರಸ್ತೆ ಬ... ಮೂರು ಎಕರೆ ಮೇಲೆ ಇಸ್ಮಾಯಿಲ್‌ಗೆ ಕಣ್ಣಿತ್ತು. ... ಅಂದಾಜಿನಂತೆ ಇದು ಮೂರು ಕೋಟಿ ಚಿಲ್ಲರೆ ಭೂ... ಇದನ್ನು ತನಗೆ ಮಾರುವಂತೆ ಯಾಕೂಬ್‌ಗೆ ... ಬಿದ್ದಿದ್ದಾನೆ ಇಸ್ಮಾಯಿಲ್. ಹೆಂಡತಿ ಮೂಲಕವೂ ವ್ಯ... ಕುದುರಿಸಲು ನೋಡಿದ್ದಾನೆ. ಯಾಕೂಬ್‌ನ ಹೆಂಡ... ಮಂಕುಬೂದಿ ಎರಚಿದ್ದ ಇಸ್ಮಾಯಿಲ್ ಹಂಗೂ-ಹಿ... ಆ ಜಾಗದ ಕ್ರಯಪತ್ರ ಮಾಡಿಸಿಕೊಂಡೇ ಬಿಡು... ಆದರೆ ಹಣ ಮಾತ್ರ ಕೊಡುವುದೇ ಇಲ್ಲ. ಕೇ... ಇಂದು-ನಾಳೆ ಎಂದು ಕಾಲ ಕಳೆಯುತ್ತಾನೆ. ಇಸ್ಮಾಯಿಲ್‌ನ ಅಸಲೀ ಅವತಾರದ ಅನಾವರಣ ಆಗ... ಯಾಕೂಬ್ ಖಾನ್ ಕುಟುಂಬಕ್ಕೆ. ಯಾಕೂಬ್ ... ಕಡೆಯವರಿಗೆ ಮತ್ತು ಇಸ್ಮಾಯಿಲ್‌ಗೆ ದೊಡ್ಡ ... ಆಗುತ್ತದೆ.

ಆದರೆ ಕ್ರಯಪತ್ರ ಕಾನೂನುಬದ್ಧವಾಗೇ ಮಾಡಿಕೊ... ಇಸ್ಮಾಯಿಲ್, ಹೀಗಾಗಿ ಯಾಕೂಬ್ ಖಾನ್ ಕುಟು... ಮೋಸ ಹೋಗಿತ್ತು. ಪೊಲೀಸರಿಗೆ ದೂರು ಕೊ... ಹೋದರೆ ಅಲ್ಲೂ ನ್ಯಾಯ ಸಿಗಲಿಲ್ಲ. ಶಕ್ತಿಶಾಲಿ ಮಂ... ಕೃಪಾಕಟಾಕ್ಷದ ಇಸ್ಮಾಯಿಲ್ ವಿರುದ್ಧ ಕಂಪ್ಲ... ದಾಖಲಿಸುವ ಧೈರ್ಯ ಸುಳ್ಯದ ಪೊಲೀಸರಿಗೆ ಆದ... ಬಂದೀತು "ಇದು ಸಿವಿಲ್ ಕೇಸು... ನೀವು ನ್ಯಾಯಾಲ... ಹೋಗಿ... ಅಲ್ಲಿಂದ ತನಿಖೆಗೆ ಆದೇಶ... ನೋಡೋಣ....." ಎಂದು ಪೊಲೀಸರು ಯಾಕೂ... ಸಾಗ ಹಾಕಿದ್ದಾರೆ. ಆಗ ಯಾಕೂಬ್ ನೆರವಿಗೆ ಇಸ್ಮಾಯಿ... ಪುರಾತನ ವೈರಿ ಸಿದ್ದೀಕ್ ಬಂದಿದ್ದಾನೆ. ವಕೀಲರೊಬ...

ಅಕ್ಟೋಬರ್ 4 ರಂದು ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ 'ಚಲೋ ಉಡುಪಿ' ಜಾಥಾ ಯಶಸ್ವಿಯಾಗಿ ಪ್ರಾರಂಭವಾಯ್ತು.


ರಮಾನಾಥ ರೈ

...ಸಂಧಿಸಿ ಇಸ್ಮಾಯಿಲ್ ಮೇಲೆ ಕೇಸು ದಾಖಲಿಸುವಂತೆ ...ನೋಡಿಕೊಂಡಿದ್ದಾನೆ.

ಅತ್ತ ಇಸ್ಮಾಯಿಲ್ ಮೇಲೆ ವಂಚನೆ ರೆಡಿಯಾಗುತ್ತಿದ್ದರೆ ಇತ್ತ ಆತ ಆ ಮೂರು ಎಕರೆ ಜಾಗವನ್ನು ಬೆಳ್ಳಾರೆಯ ಜೋಶಿ ಎಂಬವರ ಮೂಲಕ ಮಾರಾಟ ಮಾಡಿಬಿಟ್ಟಿದ್ದಾನೆ. ಜೋಶಿಯವರ ಭಾವ ಡಾ. ಪಿ.ಆರ್. ಭಟ್ ತನ್ನ ವೈದ್ಯ ಮಗನಿಗಾಗಿ ಆಸ್ಪತ್ರೆ ಕಟ್ಟಿಸಲು ಈ ಜಾಗ 4 ಕೋಟಿಗೆ ಖರೀದಿಸಿದ್ದಾರೆಂಬ ಗುಲ್ಲು ಎದ್ದಿದೆ!

ಸಿದ್ದೀಕ್ ಯಾಕೂಬ್ ಸೇರಿ ಕೊಂದರಾ?

ಸುಳ್ಯ-ಪುತ್ತೂರು ಕೋಮು ಸೂಕ್ಷ್ಮ ಪ್ರದೇಶವೇನೋ ...ಜ. ಆದರೆ ಬ್ಯಾರಿ ಕುಲದ ಇಸ್ಮಾಯಿಲ್‌ನ ಹತ್ಯೆಯಾಗಿರುವುದು ಕೋಮು ಕಿತಾಪತಿಯಿಂದ ಅಲ್ಲವೇ ಅಲ್ಲ. ಆತ ...ಮ್ಯುನಲ್ ಉಸಾಬರಿಗೆ ಹೋಗುತ್ತಲೇ ಇರಲಿಲ್ಲ. ಆತನದೇನಿದ್ದರೂ ತಲೆಹಿಡುಕತನ, ಜಾಗ ಕಬಳಿಸುವುದು, ...ಡವರ ಕಾಸು ಕದಿಯೋ ಕಸುಬು. ರಾಜಕೀಯ ಕಾರಣಕ್ಕೂ ...ತ ಹತನಾಗಿಲ್ಲ ಎಂಬುದು ಸುಳ್ಯ-ಪುತ್ತೂರಿನ ಎಲ್ಲರಿಗೂ ಅರ್ಥವಾಗುವ ಸತ್ಯ. ಆತನ ಕೊಂದರೆ, ಸಿದ್ದೀಕ್ ಬ್ರದರ್ಸ್ ಅಥವಾ ಯಾಕೂಬ್ ಕುಟುಂಬದವರೇ ಕೊಂದಿರಬೇಕು. ...ದನ್ನು ಪೊಲೀಸರು ಖಾತ್ರಿಪಡಿಸುತ್ತಾರೆ. ತನಿಖೆಯೂ ...ದ್ದೀಕ್-ಯಾಕೂಬ್ ಸುತ್ತಲೇ ಸುತ್ತುತ್ತಿದೆ.


ತಮ್ಮ ಭೂವಿವಾದ ಇತ್ಯರ್ಥವಾಗಲು ಇಸ್ಮಾಯಿಲ್ ...ಡುತ್ತಿಲ್ಲ ಎಂಬ ಆಕ್ರೋಶ ಸಿದ್ದೀಕ್-ರೆಹಮಾನ್ ...ಹೋದರರನ್ನು ಹತಾಶರನ್ನಾಗಿ ಮಾಡಿತ್ತು. ಮಸೀದಿ ...ರವಾಗಿ ಕುಂಬೋಳ್ ತಂಜಾಳ್ ರಾಜಿ ಪಂಚಾಯಿತಿಕೆ ...ದಲ್ಲಿ ಭಾಗ ವಹಿಸಿದ್ದರು. ಎರಡೆರಡು ಪಂಚಾಯ್ತಿಕೆ ...ದರೂ ಸಮಸ್ಯೆ ಪರಿಹಾರ ಆಗಿರಲಿಲ್ಲ. ಇನ್ನೂ ಮಾತುಕತೆ ...ಡೆಯುತ್ತಲೇ ಇತ್ತು. ಆದರೆ ಇಸ್ಮಾಯಿಲ್ ಅಡ್ಡಗಾಲು ...ಕುತ್ತಿದ್ದ. ಈತ ಬದುಕಿದ್ದರೆ ಮಸೀದಿ ಮತ್ತು ತಮ್ಮ ...ಟುಂಬದ ಭೂವ್ಯಾಜ್ಯ ಬಗೆಹರಿಯುವುದೇ ಇಲ್ಲವೆಂಬ ...ರ್ಮಾನಕ್ಕೆ ಸಿದ್ದೀಕ್ ಮತ್ತು ರೆಹಮಾನ್ ಬಂದರಾ? ...ನ್ನನ್ನು ಸುಖಾಸುಮ್ಮನೆ ರೌಡಿ ಲಿಸ್ಟ್‌ಗೆ ಸೇರಿಸಿ ಜೈಲು ...ಲು ಮಾಡಿದ್ದವನನ್ನು ಕೊಲ್ಲಲು ಪ್ರಯತ್ನಿಸಿದರೂ ...ಚಾವಾಗಿದ್ದ ಇಸ್ಮಾಯಿಲ್‌ನ ಮುಗಿಸಲೇಬೇಕೆಂಬ ಹಠಕ್ಕೆ ...ತ ಬಿದ್ದಿದ್ದನಾ? ವೈರಿಯ ತಲೆ ತೆಗೆಯಲು ಅಂತಿಮವಾಗಿ ...ಪಾರಿ ಕೊಟ್ಟನಾ?


ಅಥವಾ ಯಾಕೂಬ್ ಖಾನ್ ಕುಟುಂಬಸ್ಥರು ...ಲೆಗಡುಕರ ನಿಯೋಜಿಸಿದರಾ? ಒಂದು ಸುದ್ದಿ ಪ್ರಕಾರ ಯಾಕೂಬ್ ಕಡೆಯವರಲ್ಲೀಗ ಸುಪಾರಿ ಕೊಡುವಷ್ಟು ...ಣವೂ ಉಳಿದಿಲ್ಲ; ಅಂಥ ಧೈರ್ಯವೂ ಇಲ್ಲ. ಯಾಕೂಬ್ ...ಡೆಯವರು ಸಿದ್ದೀಕ್‌ಗೆ ಒಂದಿಷ್ಟು ನೆರವಾಗಿರಬಹುದಷ್ಟೇ! ...ಲ್ಲವೇ ಯಾಕೂಬ್-ಸಿದ್ದೀಕ್ ಪಾಲುದಾರಿಕೆಯಲ್ಲಿ ಸುಪಾರಿ ...ಟ್ಟಿರಬಹುದು. ಇದರಲ್ಲಿ ಯಾವುದು ನಿಜವೆಂದು ...ಳಿಯಬೇಕಿದ್ದರೆ ನಿಷ್ಠೂರ ತನಿಖೆಯಿಂದಷ್ಟೇ ಸಾಧ್ಯ. ಈ ...ರದಿ ಸಿದ್ಧವಾಗುತ್ತಿರುವ ಹೊತ್ತಿಗೆ ಪೊಲೀಸರು ...ಣದಲ್ಲಿರುವ ಸಿದ್ದೀಕ್ ಮತ್ತು ಅವರ ಅಣ್ಣ ರೆಹಮಾನ್ ಇಸ್ಮಾಯಿಲ್ ಹತ್ಯೆಯ ಸೂತ್ರಧಾರನೆಂಬ ತೀರ್ಮಾನಕ್ಕೆ ...ಂದಿದ್ದಾರೆಂಬ ಸುದ್ದಿಗಳು ಹಬ್ಬುತ್ತಿವೆ. ಈ ಸಹೋದರರನ್ನು 'ಅನಧಿಕೃತ'ವಾಗಿ ಬಂಧಿಸಿ ಬಾಯಿ ಬಿಡಿಸಲಾಗುತ್ತಿದೆಯಂತೆ. ...ಬ್ಯಾರಿ ಇಸ್ಮಾಯಿಲ್‌ನ ತಲೆ ತೆಗೆಯಲು ಸಿದ್ದೀಕ್‌ಗಿಂತ ...ಹಮಾನನೇ ಹೆಚ್ಚು ಹಠಕ್ಕೆ ಬಿದ್ದಿದ್ದಾನಂತೆ. ರೆಹಮಾನ್ ...ಡರ್‌ಗ್ರೌಂಡ್ ಆಗಿದ್ದಾನೆ.


ಒಂದಂತೂ ಖರೆ. ಮಾಡಬಾರದ್ದು ಮಾಡಿದರೆ ...ಗಬಾರದ್ದೇ ಆಗುತ್ತದೆ. ಹೆಂಡತಿಯನ್ನೇ ಮುಂದಿಟ್ಟುಕೊಂಡು ...ಸಲತ್ತು- ಮೋಜು ಮಾಡಿದ, ಅಸಹಾಯಕರ ...ಯಿಸಿದ ಇಸ್ಮಾಯಿಲ್ ಇಲ್ಲವಾಗಿದ್ದಾನೆ. ಪಾಪಿ ...ಸ್ಮಾಯಿಲ್ ಸತ್ತಿದ್ದಕ್ಕೆ ಪಾಪ ಎನ್ನುವವರು ಸುಳ್ಯ ...ಮೀಪದಲ್ಲಾರೂ ಇಲ್ಲ. ಅಂದರೆ ಆತ ಮಾಡಿರುವ ಪಾತಕ ...ಷ್ಟು ಘೋರವಾಗಿರಬಹುದು?


■ ನಹುಷ





'ಫ್ರೀಡಂ'ನಲ್ಲಿ ಏನಿದೆ?' ಬೀದಿ ನಾಟಕ


ದೇವನೂರ ಮಹಾದೇವರಿಂದ 'ಚಲೋ ಉಡುಪಿ'ಗೆ ಚಾಲನೆ


ರವಿವರ್ಮ ಕುಮಾರ್ ಅವರಿಂದ 'ಚಲೋ ಉಡುಪಿ' ಜಾಥಾ ಉದ್ಘಾಟನೆ



ಫ್ರೀಡಂ ಪಾರ್ಕ್ ಉದ್ಘಾಟನಾ ಸಭೆ



ಸಾಂಸ್ಕೃತಿಕ ಕಾರ್ಯಕ್ರಮಗಳು


ಸಾಂಸ್ಕೃತಿಕ ಕಾರ್ಯಕ್ರಮಗಳು


ನೆರೆದಿದ್ದ ಸಭಿಕರು








ಕುಶಾಲಪ್ಪ

ಕೊಡಗು

ಚೆಡ್ಡಿಗಳ ಭ್ರಷ್ಟತೆ ಕಾಂಗ್ರೆಗಳ ನಿರ್ವೀರ್ಯತೆ



ಎ.ಕೆ.ಸುಬ್ಬಯ್ಯ

ಕರ್ನಾಟಕದಲ್ಲಿ ಬಿಜೆಪಿ ಆಡಳಿತವಿದ್ದಾಗ ಎಲ್ಲೆಲ್ಲೂ ಅಕ್ರಮಗಳು ನಡೆದಿದ್ದವು. ಈ ಅಕ್ರಮಗಳಿಂದ ಕೊಡಗು ಹೊರತಾಗಿರಲಿಲ್ಲ. ಜಿಲ್ಲಾ ಪಂಚಾಯತಿ, ತಾಲೂಕು ಪಂಚಾಯತಿ ಹಾಗೂ ಗ್ರಾಮ ಪಂಚಾಯತಿಗಳು ಕೂಡ ಬಿಜೆಪಿಯ ಕೈಯಲ್ಲೇ ಇದ್ದುದರಿಂದ ಅವರಿಗೆ ಅವ್ಯವಹಾರಗಳನ್ನು ನಡೆಸಲು ಸಾಕಷ್ಟು ಅವಕಾಶಗಳು ಸುಲಭವಾಗಿ ದಕ್ಕಿತ್ತು.

ಯಾವಾಗಲೂ ಕಾಂಗ್ರೆಸಿನ ಭ್ರಷ್ಟಾಚಾರದ ಬಗ್ಗೆ ಮಾತನಾಡುವ ಮತ್ತು ದೊಡ್ಡ ಧ್ವನಿಯಲ್ಲಿ ಕಾಂಗ್ರೆಸಿನ ಭ್ರಷ್ಟಾಚಾರದ ವಿರುದ್ಧ ಪ್ರತಿಭಟಿಸುವ ಬಿಜೆಪಿ ತಾವು ಭ್ರಷ್ಟಾಚಾರದಲ್ಲಿ ಯಾರಿಗೂ ಏನೂ ಕಮ್ಮಿ ಇಲ್ಲ ಎಂಬುದನ್ನು ಸಾಬೀತುಪಡಿಸುವಂತೆ ಹೇಳಿಕೊಂಡು ಸಿಕ್ಕಿದ್ದನ್ನೆಲ್ಲ ಮುಕ್ಕುವ ಕಾಯಕಕ್ಕೆ ಇಳಿದಿತ್ತು.

"ಆಡಳಿತ ನಡೆಸುವುದಷ್ಟೇ ನಮ್ಮ ಕೆಲಸ. ನಮಗೆ ಬೇರೆ ವಿಚಾರದ ಉಸಾಬರಿ ಬೇಡ" ಎಂಬಂತಿರುವ ಕಾಂಗ್ರೆಸಿಗರು, ಬಿಜೆಪಿಯ ಭ್ರಷ್ಟ ಆಡಳಿತವನ್ನೂ ನೋಡಿಕೊಂಡು ಸುಮ್ಮನಿತ್ತು, ಆದ್ದರಿಂದ ಎಲ್ಲೋ ಕೆಲವು ಪ್ರಕರಣಗಳು ಮಾತ್ರ ಬೆಳಕಿಗೆ ಬಂದವು. ಅದೂ ಸಾಧ್ಯವಾಗಿದ್ದು ಕಾಂಗ್ರೆಸ್ ಪಕ್ಷದ ಸಹಕಾರದಿಂದ ಅಲ್ಲ, ಕೆಲವು ಕಾಂಗ್ರೆಸಿಗರು ವೈಯಕ್ತಿಕವಾಗಿ ಮತ್ತು ಕೆಲವು ಸಾಮಾಜಿಕ ಕಳಕಳಿ ಇರುವ ವ್ಯಕ್ತಿಗಳು ದೊಡ್ಡ ಶ್ರಮ ವಹಿಸಿದ್ದರಿಂದ ಆ ಹಗರಣಗಳು ಬೆಳಕಿಗೆ ಬಂದಿದ್ದವು.

ಈ ಪೈಕಿ ಗಿರಿಜನರಿಗೆ ಮೀಸಲಾದ ಅನುದಾನದಿಂದ 1.20 ಕೋಟಿ ರೂಪಾಯಿ ರೇಷ್ಮೆಹಡ್ಲು ಎಂಬ ಪ್ರದೇಶದಲ್ಲಿರುವ ಕೆರೆ ಅಭಿವೃದ್ಧಿ ಕೆಲಸಕ್ಕೆಂದು ಬಂದಿತ್ತು. ಹಾಗೆ ಕೆರೆ ಅಭಿವೃದ್ಧಿ ಮಾಡುವ ಉದ್ದೇಶ ಅಲ್ಲಿನ ಗಿರಿಜನರ ಕೃಷಿ ಕೆಲಸಕ್ಕೆ ನೆರವಾಗುವುದೆಂದು ಚೆಡ್ಡಿಗಳು ಹೇಳಿದ್ದರು. ಆದರೆ ವಾಸ್ತವವಾಗಿ ಮೀಸಲು ಅರಣ್ಯ ಪ್ರದೇಶದಲ್ಲಿ, ಅದೂ ಆನೆಗಳು ಹೆಚ್ಚಾಗಿರುವ ನಾಗರಹೊಳೆ ಅರಣ್ಯ ಪ್ರದೇಶದಲ್ಲಿರುವ ಈ ಕೆರೆಯನ್ನು ಅಲ್ಲಿರುವ ಗಿರಿಜನರು ಕೃಷಿಗೆ ಉಪಯೋಗಿಸುತ್ತಿರಲಿಲ್ಲ. ಅದಕ್ಕೂ ಮುಖ್ಯವಾಗಿ ಆ ಭಾಗದಲ್ಲಿರುವ ಗಿರಿಜನರಿಗೆ ಸ್ವಂತಕ್ಕೆಂದು ಗದ್ದೆಯೇ ಇರಲಿಲ್ಲ! ಹಾಗೊಮ್ಮೆ ಕೆರೆ ನೀರನ್ನು ಬಳಸಿ ಭತ್ತ ನೆಟ್ಟರೆ, ಆ ಪೈರನ್ನೇ ನಾಶ ಮಾಡುವ ಆನೆಗಳು ಅಲ್ಲಿದ್ದವು. ಆದರೇನಂತೆ ಚೆಡ್ಡಿಗಳು ಈ ನಿಷ್ಪ್ರಯೋಜಕ ಯೋಜನೆಯ ಹೆಸರಲ್ಲಿ ಕೆರೆ ಅಭಿವೃದ್ಧಿಗೆ ಮುಂದಾದರು. ಕೊನೆಗೆ ಶೇ. 10ರಷ್ಟು ಕೆಲಸ ಮಾಡಿ, ಶೇ. 90 ರಷ್ಟು ಹಣ ನುಂಗಿ, ರೇಷ್ಮೆಹಡ್ಲು ಕೆರೆಯ ನೀರನ್ನು ಕುಡಿದಿದ್ದರು.

ಈ ಕೆರೆಯ ವಿಚಾರದಲ್ಲಿ ಆಗ ಸ್ಪೀಕರ್ ಆಗಿದ್ದ ಕೆ.ಜಿ. ಬೋಪಯ್ಯ ಹಾಗೂ ಜಿಲ್ಲಾ ಪಂಚಾಯತ್ ಸದಸ್ಯ ರಾಜಾರಾವ್ ಅಪಾರ ಆಸಕ್ತಿ ವಹಿಸಿದ್ದರು. ಆ ಕಾರಣಕ್ಕೇ ಇರಬೇಕು ಈ ಇಡೀ ಯೋಜನೆಯಲ್ಲಿ ಮುಖಕ್ಕೆ ರಾಚುವಂತೆ ಭ್ರಷ್ಟಾಚಾರ ನಡೆದಿತ್ತು. ಇದೆಲ್ಲದರ ವಿರುದ್ಧ ಜಿಲ್ಲಾ ಪಂಚಾಯತ್ ಸದಸ್ಯೆ ಕಾಂಗ್ರೆಸಿನ ಸರಿತಾ ಪೂಣಚ್ಚ ಏಕಾಂಗಿ ಹೋರಾಟ ಮಾಡಿದ್ದರಿಂದ ಅದನ್ನು ಲೋಕಾಯುಕ್ತ ತನಿಖೆಗೆ ಒಪ್ಪಿಸಲಾಯಿತು. ಈಗಲೂ ಲೋಕಾಯುಕ್ತ ತನಿಖೆ ಆಮೆಗತಿಯಲ್ಲಿ ಸಾಗುತ್ತಿರುವುದರಿಂದ ಈ ಪ್ರಕರಣಕ್ಕೆ ಸದ್ಯಕ್ಕಂತೂ ಮುಕ್ತಿ ಸಿಗುವ ಹಾಗೆ ಕಾಣುತ್ತಿಲ್ಲ. ಇನ್ನೂ ವಿಚಿತ್ರವೆಂದರೆ ಬಿಜೆಪಿ ಆಡಳಿತಾವಧಿಯಲ್ಲಿ ತನಿಖೆ ಆಮೆಗತಿಯಲ್ಲಿ ನಡೆದಿದ್ದರೆ, ಕಾಂಗ್ರೆಸ್ ಆಡಳಿತಾವಧಿಯಲ್ಲಿ ತನಿಖೆಯೇ ನಡೆಯುತ್ತಿಲ್ಲ. ಇದು ಒಂದು ದುರಂತ.

ಭೂ ಕಬಳಿಕೆ

ಸರಕಾರದ ಹಣ ಮಾತ್ರ ನುಂಗಿದರೆ ಸಾಲದು, ಭೂಮಿಯನ್ನೂ ಸ್ವಾಹಾ ಮಾಡಬೇಕು ಎಂದು ಪಣ ತೊಟ್ಟಿದ್ದ ಬಿಜೆಪಿ ಪಕ್ಷದವರು ಎಲ್ಲೆಲ್ಲಿ ಸಾಧ್ಯವೋ ಅಲ್ಲೆಲ್ಲಾ ಭೂಮಿಯನ್ನು ನುಂಗುವ ಕಾಯಕಕ್ಕೂ ಮುಂದಾಗಿದ್ದರು.

ಅಕ್ರಮ-ಸಕ್ರಮ ಸಮಿತಿ ಇರುವುದು ಬಡಜನರು ಸರಕಾರದ ಭೂಮಿಯನ್ನು ಒತ್ತುವರಿ ಮಾಡಿಕೊಟ್ಟಿದ್ದರೆ ಹಾಗೂ ಅವರು ನಿಗದಿತ ಅವಧಿಯಲ್ಲಿ ಒತ್ತುವರಿಯನ್ನು ಸಕ್ರಮಗಳಿಸಿಕೊಡಲು ಅರ್ಜಿ ಸಲ್ಲಿಸಿದ್ದರೆ ಅದನ್ನು ಪರಿಶೀಲಿಸಿ ಅರ್ಹ ಅರ್ಜಿದಾರರಿಗೆ ಸಕ್ರಮಗಳಿಸಿ ಕೊಡುವುದಕ್ಕಾಗಿ. ಈ ಸಮಿತಿಯ ಅಧ್ಯಕ್ಷರಾಗಿ ಶಾಸಕರು ಹಾಗೂ ಸದಸ್ಯರಾಗಿ ಆಡಳಿತ ಪಕ್ಷದವರು ಇರುತ್ತಾರೆ. ಕಾರ್ಯದರ್ಶಿಯಾಗಿ ತಹಸೀಲ್ದಾರರು ಕಾರ್ಯ ನಿರ್ವಹಿಸುತ್ತಾರೆ.

ಬಿಜೆಪಿ ಸರಕಾರವಿದ್ದಾಗ ಶಾಸಕರಾಗಿದ್ದ ಕೆ.ಜಿ. ಬೋಪಯ್ಯ ಆರಂಭದಲ್ಲಿ ಡೆಪ್ಯೂಟಿ ಸ್ಪೀಕರ್ ನಂತರ ಸ್ಪೀಕರ್ ಆಗಿದ್ದರು. ಹಾಗಾಗಿ ಈ ಹುದ್ದೆಯಲ್ಲಿ ಕಾರ್ಯ ನಿರ್ವಹಿಸಲು ಸಾಧ್ಯವಿಲ್ಲ ಎಂದು ಹೇಳಿಕೊಂಡು ತನ್ನ ನಂಬಿಗಸ್ತ ಮಂಡೇಪಂಡ ಸುಜಾ ಕುಶಾಲಪ್ಪನವರಿಗೆ ಅಧ್ಯಕ್ಷ ಸ್ಥಾನವನ್ನು ವಹಿಸಿಕೊಟ್ಟಿದ್ದರು. ಈಗ ಸ್ಪೀಕರ್ ಸ್ಥಾನ ಇಲ್ಲ, ಅವರೇ ಅಕ್ರಮ-ಸಕ್ರಮ ಸಮಿತಿಯ ಅಧ್ಯಕ್ಷರಾಗಿದ್ದಾರೆ. ಆದರೆ ಸಭೆಗಳೇ ನಡೆಯುತ್ತಿಲ್ಲ, ಕಾರಣ ಸದಸ್ಯರೆಲ್ಲರೂ ಆಡಳಿತ ಪಕ್ಷವಾದ ಕಾಂಗ್ರೆಸಿನವರು. ಅವರಿಗೆ ರಾಜಕಾರಣ ಮಾಡಬೇಕೇ ವಿನಹ ಜನರ ಸಮಸ್ಯೆ ಪರಿಹರಿಸಬೇಕು ಎಂಬುದು ಇಲ್ಲ.

ಈ ಸುಜಾ ಕುಶಾಲಪ್ಪ ಯಾರು ಎಂದರೆ ಮಡಿಕೇರಿ ಕ್ಷೇತ್ರದ ಶಾಸಕ ಅಪ್ಪಚ್ಚು ರಂಜನ್‌ರವರ ಹಾಗೂ ಈಗಷ್ಟೇ ವಿಧಾನ ಪರಿಷತ್ ಸದಸ್ಯರಾಗಿರುವ ಸುನಿಲ್ ಸುಬ್ರಹ್ಮಣಿಯವರ ಸಹೋದರ. ಕೊಡಗು ಜಿಲ್ಲಾ ಬಿಜೆಪಿಯ ಅಧ್ಯಕ್ಷರಾಗಿದ್ದವರು. ಕೊಡಗು ಜಿಲ್ಲೆಯಲ್ಲಿ ಬಿಜೆಪಿ ಇವರ ಕುಟುಂಬದ ಆಸ್ತಿ ಎಂಬ ಮಾತು ಇದೆ. ಪಕ್ಷ ಮಾತ್ರ ಇವರಿಗೆ ಸಾಕಾಗದು. ಆಡಳಿತ ನಡೆಸುವ ಅಧಿಕಾರವೂ ಬೇಕು. ಇಂತಹ ಹಿನ್ನೆಲೆಯ ಸುಜಾ ಕುಶಾಲಪ್ಪ ಪತ್ರಕರ್ತರೊಬ್ಬರಿಗೆ ಬೆದರಿಕೆ (?) ಹಾಕಿದ ಪ್ರಕರಣದಲ್ಲಿ 2 ವರ್ಷ ಜೈಲು ಸಜೆ ಆದೇಶ ಬಂದಿತ್ತು. ಆದರೂ. ಅವರು ವಿಧಾನ ಪರಿಷತ್ತಿಗೆ ಸ್ಪರ್ಧಿಸಲು ಬಿಜೆಪಿ ಟಿಕೆಟು ಪಡೆದರೂ, ಅವರ ನಾಮಪತ್ರ ತಿರಸ್ಕೃತಗೊಂಡಿದ್ದರಿಂದ ಅವರ ಮತ್ತೊಬ್ಬ ಸಹೋದರನಾದ ಸುನಿಲ್ ಸುಬ್ರಹ್ಮಣಿಗೆ ಶಾಸಕರಾದರು.

ಇಂತಹ ಖ್ಯಾತಿಯ ವ್ಯಕ್ತಿ ಅಕ್ರಮ-ಸಕ್ರಮ ಅಧ್ಯಕ್ಷರಾದ ನಂತರ ಅಕ್ರಮ ಮಾಡದಿದ್ದರೆ ಹೇಗೆ? ಹಾಗಾಗಿ ಅರ್ಜಿ ನಮೂನೆ 50 ಹಾಗೂ 53 ಸಲ್ಲಿಕೆ ಆಗದಿದ್ದರೂ ಹಳೆ ತಾರೀಖಿನಲ್ಲಿ ನೀಡಿದಂತೆ ಹೊಸ ಅರ್ಜಿಗಳನ್ನು ತಯಾರಿಸಲಾಗಿದೆ. ಜೊತೆಗೆ ಆ ಅರ್ಜಿಗಳೆಲ್ಲವೂ ಸಕ್ರಮವಾಗಿಸಲು ತಾಲೂಕು ಕಚೇರಿಯ ಗುಮಾಸ್ತ ಗ್ರಾಮ ಲೆಕ್ಕಿಗ, ರೆವಿನ್ಯೂ ಇನ್ಸ್‌ಪೆಕ್ಟರ್‌ರನ್ನು ಶಾಮೀಲು ಮಾಡಿಕೊಂಡು ತನ್ನ ಸಂಬಂಧಿಕರ ಹೆಸರಿನಲ್ಲಿ ಸುಮಾರು 60 ಎಕ್ರೆಗೆ ಅರ್ಜಿಗಳನ್ನು ಕಡತದಲ್ಲಿ ಇರುವಂತೆ ನೋಡಿಕೊಂಡಿದ್ದಾರೆ.

ಅದಾಗಲೇ ಬೇರೆ ಅರ್ಜಿಗಳಿಗೆ ಒಂದು ಎಕ್ರೆ ಮಂಜೂರಾತಿಗೆ 70,000ದಿಂದ 2 ಲಕ್ಷದವರೆಗೆ - ಭೂಮಿಯ ಫಲವತ್ತತೆಯ ಆಧಾರದಲ್ಲಿ - ನಿಗದಿಯಾಗುತ್ತಿತ್ತು. ಈ ದಂಧೆಗೆ ಸಾಕಷ್ಟು ಮಧ್ಯವರ್ತಿಗಳು ಇದ್ದರು. ಕಂದಾಯ ಇಲಾಖೆಯ ಅಧಿಕಾರಿಯಾಗಿದ್ದವರು ಕೂಡ ವ್ಯವಹಾರವನ್ನು ಕುದುರಿಸುತ್ತಿದ್ದರು. ಈ ವ್ಯವಹಾರ ಕುದುರಿಸಿದವರಿಗೆ ಮಾತ್ರ ಮಂಜೂರಾತಿ ಆಗುತ್ತಿತ್ತು. ಬೇರೆಯವರಿಗೆ ಭೂಮಿ ಸಿಗುವುದಿಲ್ಲ. ಒಂದು ಎಕ್ರೆ ಖರೀದಿಸಬೇಕಾದರೆ ಕನಿಷ್ಠ 5 ಲಕ್ಷ ನೀಡಬೇಕು ಎನ್ನುವ ಕಾರಣಕ್ಕೆ ಆ ಹಣ ಪಾವತಿಸಿ ಮಂಜೂರಾತಿ ಮಾಡಿಸಿಕೊಳ್ಳುತ್ತಿದ್ದರು. ತಹಸೀಲ್ದಾರ್ ಆಗಿದ್ದ ಹನುಮಂತರಾಯಪ್ಪ ಈ ಸಮಿತಿಯ ಪದನಿಮಿತ್ತ ಕಾರ್ಯದರ್ಶಿಯಾಗಿ ಸಮಿತಿಯಲ್ಲಿ ಯಾವುದೇ ಪ್ರತಿರೋಧ ವ್ಯಕ್ತಪಡಿಸದೇ ತನ್ನ ಪಾಲಿನ ಹಣ ಪಡೆದು ಮಂಜೂರಾತಿಗೆ ಒಪ್ಪಿಗೆ ನೀಡುತ್ತಾ ಬಂದಿದ್ದರು. ವ್ಯಾಪಕವಾಗಿ ಹಾಗೂ ಬಹಿರಂಗವಾಗಿ ಈ ದಂಧೆ ನಡೆಯುತ್ತಿದ್ದು ಕಾಂಗ್ರೆಸಿಗರಿಗೆ ಈ ವಿಚಾರ ತಿಳಿದಿದ್ದರೂ ಅವರು ಈ ಬಗ್ಗೆ ಪ್ರತಿರೋಧವನ್ನೇ ತೋರಲಿಲ್ಲ.

ಲೋಕಾಯುಕ್ತಕ್ಕೆ ದೂರು

20-3-2013ರಲ್ಲಿ ಈ ಅಕ್ರಮಗಳ ಬಗ್ಗೆ ವಿಧಾನಪರಿಷತ್ತಿನ ಮಾಜಿ ಸದಸ್ಯ ಹಾಗೂ ಭ್ರಷ್ಟಾಚಾರದ ವಿರುದ್ಧ ನಿರಂತರವಾಗಿ ಹೋರಾಟ ಮಾಡುತ್ತಿರುವ ಎ.ಕೆ.ಸುಬ್ಬಯ್ಯ ಬೆಂಗಳೂರಿನ ಲೋಕಾಯುಕ್ತ ಕಚೇರಿಗೆ ಪುಕಾರು ನೀಡಿದರು. ತಮ್ಮ ಪುಕಾರಿನಲ್ಲಿ ಬೇರೆಯವರಿಗೆ ಭೂಮಂಜೂರಾತಿ ಮಾಡಲು ಹಣ ನಿಗದಿಪಡಿಸಿರುವುದನ್ನು ಕೂಡ ಅವರು ತಿಳಿಸಿದ್ದರು.

ಅಕ್ರಮಗಳು ಆಗಿರುವುದು ಸಾಬೀತಾಗಿದೆ ಎಂದು ಲೋಕಾಯುಕ್ತ ತನಿಖೆ ನಡೆಸಿ ಎಂದು ಹೇಳಿತ್ತು. ಆದರೆ ಚಾರ್ಜ್‌ಶೀಟ್ ಸಲ್ಲಿಸಲೇ ಇಲ್ಲ. ಅಕ್ರಮವಾಗಿ ಮಂಜೂರಾತಿ ಆಗಿರುವ ಪ್ರಕರಣಗಳನ್ನು ರದ್ದುಪಡಿಸಬೇಕು ಎಂದು ಕಂದಾಯ ಇಲಾಖೆಗೆ ಲೋಕಾಯುಕ್ತ ತಿಳಿಸಿತ್ತು.

ಉಪವಿಭಾಗಾಧಿಕಾರಿಯವರ ಮತ್ತೊಂದು ಅಕ್ರಮ

ಮಂಜೂರಾತಿ ಆಗಿರುವುದು ಅಕ್ರಮವಾಗಿದ್ದರೆ ಅದನ್ನು ರದ್ದುಪಡಿಸಬೇಕು ಎಂದು ಲೋಕಾಯುಕ್ತ ಹೇಳಿದರೆ ಉಪವಿಭಾಗಾಧಿಕಾರಿ ಯಾವ ಪ್ರಕರಣದಲ್ಲಿ ಅಕ್ರಮವಾಗಿದೆ ಎಂದು ಪರಿಶೀಲಿಸುವ ಗೋಜಿಗೇ ಹೋಗಲಿಲ್ಲ. 'ಕೋಣ ಕರು ಹಾಕಿದೆ' ಎಂದು ಹೇಳಿದಾಗ 'ಕಟ್ಟಿ ಹಾಕು' ಎನ್ನುವಂತೆ ಪರಿಶೀಲಿಸುವ ಶ್ರಮವನ್ನು ತೆಗೆದುಕೊಳ್ಳಲಿಲ್ಲ. ಬದಲಿಗೆ ಆ ಅವಧಿಯಲ್ಲಿ ಯಾರಿಗೆಲ್ಲ ಮಂಜೂರಾತಿ ಆಗಿತ್ತೋ ಅವೆಲ್ಲವನ್ನೂ ರದ್ದು ಮಾಡಿದರು. ಇದರಿಂದ ಸುಮಾರು 400ರಿಂದ 500 ಮಂದಿಗೆ ಆ ಅವಧಿಯಲ್ಲಿ ಮಂಜೂರಾತಿ ಆಗಿದ್ದು ಅವೆಲ್ಲವೂ ರದ್ದುಗೊಂಡಿದ್ದು, ಅವರೆಲ್ಲರೂ ಈಗ ಉಚ್ಚ ನ್ಯಾಯಾಲಯಕ್ಕೆ ಹೋಗುವ ಪರಿಸ್ಥಿತಿ ಉದ್ಭವಿಸಿದೆ.

ಕೆಲವರು ಫಾರಂ 50ನ್ನು ಮತ್ತೆ ಕೆಲವರು ಫಾರಂ 53ನ್ನು ಸಲ್ಲಿಸಿದ್ದರು. ಕಾಫಿ ಕೃಷಿ ಮಾಡಿದವರು ಅರ್ಜಿಯನ್ನು ಬದಲಾಯಿಸಬೇಕಾಗಿತ್ತು. ಅದು ಕೇವಲ ಒಂದು ತಾಂತ್ರಿಕ ದೋಷ. ಅದನ್ನು ಮುಂದಿಟ್ಟುಕೊಂಡು ಉಪವಿಭಾಗಾಧಿಕಾರಿಗಳು ಯಾರಿಗೆಲ್ಲ ಆ ಅವಧಿಯಲ್ಲಿ ಮಂಜೂರಾ[illegible] ಎಂಬುದರ ಮಾಹಿತಿಯನ್ನು ಪಡೆದು, ಅವರಿಗೆ ನೋಟಿಸು ನೀಡಿ, ಯಾವುದೇ ರೀತಿಯಲ್ಲಿ ವಿಚಾರಣೆಯ ಮಾಡದೆ ರದ್ದು ಮಾಡಿದ್ದಾರೆ. ಇದು ಬಡಜನತೆಯ ಪಾ[illegible] ಆಗಿರುವಂತಹ ಅನ್ಯಾಯ ಎಂದೇ ಹೇಳಬೇಕಾಗಿ[illegible] ಉಳ್ಳವರದ್ದು ರದ್ದಾಗಬೇಕು ಎನ್ನುವುದರಲ್ಲಿ ಸಂಶಯವಿ[illegible] ಆದರೆ ಇಲ್ಲಿ ಆಗಿರುವುದೇ ಬೇರೆ. ನೈಜ ಫಲಾನುಭವಿ[illegible] ಮಂಜೂರಾತಿಯನ್ನು ರದ್ದು ಮಾಡುವ ಮೂ[illegible] ಬಡವರ್ಗದವರನ್ನು ಸಂಕಷ್ಟಕ್ಕೆ ತಳ್ಳಲಾಗಿದೆ.

ಲೋಕಾಯುಕ್ತದಿಂದ ಚಾರ್ಜ್‌ಶೀಟ್

ನಿರಂತರವಾಗಿ ಒತ್ತಡವನ್ನು ಹೇರಿದ್ದೇ ಅಲ್ಲದೆ, ತಾ[illegible] ಸಲ್ಲಿಸಿದ್ದ ಪುಕಾರಿನ ಸ್ಥಿತಿ ಏನಾಗಿದೆ ಎಂಬುದರ [illegible] ಸುಬ್ಬಯ್ಯ ಬೆನ್ನು ಹತ್ತಿದ್ದ ಕಾರಣ, ಅವರ ಗಮನಕ್ಕೆ ಹ[illegible] ವಿಚಾರಗಳು ಬಂದವು. ತನಿಖೆಯ ವೇಳೆಯಲ್ಲಿ ಕಡತ[illegible] ನಾಪತ್ತೆಯಾಗುತ್ತಿದ್ದದ್ದು, ತನಿಖೆ ಪೂರ್ಣಗೊಂಡರೂ ಕೆಲ[illegible] ವಿರುದ್ಧ ದೋಷಾರೋಪಣಾ ಪಟ್ಟಿ ಸಲ್ಲಿಸಲು ಸರಕಾ[illegible] ಅನುಮತಿ ಸಿಗದೇ ಇದ್ದದ್ದು, ಇಂತಹ ಹಲವು ಅಕ್ರಮ[illegible] ಈ ಹಗರಣದಲ್ಲಿ ಸಂಭವಿಸಿದ್ದವು. ಸುಬ್ಬಯ್ಯ ಅ[illegible] ಸಾಕಷ್ಟು ಪ್ರಭಾವಿಯಾಗಿರುವ ಕಾರಣ ಅದರ ಬೆನ್ನು[illegible] ಇಡೀ ಹಗರಣವನ್ನು ಒಂದು ಹಂತಕ್ಕೆ ಹೊರತಂದಿದ[illegible] ಕೊನೆಗೆ ತಾವು ಚಾರ್ಜ್ ಶೀಟ್ ಸಲ್ಲಿಸದಿದ್ದರೆ ಸುಬ್ಬಯ್ಯನ[illegible] ಬಿಡುವುದಿಲ್ಲ ಎಂಬುದನ್ನು ಮನಗಂಡ ಲೋಕಾಯು[illegible] ಅಧ್ಯಕ್ಷರಾಗಿದ್ದ ಮಂಡೇಪಂಡ ಸುಜಾ ಕುಶಾಲಪ್ಪರವ[illegible] ಮೊದಲನೆಯ ಆರೋಪಿಯಾಗಿಯೂ, ಈ ಸಮಿತಿ[illegible] ಸದಸ್ಯರಾಗಿದ್ದ ಕೇಳಪಂಡ ಸುಧೀರ್, ಪುಟ್ಟಸ್ವಾ[illegible] ಮಂಡೇಪಂಡ ಮೈನಾ, ಕ್ರಮವಾಗಿ ಎರಡರಿಂದ ನಾ[illegible] ಆರೋಪಿಗಳಾಗಿಯೂ, ತಹಸೀಲ್ದಾರರಾಗಿದ್ದ ಹನುಮಂತರಾಯಪ್ಪ ಐದನೇ ಆರೋಪಿಯಾಗಿ[illegible] ಉಳಿದ ನಾಲ್ಕು ಮಂದಿ ಸಿಬ್ಬಂದಿಗಳು ಸೇರಿ [illegible] ಒಂಬತ್ತು ಮಂದಿ ಈ ಪ್ರಕರಣದ ಮುಖ್ಯ ಆರೋಪಿಗಳ[illegible] ಲೋಕಾಯುಕ್ತವು ಮಡಿಕೇರಿಯ ಸೆಷನ್ಸ್ ನ್ಯಾಯಾಲಯ[illegible] ಸುಮಾರು 740 ಪುಟಗಳ ಎರಡು ಸಂಪುಟಗಳಲ್ಲಿ[illegible] ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿದೆ.

ಲೋಕಾಯುಕ್ತವು ಒಟ್ಟು ಒಂಬತ್ತು ಫಲಾನುಭವಿಗ[illegible] ಅನರ್ಹ ಫಲಾನುಭವಿಗಳು ಎಂದು ಪತ್ತೆಹಚ್ಚಿದೆ. [illegible] ಅಲ್ಲದೆ, ಅವರುಗಳು 44 ಎಕ್ರೆ ಜಮೀನನ್ನು [illegible] ದಾಖಲೆ ಸೃಷ್ಟಿಸಿ, ಮಂಜೂರಾತಿ ಮಾಡಿಕೊಳ್ಳಲು ಪ್ರಯ[illegible] ದ್ದಾರೆ ಎಂದು ಹೇಳಿದೆ. ಈ ವಿಚಾರಗಳು ಅಕ್ರಮ-ಸ[illegible] ಸಮಿತಿಯ ಅಧ್ಯಕ್ಷರು ಮತ್ತು ಕಾರ್ಯದರ್ಶಿ ಹಾ[illegible] ಸದಸ್ಯರ ಗಮನಕ್ಕೆ ಬಂದಿತ್ತು ಹಾಗೂ ವಿಚಾರದ ಅ[illegible] ಇದ್ದರೂ ತಮ್ಮ ಅಧಿಕಾರವನ್ನು ದುರುಪಯೋಗ ಪ[illegible] ಕೊಂಡಿದ್ದಾರೆ ಎಂದು ಹೇಳಿ ಚಾರ್ಜ್‌ಶೀಟ್ ಸಲ್ಲಿಸಿ[illegible]


ಇದು ತೃಪ್ತಿ ತರುವಂತಹ ತನಿಖೆಯಂತೂ [illegible] ಸುಬ್ಬಯ್ಯನವರು ಮಾಡಿದ್ದ ಆರೋಪ ಬೇನಾಮಿ ಹೆಸ[illegible] ಮಂಜೂರಾತಿ ಮಾಡಿಸಿಕೊಂಡು ಭೂಮಿಯನ್ನು ಕಬಳಿ[illegible] ಯತ್ನ. ಹಾಗೂ ಸಾಕಷ್ಟು ಕಡತಗಳನ್ನು ಹಣ ವಿಲೇ[illegible] ಮಾಡಿ, ಮಂಜೂರಾತಿ ಮಾಡಲಾಗಿತ್ತು. ಆ ವಿಚಾ[illegible] ಬಗ್ಗೆ ಯಾವುದೇ ತನಿಖೆಯನ್ನು ನಡೆಸಿದಂತೆ ಕಂಡುಬರು[illegible]

ಪ್ರತಿಕ್ರಿಯಿಸದ ಕಾಂಗ್ರೆಸ್

ಬಿಜೆಪಿಯ ಆಡಳಿತ ಅವಧಿಯಲ್ಲಿ ನಡೆದಿರುವ[illegible] ಭಾರೀ ಭ್ರಷ್ಟಾಚಾರ ಇದು. ಜಿಲ್ಲಾ ಬಿಜೆಪಿ[illegible] ಅಧ್ಯಕ್ಷರಾಗಿದ್ದವರು ಮತ್ತು ಶಾಸಕರ ಸಹೋದರರಾಗಿರುವ[illegible] ಮಾಡಿರುವ ಅಕ್ರಮ ಇದು. ಬಿಜೆಪಿಯನ್ನು ಸದೆಬಡಿಯ[illegible] ಸಿಕ್ಕಂತಹ ಅತ್ಯುತ್ತಮವಾದ ಅವಕಾಶವಿದು. [illegible] ಮಂಡಳಿಯ ಅಧ್ಯಕ್ಷ ಸ್ಥಾನ ಪಡೆಯುವುದು [illegible] ಕಾಂಗ್ರೆಸಿನಲ್ಲಿಯೇ ತಮ್ಮ ವಿರೋಧಿಗಳನ್ನು ಸದೆಬಡಿ[illegible] ವುದು ಹೇಗೆ ಎಂಬ ಲೆಕ್ಕಾಚಾರದಲ್ಲಿಯೇ [illegible] ತೊಡಗಿಕೊಂಡಿರುವ ಕಾಂಗ್ರೆಸಿಗರು ಇಲ್ಲಿಯವರೆಗೆ ಯಾ[illegible] ರೀತಿಯಲ್ಲಿ ಇದಕ್ಕೆ ಪ್ರತಿಕ್ರಿಯಿಸಲಿಲ್ಲ. ಇದನ್ನು ಕಾಂ[illegible] ನಿಷ್ಕ್ರಿಯತೆ ಎನ್ನಬೇಕೋ ಅಥವ ನಿರ್ವೀರ್ಯ[illegible] ಎನ್ನಬೇಕೋ ತಿಳಿಯದು.

■ ಮನು ಶೆ[illegible]

ಮದ್ದೂರು: ತಮ್ಮಣ್ಣನನ್ನು ಸೋಲಿಸಲು ಯೋಗೇಶ್ವರ್ ಎಂಬ ದಾಳ



ಜೆಡಿಎಸ್ ಪಕ್ಷದ ಭದ್ರಕೋಟೆಯಾದ ಮದ್ದೂರಿನಲ್ಲೀ ದೇವೇಗೌಡರ ಬೀಗ ಶಾಸಕ ಡಿ.ಸಿ.ತಮ್ಮಣ್ಣರನ್ನು ಮಕಾಡೆ ಮಲಗಿಸಲು ಭರ್ಜರಿ ಪ್ಲಾನೊಂದು ಸಿದ್ಧವಾಗಿದೆ. ಪಕ್ಕದ ಚನ್ನಪಟ್ಟಣ ಶಾಸಕ ಸಿ.ಪಿ.ಯೋಗೇಶ್ವರ್‌ನನ್ನು ಮದ್ದೂರಿಗೆ ಕರೆತಂದು ಮುಂದಿನ ವಿಧಾನಸಭಾ ಚುನಾವಣೆಯಲ್ಲಿ ತಮ್ಮಣ್ಣನಿಗೆ ಖೆಡ್ಡ ತೋಡಬೇಕೆಂಬುದು ಆತನ ವಿರೋಧಿಗಳ ಓನ್‌ಲೈನ್ ಅಜೆಂಡಾ. ತಮ್ಮಣ್ಣ ವಿರೋಧಿಗಳ ಈ ಕುತಂತ್ರಗಾರಿಕೆಗೆ ಎಸ್ ಎಂದಿರುವ ಯೋಗೇಶ್ವರ್ ಕೂಡ ಒಂದು ಕೈ ಏಕೆ ನೋಡಬಾರದು ಎಂದು ಮದ್ದೂರಿನ ಅಖಾಡಕ್ಕೆ ನುಗ್ಗೇ ಬಿಟ್ಟಿದ್ದಾನೆ. ಮದ್ದೂರಿಗೆ ಯೋಗೇಶ್ವರ್ ಪದೇಪದೇ ಭೇಟಿ ನೀಡುತ್ತಿರುವುದು, ಅದಕ್ಕೆ ತಮ್ಮಣ್ಣ ವಿರೋಧಿಗಳ ಭೋಪರಾಕ್ ಹಾಕುತ್ತಿರುವುದು ತಮ್ಮಣ್ಣನ ಸಿಟ್ಟಿಗೆ ಕಾರಣವಾಗಿದೆ. "ಅವನು ಬರಲಿ ನಾನು ನೋಡಿಕೊಳ್ತೇನೆ" ಎಂದು ತಮ್ಮಣ್ಣ ಪ್ರತಿ ಸವಾಲು ಹಾಕಿ ತೋಳೇರಿಸಿದ್ದಾರೆ.

ಮದ್ದೂರಿಗೆ ಯೋಗೇಶ್ವರ್ ಬರ್ತಾರಾ!

ರಾಜಕೀಯಕ್ಕೆ ಬರುವ ಮುನ್ನ ಕನ್ನಡ ಸಿನಿಮಾಗಳಲ್ಲಿ ಸಣ್ಣಪುಟ್ಟ ಪಾತ್ರಗಳನ್ನು ಮಾಡಿಕೊಂಡಿದ್ದ ಯೋಗೇಶ್ವರ್ ಮೆಗಾಸಿಟಿ ಡೆವಲಪರ್ಸ್ ಎಂಬ ರಿಯಲ್ ಎಸ್ಟೇಟ್ ಅಂಗಡಿ ತೆರೆದು ಜನರಿಗೆ ಉಂಡೆ ನಾಮ ಹಾಕಿಯೇ ಕೋಟಿ ಕೋಟಿ ನುಂಗಿದ. ಜನರಿಗೆ ಸೈಟು ಕೊಡದೆ ವಂಚಿಸಿ ಕೋಟ್ಯಾಂತರ ಹಣ ಮಾಡಿಕೊಂಡ ಯೋಗೇಶ್ವರ್ 'ಮೆಗಾಸಿಟಿ ದಗಾಕೋರ' ಎಂದೇ ಕರೆಸಿಕೊಂಡ. ಹಾಗೆ ದುಡಿದ ಹಣದಲ್ಲೇ 'ಉತ್ತರ ಧ್ರುವದಿಂ ದಕ್ಷಿಣ ಧ್ರುವಕೂ', 'ಸೈನಿಕ' ಎಂಬ ಅದ್ದೂರಿ ಸಿನಿಮಾಗಳನ್ನು ನಿರ್ಮಿಸಿದ. ಆತನಿಗೆ ಕಿಂಚಿತ್ತೂ ನಟನೆ ಬರದಿದ್ದರೂ ತಾನೇ ಹೀರೋ ಆಗಿ ಒಂದಷ್ಟು ಜನರಿಗೆ ಪರಿಚಿತನಾದ.

ರಿಯಲ್ ಎಸ್ಟೇಟ್ ವ್ಯವಹಾರದಲ್ಲಿ ಜನರಿಗೆ ವಂಚಿಸಿ ಕೋಟಿ ಕೋಟಿ ಹಣಗಳಿಸಿದ ಯೋಗೇಶ್ವರ್ ಮೇಲೆ ಈಗಲೂ ವಂಚನೆ ಕೇಸುಗಳಿವೆ. ರಿಯಲ್ ಎಸ್ಟೇಟ್‌ನಲ್ಲಿ ಗಳಿಸಿದ್ದ ಹಡಬೆ ಹಣವನ್ನು ರಕ್ಷಿಸಿಕೊಳ್ಳಲೆಂದೇ ತನ್ನೂರು ಚಕ್ಕರೆ ಗ್ರಾಮವಿರುವ ಚನ್ನಪಟ್ಟಣ ವಿಧಾನಸಭಾ ಕ್ಷೇತ್ರಕ್ಕೆ ವಕ್ಕರಿಸಿದ. ಹಬ್ಬ-ಹರಿದಿನ, ಮದುವೆ-ಮುಂಜಿ, ಗಣೇಶೋತ್ಸವ-ರಾಜ್ಯೋತ್ಸವ ಎಂದೆಲ್ಲಾ ಹಣ ಚೆಲ್ಲಿದ ಯೋಗೇಶ್ವರ್‌ನಲ್ಲಿದ್ದ ಭರ್ಜರಿ ಹಣ ಕಂಡೇ ಕೆಲವೇ ದಿನಗಳಲ್ಲಿ ಸಾವಿರಾರು ಸಂಖ್ಯೆಯಲ್ಲಿ ಮುಖಂಡರು-ಯುವಕರು ಆತನಿಗೆ ಹತ್ತಿರವಾದರು. ಅವರನ್ನು ಬಳಸಿಕೊಂಡೇ ಪಕ್ಷೇತರನಾಗಿ ಚನ್ನಪಟ್ಟಣದಲ್ಲಿ ಸ್ಪರ್ಧಿಸಿ ಗೆದ್ದು ಶಾಸಕನಾಗೇ ಬಿಟ್ಟ. ಸಮಯಸಾಧಕ ರಾಜಕಾರಣದ ಎಲ್ಲಾ ತಂತ್ರಗಳನ್ನು ಅರಿತ ಯೋಗೇಶ್ವರ್ ಯಾವ ಪಕ್ಷ ಅಧಿಕಾರದಲ್ಲಿದ್ದರೂ ಆ ಪಕ್ಷದಿಂದ ಕೆಲಸಕಾರ್ಯಗಳನ್ನು ಮಾಡಿಸಿಯೇ 2ನೇ ಬಾರಿಯೂ ಪಕ್ಷೇತರನಾಗಿ ಗೆದ್ದುಬಿಟ್ಟ.

ಅದಾದನಂತರ ಬಿಜೆಪಿಗೆ ಹಾರಿ ಅರಣ್ಯ ಮಂತ್ರಿಯಾಗಿ ಮೆರೆದ. ಅದೇ ಹೊತ್ತಿಗೆ ರಾಮನಗರ ಜಿಲ್ಲೆಯ ಮೇಲೆ ಹಿಡಿತ ಸಾಧಿಸಲು ಪ್ರಯತ್ನಿಸುತ್ತಿದ್ದ ಡಿ.ಕೆ.ಶಿವಕುಮಾರ್ ಮೇಲೆಯೇ ಎರಿಹೋದ. ಅಕ್ರಮವಾಗಿ ಕರಿಕಲ್ಲು ಗಣಿಗಾರಿಕೆ ಮಾಡುತ್ತಿದ್ದಾರೆಂದು ಶಿವಕುಮಾರ್ ಹಾಗೂ ಆತನ ಸೋದರ ಡಿ.ಕೆ.ಸುರೇಶ್‌ನನ್ನೇ ತಡವಿಕೊಂಡ ಯೋಗೇಶ್ವರ್ ಬಿಜೆಪಿಯಲ್ಲಿದ್ದಷ್ಟು ದಿನ ಅವರಿಬ್ಬರಿಗೆ ಕಾಟ ಕೊಟ್ಟ.

ಆದರೂ 2013ರ ಚುನಾವಣೆ ವೇಳೆಗೆ ಕಾಂಗ್ರೆಸ್‌ಗೆ ಹಾರಿ ಟಿಕೆಟ್ ಪಡೆಯಲು ಹೋದ ಯೋಗೇಶ್ವರ್ ಬಾಲವನ್ನು ಶಿವಕುಮಾರ್ ಕಟ್ ಮಾಡಿದರು. ನಂತರ ಮುಲಾಯಂ ಸಿಂಗ್ ಯಾದವ್‌ರ ಕಾಲಿಗೆ ಬಿದ್ದು ಸಮಾಜವಾದಿ ಪಕ್ಷಕ್ಕೆ ಸೇರಿ ಸೈಕಲ್ ಗುರುತಿನಲ್ಲಿ ನಿಂತ ಯೋಗೇಶ್ವರ್‌ನನ್ನು ಚನ್ನಪಟ್ಟಣದ ಜನ ಮತ್ತೆ ಗೆಲ್ಲಿಸಿ ಬಿಟ್ಟರು. ಶಾಸಕನಾದ ಕೆಲವೇ ತಿಂಗಳಲ್ಲಿ ಶಿವಕುಮಾರ್ ಜೊತೆ ಕೈಜೋಡಿಸಿ ಕಾಂಗ್ರೆಸ್ ಪಕ್ಷ ಸೇರಿಕೊಂಡ.


ಈಗ ಪರಿಸ್ಥಿತಿ ಯಾವ ರೀತಿ ಇದೆ ಎಂದರೆ ಚನ್ನಪಟ್ಟಣದಲ್ಲಿ ಯೋಗೇಶ್ವರ್ ಮುಂದೆ ಯಾರೇ ನಿಂತರೂ ಗೆಲ್ಲುವುದು ಕಷ್ಟ ಎಂಬ ವಾತಾವರಣ ನಿರ್ಮಾಣವಾಗಿದೆ. ಇಂತಹ ಯೋಗೇಶ್ವರನನ್ನ ಮಣಿಸಿ ಗೆಲ್ಲುವುದು ಸಾಧ್ಯವಿಲ್ಲ ಎಂದರಿತ ಶಿವಕುಮಾರ್ ಆತನನ್ನು ಒಲೈಸಿಕೊಂಡೇ ರಾಜಕಾರಣ ಮಾಡಬೇಕೆಂಬುದನ್ನು ಕಲಿತರು. ಬೆಂಗಳೂರು ಗ್ರಾಮಾಂತರ ಲೋಕಸಭಾ ಕ್ಷೇತ್ರದಿಂದ ತನ್ನ ತಮ್ಮ ಸುರೇಶ್‌ನನ್ನು ಉಪಚುನಾವಣೆಯಲ್ಲಿ ಗೆಲ್ಲಿಸಿ ತನ್ನ ಸಾಮರ್ಥ್ಯ ತೋರಿಸಬೇಕೆಂದು ನಿರ್ಧರಿಸಿದ ಶಿವಕುಮಾರ್ ಯೋಗೇಶ್ವರ್ ಜೊತೆ ಎಷ್ಟೇ ವೈಮನಸ್ಸಿದ್ದರೂ ರಾಜಿ ಮಾಡಿಕೊಂಡರು. ಹಾಗಾಗಿ ಉಪಚುನಾವಣೆ ಹಾಗೂ 2014ರ ಲೋಕಸಭಾ ಚುನಾವಣೆಯಲ್ಲಿ ಸುರೇಶ್ ಗೆದ್ದು ಸಂಸದನಾದರು.

ಇಂತಹ ಕರಾಳ ಹಿನ್ನೆಲೆಯ ಯೋಗೇಶ್ವರ್‌ನನ್ನು ಮದ್ದೂರಿಗೆ ಕರೆತರಲು ತಮ್ಮಣ್ಣನ ವಿರೋಧಿ ಪಡೆ ಈಗ ಸಿದ್ಧವಾಗಿದೆ.


ಬರಲಿ ನೋಡ್ತೇನೆ

ಈಗಾಗಲೇ ಹಲವು ಬಾರಿ ತಮ್ಮಣ್ಣನ ವಿರೋಧಿಗಳು ಯೋಗೇಶ್ವರ್‌ನನ್ನು ಮದ್ದೂರಿಗೆ ಕರೆಸಿ ಸನ್ಮಾನ ಮಾಡಿ ಇಲ್ಲಿಂದಲೇ ಸ್ಪರ್ಧಿಸಬೇಕೆಂದು ಒತ್ತಾಯ ಮಾಡಿದ್ದಾರೆ. ತಮ್ಮಣ್ಣನ ವಿರೋಧಿ ಪಡೆಯ ಈ ಒತ್ತಾಯದಿಂದ ಖುಷಿಯಾಗಿರುವ ಯೋಗೇಶ್ವರ್ ಯಾಕೆ ಒಂದು ಕೈ ನೋಡಬಾರದು ಎಂದು ಯೋಚಿಸುತ್ತಿದ್ದಾನೆ.


ರಾಜಕೀಯ ಮಹತ್ವಾಕಾಂಕ್ಷಿಯಾಗಿರುವ ಯೋಗೇಶ್ವರ್ ಇತ್ತ ಮದ್ದೂರಿನಲ್ಲಿ ತಾನು ಸ್ಪರ್ಧಿಸಿ, ಅತ್ತ ಚನ್ನಪಟ್ಟಣದಲ್ಲಿ ಪುತ್ರಿ ನಿಶಾಳನ್ನು ನಿಲ್ಲಿಸಿ ಎರಡೂ ಕ್ಷೇತ್ರಗಳನ್ನು ಗೆದ್ದುಕೊಳ್ಳುವ ದೂ(ದು)ರಾಲೋಚನೆಯಲ್ಲಿದ್ದಾನೆ. ಮದ್ದೂರು, ಚನ್ನಪಟ್ಟಣ ಎರಡೂ ಕ್ಷೇತ್ರಗಳಲ್ಲಿ ಗೆದ್ದರೆ ಮಂತ್ರಿಯಾಗುವ ಅವಕಾಶ ಜಾಸ್ತಿ; ಅಲ್ಲದೆ ಒಕ್ಕಲಿಗ ಜನಾಂಗದ ಪ್ರಭಾವಿ ನಾಯಕನಾಗಿಯೂ ಹೊರಹೊಮ್ಮಬಹುದು ಎಂಬ ಕುಟಿಲತೆ ಯೋಗೇಶ್ವರ್‌ನದ್ದು.



ಕುಮಾರಸ್ವಾಮಿ




ಚೆಲುವರಾಯ ಸ್ವಾಮಿ




ಡಿ.ಕೆ. ಶಿವಕುಮಾರ್

ಚನ್ನಪಟ್ಟಣದಲ್ಲಿ ಯೋಗೇಶ್ವರ್ ಪರ ಭಾರೀ ಅಲೆಯಿದ್ದರೂ ರಾಮನಗರ ಜಿಲ್ಲೆಯಲ್ಲಿ ಪವರ್ ಮಿನಿಸ್ಟರ್ ಶಿವಕುಮಾರ್ ಮತ್ತು ಆತನ ತಮ್ಮ ಸುರೇಶ್‌ರದ್ದೇ ದರ್ಬಾರು. ಅತ್ತ ರಾಮನಗರದಲ್ಲಿ ಹೆಚ್.ಡಿ.ಕುಮಾರಸ್ವಾಮಿ ಪ್ರಾಬಲ್ಯವಿದ್ದರೆ, ಇತ್ತ ಮಾಗಡಿಯಲ್ಲಿ ಬಾಲಕೃಷ್ಣನದ್ದೇ ಆರ್ಭಟ. ಡಿ.ಕೆ. ಸಹೋದರರು ರಾಮನಗರ ಜಿಲ್ಲೆಯ ಮೇಲೆ ಹಿಡಿತ ಸಾಧಿಸಿರುವುದರಿಂದ ಯೋಗೀಶ್ವರ್‌ಗೆ ಅಲ್ಲಿ ಒಕ್ಕಲಿಗ ನಾಯಕನಾಗಿ ಬೆಳೆಯುವುದು ಅಸಾಧ್ಯದ ಮಾತು. ಹಾಗಾಗಿ ಮಂಡ್ಯದಲ್ಲಿ ಕಾಂಗ್ರೆಸ್ ಪಕ್ಷದಲ್ಲಿ ನಾಯಕತ್ವದ ಕೊರತೆ ಇರುವುದರಿಂದ ಯೋಗೇಶ್ವರ್ ಮಂಡ್ಯದಿಂದ ಸ್ಪರ್ಧಿಸುವ ಆಲೋಚನೆಯಲ್ಲಿದ್ದಾನೆ. ಕಾಂಗ್ರೆಸ್ ಪಕ್ಷ ಮುನ್ನಡೆಸಲು ಸರಿಯಾದ ಕಟ್ಟಾಳುವಿನ ಕೊರತೆ ಇರುವುದರಿಂದ ಮದ್ದೂರಿಗೆ ಹೋಗಿ ಗೆದ್ದು ಮಂಡ್ಯ ಜಿಲ್ಲೆಯ ಮೇಲೆ ಹಿಡಿತ ಸಾಧಿಸುವ ಯೋಚನೆ ಯೋಗೇಶ್ವರ್‌ನದ್ದಾಗಿದೆ.

ಯೋಗೇಶ್ವರ್‌ನ ಈ ದೂರಾಲೋಚನೆ ವಿರುದ್ಧ ಸಿಟ್ಟಿಗೆದ್ದಿರುವ ತಮ್ಮಣ್ಣ 'ಅವನು ಬರಲಿ ಒಂದು ಕೈ ನಾನೂ ನೋಡ್ತೇನೆ' ಎಂದು ಗುಟುರು ಹಾಕುತ್ತಿದ್ದಾರೆ. ಮದ್ದೂರಿನಲ್ಲಿ ಹರಿಯುವ ಶಿಂಷಾ ನದಿ ನೀರನ್ನು ಅಧಿಕಾರ ಬಳಸಿ ಚನ್ನಪಟ್ಟಣದ ಕೆರೆಗಳಿಗೆ ತುಂಬಿಸಿರುವ ಯೋಗೇಶ್ವರ್‌ಗೆ ಸೆಡ್ಡು ಹೊಡೆಯುವ ಸಲುವಾಗಿ ತಮ್ಮಣ್ಣ ನೀರಾವರಿ ಯೋಜನೆಗಳತ್ತ ಗಮನ ಹರಿಸಿದ್ದಾರೆ. ಜೆಡಿಎಸ್ ಭದ್ರಕೋಟೆಯಾದ ಮದ್ದೂರಿನಲ್ಲಿ ತಮ್ಮಣ್ಣನ ಹಿಡಿತದಲ್ಲಿ ಹತ್ತಿರತ್ತಿರ 25 ಸಾವಿರಕ್ಕೂ ಹೆಚ್ಚು ಮತಗಳಿವೆ. ಜೆಡಿಎಸ್ ಪಕ್ಷದ ಸಾಂಪ್ರದಾಯಿಕ ಮತಗಳು ಸೇರಿ ಮತ್ತೆ ಜೆಡಿಎಸ್ ಪಕ್ಷದಿಂದ ಗೆಲ್ಲುವುದು ಕಷ್ಟವಾಗಲ್ಲ, ತನ್ನಲ್ಲಿರುವ ಹಣ ಬಲದಿಂದ ದೂರವಾಗಿರುವ ಜೆಡಿಎಸ್ ಮುಖಂಡರನ್ನು ತನ್ನತ್ತ ಸೆಳೆಯುವುದು ಅಸಾಧ್ಯವಲ್ಲ, ಜೆಡಿಎಸ್‌ನ ಅಧಿನಾಯಕರಾದ ದೇವೇಗೌಡ ಮತ್ತು ಕುಮಾರಸ್ವಾಮಿ ಅಲೆ ಕ್ಷೇತ್ರದಲ್ಲಿದೆ. ಒಂದು ಬಾರಿ ಇವರಿಬ್ಬರೂ ಬಂದು



ಡಿ.ಸಿ. ತಮ್ಮಣ್ಣ



ಯೋಗೇಶ್ವರ್

ಮಾತನಾಡಿದರೆ ಸಾಕು ಜೆಡಿಎಸ್ ಪಕ್ಷಕ್ಕೆ ನವಚೈತನ್ಯ ತುಂಬಿಕೊಳ್ಳಲಿದೆ ಎಂಬುದು ತಮ್ಮಣ್ಣನಿಗೆ ಚೆನ್ನಾಗಿ ಗೊತ್ತು. ಕಳೆದ ಜಿ.ಪಂ. ಚುನಾವಣೆಯಲ್ಲಿ ಭಾರತೀನಗರದಲ್ಲಿ ತನ್ನ ಪುತ್ರ ಡಿ.ಟಿ.ಸಂತೋಷ್ ಸೋಲಿಗೆ ಕಾರಣಗಳನ್ನು ಹುಡುಕಿರುವ ತಮ್ಮಣ್ಣ ಅವನ್ನೆಲ್ಲಾ ಬಗೆಹರಿಸಿಕೊಂಡಿದ್ದಾರೆ. ಆರು ಜಿ.ಪಂ. ಕ್ಷೇತ್ರಗಳಲ್ಲಿ ಐದನ್ನು ಗೆದ್ದು ತನ್ನ ಸಾಮರ್ಥ್ಯ ತೋರಿಸಿದ್ದಾರೆ.

"ನಾನೂ ಕೂಡ ಇಗ್ಗಲೂರು ಡ್ಯಾಂನಿಂದ ಕೆರೆಗಳನ್ನು ತುಂಬಿಸುವ ಕೆಲಸ ಮಾಡಿದ್ದೇನೆ" ಎಂದು ಸಭೆಗಳಲ್ಲಿ ಯೋಗೇಶ್ವರ್ ವಿರುದ್ಧ ತಮ್ಮಣ್ಣ ಹರಿಹಾಯುತ್ತಿದ್ದಾರೆ. "ಮದ್ದೂರಿನ ಅಭಿವೃದ್ಧಿಗೆ ದುಡಿದಿರುವ ನನ್ನನ್ನು ಮದ್ದೂರು ಜನ ಒಪ್ಪಿಕೊಳ್ಳುತ್ತಾರೆಯೇ ವಿನಃ ಮದ್ದೂರಿಗೆ ನಯಾಪೈಸೆಯ ಕೆಲಸವನ್ನು ಮಾಡದ ಯೋಗೇಶ್ವರ್‌ನನ್ನು ಹೇಗೆ ಒಪ್ಪಿಕೊಳ್ಳುತ್ತಾರೆ. ಬರಲಿ ನಾನು ಒಂದು ಕೈ ನೋಡಿಕೊಳ್ತೇನೆ" ಎಂದು ತೊಡೆ ತಟ್ಟುತ್ತಿದ್ದಾರೆ.

ಜೆಡಿಎಸ್‌ನಲ್ಲಿ ಒಡಕು

ಜಿಲ್ಲೆಯಲ್ಲಿ ಜೆಡಿಎಸ್ ಪಕ್ಷಕ್ಕೆ ಪ್ರತಿ ಚುನಾವಣೆಯಲ್ಲೂ 3-4 ಸ್ಥಾನಗಳು ಕಟ್ಟಿಟ್ಟ ಬುತ್ತಿ. ಒಕ್ಕಲಿಗ ಪಾಳೇಪಟ್ಟಿನ ಜಿಲ್ಲೆಯಲ್ಲಿ ದೇವೇಗೌಡ- ಕುಮಾರಸ್ವಾಮಿ ಮಾತಿಗೆ ಸಾಕಷ್ಟು ಮನ್ನಣೆಯಿದೆ. ಇವರಿಬ್ಬರನ್ನು ಒಕ್ಕಲಿಗ ಜನಾಂಗ ತಮ್ಮ ನಾಯಕರೆಂದು ಒಪ್ಪಿಕೊಂಡಿದೆ. ಈ ಬಲದಿಂದಲೇ ಪ್ರತಿ ವಿಧಾನಸಭೆಯಲ್ಲೂ ಜೆಡಿಎಸ್ ಜಿಲ್ಲೆಯಲ್ಲಿ ಬಂಪರ್ ಬೆಳೆ ತೆಗೆಯುತ್ತಿದೆ. ಆದರೆ ಅಪ್ಪ-ಮಗನ ಮಾತಿಗೆ ಇದುವರೆಗೂ ಎದುರಾಡದಿದ್ದ ನಾಗಮಂಗಲ ಶಾಸಕ ಚಲುವರಾಯಸ್ವಾಮಿ



ಯೋಗೇಶ್ವರ್ ಪುತ್ರಿ ನಿಶಾ

ತಿರುಗಿ ಬಿದ್ದಿರುವುದು ನುಂಗಲಾರದ ತುತ್ತಾಗಿದೆ. ಜಿಲ್ಲೆಯ ರಾಜಕಾರಣದ ಮಟ್ಟಿಗೆ ಚಲುವರಾಯಸ್ವಾಮಿ ಕೂಡ 7 ವಿಧಾನಸಭಾ ಕ್ಷೇತ್ರಗಳಲ್ಲೂ ಒಂದಿಷ್ಟು ಬೆಂಬಲಿಗರನ್ನು ಬೆಳೆಸಿದ್ದಾರೆ. ಯಾವಾಗ ಚಲುವರಾಯಸ್ವಾಮಿ ದೇವೇಗೌಡ-ಕುಮಾರಸ್ವಾಮಿಗೆ ಕೈಕೊಟ್ಟು ಕಾಂಗ್ರೆಸ್ ಸಖ್ಯ ಬೆಳೆಸಿದರೋ ಅಂದಿನಿಂದಲೇ ಜಿಲ್ಲಾ ಜೆಡಿಎಸ್ ಇಬ್ಭಾಗವಾಗಿದೆ. ಹಲವರು ಬಹಿರಂಗವಾಗಿಯೇ ಚಲುವರಾಯಸ್ವಾಮಿ ಜೊತೆ ಗುರುತಿಸಿಕೊಂಡರೆ, ಇನ್ನು ಕೆಲವರು ವಿಧಾನಸಭೆ ಚುನಾವಣೆ ಹತ್ತಿರವಾಗುವ ಸಂದರ್ಭದಲ್ಲಿ ನೋಡೋಣ ಎಂದು ಎರಡೂ ಕಡೆ ಬ್ಯಾಲೆನ್ಸ್ ಮಾಡುತ್ತಿದ್ದಾರೆ.

ಮದ್ದೂರು ತಾಲ್ಲೂಕಿನ ಕೊಪ್ಪ ಹೋಬಳಿ ನಾಗಮಂಗಲ ಕ್ಷೇತ್ರಕ್ಕೆ ಸೇರುವ ಹಿನ್ನೆಲೆಯಲ್ಲಿ ಅಲ್ಲಿ ಚಲುವರಾಯಸ್ವಾಮಿ ಪ್ರಾಬಲ್ಯವಿದೆ. ಕಳೆದ ಮದ್ದೂರು ತಾ.ಪಂ. ಚುನಾವಣೆಯಲ್ಲಿ ಕಾಂಗ್ರೆಸ್ ಬೆಂಬಲದಿಂದ ತನ್ನ ಬೆಂಬಲಿಗರನ್ನು ಅಧ್ಯಕ್ಷ-ಉಪಾಧ್ಯಕ್ಷ ಹುದ್ದೆಯಲ್ಲಿ ಕೂರಿಸಿ ತಮ್ಮಣ್ಣನಿಗೆ ಸೆಡ್ಡು ಹೊಡೆದಿರುವ ಚಲುವರಾಯಸ್ವಾಮಿ ಮುಂದಿನ ಚುನಾವಣೆಯಲ್ಲೂ ತಮ್ಮಣ್ಣನನ್ನು ಸೋಲಿಸಲು ಏನೇನು ಬೇಕೋ ಅದೆಲ್ಲವನ್ನೂ ಮಾಡಲಿದ್ದಾರೆ. ಹಾಗೆಯೇ ಚಲುವರಾಯಸ್ವಾಮಿ ಬೆಂಬಲಿಗ ವಿಧಾನಪರಿಷತ್ ಮಾಜಿ ಸದಸ್ಯ ಬಿ.ರಾಮಕೃಷ್ಣ ಮುಂದಿನ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಯಾಗುವ ಕನಸು ಕಾಣುತ್ತಿದ್ದಾರೆ. ಚಲುವರಾಯಸ್ವಾಮಿ, ರಾಮಕೃಷ್ಣ ಇಬ್ಬರೂ ಸೇರಿದರೆ ತಮ್ಮಣ್ಣ ಎದುಸಿರು ಬಿಡಬೇಕಾಗುತ್ತದೆ. ಮುಂದಿನ ಮುಖ್ಯಮಂತ್ರಿ ಸ್ಥಾನದ ಮೇಲೆ ಕಣ್ಣಿಟ್ಟಿರುವ ಶಿವಕುಮಾರ್ ಕೊಡುವ ಹಣದ ಹೊಳೆ ಹರಿಸಿ ತಮ್ಮಣ್ಣನನ್ನು ಸೋಲಿಸುತ್ತೇವೆ ಎಂದು ಅವರ ವಿರೋಧಿ ಪಡೆ ಕನಸು ಕಾಣುತ್ತಿದೆ.

ಈ ಮಧ್ಯೆ ತಮ್ಮಣ್ಣ ಮೂಲ ಜೆಡಿಎಸ್ ಕಾರ್ಯಕರ್ತರನ್ನು ಕಡೆಗಣಿಸುತ್ತಾ ತನ್ನ ಸುತ್ತಲಿರುವ ಹೊಗಳು ಭಟ್ಟರಿಗೆ ಮಣೆ ಹಾಕುತ್ತಿದ್ದಾರೆ ಎಂದು ಹಲವರು ಕುಮಾರಸ್ವಾಮಿಗೆ ದೂರು ನೀಡಿದ್ದಾರೆ. "ತಮ್ಮಣ್ಣನಿಗೆ ಬುದ್ಧಿ ಹೇಳದಿದ್ದರೆ ನಾವೆಲ್ಲಾ ಬೇರೆ ದಾರಿ ನೋಡಿಕೊಳ್ಳಬೇಕಾಗುತ್ತದೆ" ಎಂದೂ ಎಚ್ಚರಿಕೆ ನೀಡಿದ್ದಾರೆ. ಯೋಗೇಶ್ವರ್ ಮದ್ದೂರಿಗೆ ಬರುವ ಆತಂಕ ಹಾಗೂ ಜೆಡಿಎಸ್ ಮೂಲ ಕಾರ್ಯಕರ್ತರು ಕುಮಾರಸ್ವಾಮಿಗೆ ದೂರು ನೀಡಿದ್ದರಿಂದ ಎಚ್ಚೆತ್ತಿರುವ ತಮ್ಮಣ್ಣ ಅವರ ಮನೆಬಾಗಿಲಿಗೆ ಹೋಗಿ ಸಂಧಾನ ಮಾಡಿಕೊಳ್ಳುತ್ತಿದ್ದಾರೆ.

ಒಟ್ಟಾರೆ ವಿಧಾನಸಭೆ ಚುನಾವಣೆಗೆ ಇನ್ನು ಒಂದೂವರೆ ವರ್ಷ ಇರುವಾಗಲೇ ಮದ್ದೂರು ವಿಧಾನಸಭಾ ಕ್ಷೇತ್ರದಲ್ಲಿ ರಾಜಕೀಯ ಗೇಮ್ ಶುರುವಾಗಿದೆ.


ಆದರೆ ಹಲವರ ಪ್ರಕಾರ ಚತುರ ರಾಜಕಾರಣಿ ಯೋಗೇಶ್ವರ್ ನಾಟಕ ಮಾಡುತ್ತಿದ್ದಾರೆ. ತಾನು ಮದ್ದೂರಿಗೆ ಹೋಗುತ್ತೇನೆ ಎನ್ನುವ ಡ್ರಾಮಾ ಮಾಡುತ್ತಾ ಸ್ವಕ್ಷೇತ್ರದಲ್ಲಿ ಜನರ ಸಿಂಪಥಿ ಗಳಿಸುವುದು ಯೋಗೇಶ್ವರ್ ಪ್ಲಾನ್. 'ಅಣ್ಣಾ ಮದ್ದೂರಿಗೆ ಹೋಗುವುದು ಬೇಡ, ಚನ್ನಪಟ್ಟಣದಿಂದಲೇ ಸ್ಪರ್ಧಿಸು, ನಾವೇ ಗೆಲ್ಲಿಸುತ್ತೇವೆ' ಎನ್ನುವ ಪರಿಸ್ಥಿತಿ ನಿರ್ಮಿಸಿಕೊಳ್ಳುವುದು ಯೋಗೇಶ್ವರ್‌ನ ಅಸಲಿ ಪ್ಲಾನ್ ಎಂಬುದು ಮೇಲ್ನೋಟಕ್ಕೆ ಕಂಡುಬರುತ್ತಿರುವ ಚಿತ್ರಣ.


ಮದ್ದೂರಿಗೆ ಯಾವುದೇ ಅಭಿವೃದ್ಧಿ ಕಾರ್ಯಗಳನ್ನು ಮಾಡದೆ ದಿಢೀರ್ ಎಂದು ಹೋದರೆ ಜನ ಒಪ್ಪಿಕೊಳ್ಳುವುದಿಲ್ಲ ಎಂಬ ಸತ್ಯ ಗೊತ್ತಿದ್ದರೂ ಕುಟಿಲ ರಾಜಕಾರಣಿ ಯೋಗೇಶ್ವರ್ ದಿನಕ್ಕೊಂದು ದಾಳ ಉರುಳಿಸುತ್ತಿದ್ದಾನೆ.


ಇನ್ನು ಒಂದೂವರೆ ವರ್ಷದಲ್ಲಿ ಯಾವೆಲ್ಲಾ ರಾಜಕೀಯ ಮೇಲಾಟಗಳು ನಡೆದು ಏನಾಗುವುದೋ ಎಂಬುದು ಸದ್ಯದ ಕುತೂಹಲ. ಅಲ್ಲಿಯವರೆಗೆ ಕಾದು ನೋಡಲೇ ಬೇಕಿದೆ.

■ ವರದಿಗಾರ

ತುಮಕೂರು: ಕಾಂಗ್ರೆಸ್‌ಗೆ ಕಾಂಗ್ರೆಗಳೇ ಶತ್ರುಗಳ


ಇಂಧನ ಸಚಿವ ಡಿ.ಕೆ.ಶಿವಕುಮಾರ್


ಸಂಸದ ಡಿ.ಕೆ.ಸುರೇಶ್


ಮಾಜಿ ಶಾಸಕ ಬಿ.ರಾಮಸ್ವಾಮಿ ಗೌಡ

ಕುಣಿಗಲ್ ವಿಧಾನಸಭಾ ಕ್ಷೇತ್ರದಲ್ಲಿ ಡಿಕೆ ಸಹೋದರರ ವಿರುದ್ಧ ಸ್ವಪಕ್ಷದ ಮಾಜಿ ಶಾಸಕ ಬಿ.ರಾಮಸ್ವಾಮಿ ಗೌಡ ಸಿಡಿದೇಳುವ ಮೂಲಕ ಮತ್ತೊಮ್ಮೆ ಕಾಂಗ್ರೆಸ್ ಪಕ್ಷಕ್ಕೆ ಕಾಂಗ್ರೆಸ್‌ನವರೆ ಶತ್ರುಗಳು ಎನ್ನುವುದನ್ನು ಸಾಬೀತುಪಡಿಸಿದ್ದಾರೆ. ಕಾಂಗ್ರೆಸ್ ಚರಿತ್ರೆಯನ್ನು ನೋಡಿದರೆ ಅದರ ಎಲ್ಲಾ ಸೋಲುಗಳಿಗೆ ಅದರ ಆಂತರಿಕ ಜಗಳಗಳೇ ಕಾರಣ ಎಂಬುದು ಯಾರಿಗಾದರೂ ಅರ್ಥವಾಗುತ್ತದೆ.

ಹಳ್ಳಿಗಳಲ್ಲಿರುವ ರಾಜಕೀಯ ವೈರಿಗಳಾದರೂ ಹಲವೊಮ್ಮೆ ಒಗ್ಗಟ್ಟಾಗುತ್ತಾರೆ. ಆದರೆ ದೊಡ್ಡ ದೊಡ್ಡ ಮುಖಂಡರು ಎನಿಸಿಕೊಳ್ಳುವವರು ಸದಾ ಒಬ್ಬರ ಕಾಲನ್ನು ಒಬ್ಬರು ಎಳೆಯುತ್ತಿರುತ್ತಾರೆ. ಹಾಗೆ ಮಾಡುವ ಮೂಲಕ ಅವರೇ ಪಕ್ಷದ ವರ್ಚಸ್ಸಿಗೆ ಧಕ್ಕೆ ತರುತ್ತಿರುತ್ತಾರೆ. ಇತ್ತೀಚಿನ ದಿನಗಳಲ್ಲಿ ತುಮಕೂರು ಜಿಲ್ಲೆಯ ಹಲವು ಭಾಗಗಳಲ್ಲಿ ಕಾಂಗ್ರೆಸ್ ತನ್ನ ಅಸ್ತಿತ್ವವನ್ನು ಹೆಚ್ಚಿಸಿಕೊಳ್ಳುತ್ತಿರುವುದು ಕಂಡುಬರುತ್ತಿದ್ದರೂ ಅದರ ಒಳಗೆ ಆಂತರಿಕ ಬಿಕ್ಕಟ್ಟುಗಳು ಹೆಚ್ಚಾಗುತ್ತಿರುವುದೂ ಅಷ್ಟೇ ಸ್ಪಷ್ಟ. ಈ ಬಗ್ಗೆ ತಲೆ ಕೆಡಿಸಿಕೊಂಡು ಎಲ್ಲರನ್ನೂ ಒಗ್ಗೂಡಿಸುವ ಕೆಲಸವನ್ನು ಕೆಪಿಸಿಸಿ ಅಧ್ಯಕ್ಷ ಮತ್ತು ಗೃಹ ಸಚಿವ ಡಾ.ಜಿ.ಪರಮೇಶ್ವರ್ ಆಗಲಿ, ಕಾನೂನು ಸಚಿವ ಟಿ.ಬಿ.ಜಯಚಂದ್ರರಾಗಲಿ ಮಾಡುತ್ತಿಲ್ಲದಿರುವುದು ಸಮಸ್ಯೆಗಳು ಇನ್ನಷ್ಟು ಬಿಗಡಾಯಿಸುವಂತೆ ಮಾಡಿದೆ.

ಇದೆಲ್ಲದರ ಮಧ್ಯೆ ಇಡೀ ರಾಜ್ಯದ ಕಾಂಗ್ರೆಸ್ ನಾಯಕರನ್ನು ತನ್ನ ಹತೋಟಿಗೆ ತೆಗೆದುಕೊಂಡು ತಾನೇ ಒಕ್ಕಲಿಗ ಸಮುದಾಯದ ಪ್ರಭಾವಿ ಮುಖಂಡನಾಗಿದ್ದು ಮುಂದಿನ ಬಾರಿ ತಾನೇ ಮುಖ್ಯಮಂತ್ರಿಯಾಗುತ್ತೇನೆ ಎಂದು ಕನಸು ಕಾಣುತ್ತಿರುವ ಡಿ.ಕೆ.ಶಿವಕುಮಾರ್ ಹಾಗೂ ಅವರ ಸಹೋದರ ಬೆಂಗಳೂರು ಗ್ರಾಮಾಂತರ ಸಂಸದ ಡಿ.ಕೆ.ಸುರೇಶ್ ಕುಣಿಗಲ್ ವಿಧಾನಸಭಾ ಕ್ಷೇತ್ರವನ್ನು ತಮ್ಮ ಹಿಡಿತಕ್ಕೆ ತೆಗೆದುಕೊಳ್ಳಲು ಪ್ರಯತ್ನಿಸುತ್ತಿದ್ದಾರೆ. ಈ ಕಾರಣಕ್ಕೆ ಡಿಕೆ ಸಹೋದರರು ಈಗ ಹಲವಾರು ಸ್ಥಳೀಯ ಕಾಂಗ್ರೆ ಕಾರ್ಯಕರ್ತರ ಮತ್ತು ಮುಖಂಡರ ಕೆಂಗಣ್ಣಿಗೆ ಗುರಿಯಾಗಿದ್ದಾರೆ.

ಇತ್ತ ಸಂಸದ ಸುರೇಶ್ ಕೇಂದ್ರ ಸರ್ಕಾರದ ಹೊಳ್ಳು 'ಆದರ್ಶ ಗ್ರಾಮ ಯೋಜನೆಯನ್ನು ಹಿಡಿದುಕೊಂಡು ಅದೇ ತನ್ನ ದೊಡ್ಡ ಸಾಧನೆ ಎಂಬಂತೆ ಹಾರಾಡುತ್ತಿದ್ದರೆ, ಕುಣಿಗಲ್ ಕ್ಷೇತ್ರದ ಜೆಡಿಎಸ್ ಶಾಸಕ ಡಿ.ನಾಗರಾಜಯ್ಯ ತಮ್ಮ ಶಾಸಕ ಅನುದಾನದಿಂದ ಮಾಡಿದ ಕೆಲಸಗಳೇ ಅತ್ಯದ್ಭುತ ಎಂದು ಹೇಳಿಕೊಂಡು ತಿರುಗುತ್ತಿದ್ದಾರೆ. ಜೊತೆಗೆ ನಾಗರಾಜಯ್ಯ ಕಾಂಗ್ರೆಸ್ ಪಕ್ಷದಲ್ಲಿರುವ ಬಿರುಕುಗಳನ್ನೇ ಹೇಗೆ ಬಂಡವಾಳ ಮಾಡಿಕೊಂಡು ಮುಂದಿನಲ ಬಾರಿ ಗೆಲ್ಲಬಹುದು ಎಂದು ಲೆಕ್ಕಹಾಕುತ್ತಿದ್ದಾರೆ. ಅದೇನೇ ಇರಲಿ, ಡಿಕೆ ಸಹೋದರರಿಂದಾಗಿ ಇವತ್ತು ಕುಣಿಗಲ್ ಕ್ಷೇತ್ರದಲ್ಲಿ ಕಾಂಗ್ರೆಸ್ ಒಡೆದ ಮನೆಯಾಗಿರುವುದಂತೂ ದಿಟ. ಈ ಬಿರುಕನ್ನು ಸರಿ ಪಡಿಸದಿದ್ದರೆ ಮುಂದಿನ ಚುನಾವಣೆಯಲ್ಲಿ ಇದೇ ನಾಗರಾಜಯ್ಯನವರಿಗೆ ವರದಾನವಾಗುವ ಸಾಧ್ಯತೆಗಳಿವೆ.

ಡಿಕೆ ಬ್ರದರ್ಸ್ ವರ್ಸಸ್ ರಾಮಸ್ವಾಮಿ ಗೌಡ

ರಾಮಸ್ವಾಮಿ ಗೌಡ ಬಹಳ ವರ್ಷಗಳಿಂದ ಕಾಂಗ್ರೆಸ್ ಪಕ್ಷದಲ್ಲಿದ್ದು ಒಮ್ಮೆ ಕುಣಿಗಲ್‌ನಿಂದ ಶಾಸಕರಾಗಿದ್ದವರು. ಆದರೆ ಕಳೆದ ಬಾರಿ ಅವರು ಜೆಡಿಎಸ್‌ನ ನಾಗರಾಜಯ್ಯನ ವಿರುದ್ಧ ಪರಾಭವಗೊಂಡಿದ್ದರು. ಆದರೂ ಮುಂದಿನ ಬಾರಿ ಗೆದ್ದೇಗೆಲ್ಲಬೇಕೆಂದು ಅವರು ಕ್ಷೇತ್ರದ ಎಲ್ಲಾ ಕಡೆ ಓಡಾಡಿ ಪಕ್ಷವನ್ನು ಸಂಘಟಿಸುತ್ತಿದ್ದಾರೆ. ಜೊತೆಗೆ ಮುಂದಿನ ಚುನಾವಣೆಯಲ್ಲಿ ಯಾವ ಕಡೆಯಿಂದ ಎಷ್ಟು ಮತಗಳು ಬರಬಹುದು, ಕ್ಷೇತ್ರದಲಿನ ಜಾತಿ ಲೆಕ್ಕಾಚಾರ, ಹಣ ಲೆಕ್ಕಾಚಾರ ಎಲ್ಲವನ್ನೂ ಕೂಡಿ ಕಳೆದು ಸಿದ್ಧವಾಗುತ್ತಿದ್ದಾರೆ.

ಆದರೆ ಡಿ.ಕೆ.ಸುರೇಶ್ ಹಾಗೂ ಇಂಧನ ಸಚಿವ ಡಿ.ಕೆ.ಶಿವಕುಮಾರ್ ಕುಣಿಗಲ್ ಕ್ಷೇತ್ರದ ಮೇಲೆ ಕಣ್ಣಿಟ್ಟಿರುವುದು ರಾಮಸ್ವಾಮಿ ಗೌಡರ ನಿದ್ದೆಗೆಡಿಸಿದೆ. ಡಿಕೆ ಸಹೋದರರು ಪದೇಪದೇ ಕುಣಿಗಲ್ ಕ್ಷೇತ್ರಕ್ಕೆ ಬಂದು ಸಭೆಗಳನ್ನು ನಡೆಸಿ ಪರ್ಯಾಯ ನಾಯಕರನ್ನು ಹುಟ್ಟುಹಾಕಲು ಯತ್ನಿಸುತ್ತಿದ್ದಾರೆ. ಅಷ್ಟೇಅಲ್ಲ, ಸ್ವತಃ ಅವರ ಸಂಬಂಧಿ ಡಾ.ಹೆಚ್.ರಂಗನಾಥ್ ಎಂಬುವವರನ್ನು ಮುಂದಿನ ಬಾರಿ ಶಾಸಕರನ್ನಾಗಿಸಲು ಪ್ರಯತ್ನಿಸುತ್ತಿದ್ದಾರೆ. ರಂಗನಾಥ್ ವೃತ್ತಿಯಲ್ಲಿ ವೈದ್ಯನಾಗಿದ್ದು ಕಳೆದ ಲೋಕಸಭಾ ಚುನಾವಣೆಯ ಸಂದರ್ಭದಲ್ಲಿ ಇಲ್ಲಿನ ಮುಖಂಡರಿಗೆ ಹಣ ಹಂಚುವ ನೆಪದಲ್ಲಿ ತಮ್ಮ ಅಸ್ತಿತ್ವವನ್ನು ಗಟ್ಟಿಗೊಳಿಸಿಕೊಳ್ಳಲು ಹರಸಾಹಸ ಮಾಡಿದ್ದರು. ಇದನ್ನೆಲ್ಲ ಕಂಡು ರೋಸಿಹೋದ ರಾಮಸ್ವಾಮಿ ಗೌಡ ತಮ್ಮ ಬಣವನ್ನು ಗಟ್ಟಿ ಮಾಡಿಕೊಳ್ಳಲು ಈಗ ಯತ್ನಿಸುತ್ತಿದ್ದಾರೆ.

ಇತ್ತೀಚೆಗೆ ಕ್ಷೇತ್ರದ ಸಂತೆಪೇಟೆಯಲ್ಲಿ ಕಾಂಗ್ರೆಸ್ ಹಮ್ಮಿಕೊಂಡಿದ್ದ ಬೃಹತ್ ಕಾರ್ಯಕರ್ತರ ಸಭೆಯಲ್ಲಿ ರಾಮಸ್ವಾಮಿ ಗೌಡ ಬಹಿರಂಗವಾಗಿ ಡಿಕೆ ಸಹೋದರರ ವಿರುದ್ಧ ಗುಡುಗಿದರು. "ತಾಲ್ಲೂಕಿನಲ್ಲಿ ಕಾಂಗ್ರೆಸ್ ಪಕ್ಷ ಸದೃಢವಾಗಿದ್ದರೂ ಮಾಜಿ ಶಾಸಕನಾದ ನನ್ನನ್ನು ಎಲ್ಲಾ ಹಂತದಲ್ಲಿಯೂ ಕಡೆಗಣಿಸುತ್ತಿದ್ದಾರೆ. ಇದು ಸರಿಯಲ್ಲ, ನಾನೇನು ಸಿಎಂ ಅಥವಾ ಸಂಸದನಾಗುವ ಕನಸು ಕಂಡಿಲ್ಲ, ಈ ವಿಚಾರದಲ್ಲಿ ನನ್ನ ಎಲ್ಲಾ ಬೆಂಬಲವು ಡಿಕೆ ಸಹೋದರರಿಗೆ ಇರಲಿದೆ" ಎಂದು ರಾಮಸ್ವಾಮಿ ಗೌಡ ಬಹಿರಂಗವಾಗಿ ಡಿ.ಕೆ.ಶಿವಕುಮಾರರಿಗೆ ಟಾಂಗ್ ನೀಡಿದರು.

"ಕ್ಷೇತ್ರದಲ್ಲಿ ಕಾಂಗ್ರೆಸ್ ಸಾಕಷ್ಟು ಪ್ರಬಲವಾಗಿದ್ದರೂ ಸಹ ಒಳಸಂಘಟನೆ ಮಾಡಲಾಗುತ್ತಿದೆ. ಜೊತೆಗೆ ನನ್ನ ಸ್ಥಾನಮಾನಗಳನ್ನು ಕಸಿದು ಬೇರೊಬ್ಬರಿಗೆ ನೀಡುತ್ತಿರು[...] ಸರಿಯಲ್ಲ" ಎಂದೂ ಅವರು ಅಲವತ್ತುಕೊಂಡಿದ್ದಾರೆ. [...] ಕೊನೆ ಉಸಿರು ಇರುವವರೆಗೂ ನಾನು ರಾಜ[...] ಬಿಡಲಾರೆ, ಹೆದರಿ ಮನೆಯಲ್ಲಿ ಕೂರಲಾರೆ. ಏನೇ ಆ[...] ಹೋರಾಟದ ಮೂಲಕವೇ ಉತ್ತರ ಕೊಡು[...] ಸೋಲು-ಗೆಲುವನ್ನು ಒಪ್ಪಿಕೊಳ್ಳುತ್ತೇನೆ" ಎಂದು ಸ[...] ಹಾಕಿದ್ದಾರೆ. "ಸಂಸದರು ಅಭಿವೃದ್ಧಿ ಹೆಸರಿನಲ್ಲಿ [...] ಸಂಬಂಧಿಗಳನ್ನು ಕ್ಷೇತ್ರದಲ್ಲಿ ಚುನಾವಣೆಗೆ ನಿಲ್ಲಿಸಿ ಗೆ[...] ಯತ್ನಿಸುತ್ತಿದ್ದಾರೆ. ಪ್ರಾಮಾಣಿಕವಾಗಿ ಪಕ್ಷ[...] ದುಡಿಯುತ್ತಿರುವ ನನ್ನಂತಹ ಸಾಕಷ್ಟು ಕಾರ್ಯಕರ್ತ[...] ತುಳಿಯುತ್ತಿದ್ದಾರೆ. ಡಾ.ರಂಗನಾಥ್ ವೃತ್ತಿಯನ್ನು [...] ರಾಜಕೀಯಕ್ಕೆ ಬಂದು ವೈದ್ಯ ವೃತ್ತಿಗೆ ಮೋಸ ಮಾಡು[...] ಏನೇ ಆಗಲೀ ನನ್ನ ಕೆಲಸ ನಾನು ಮಾಡುತ್ತೇನೆ" [...] ಗುಡುಗಿದ್ದಾರೆ. "ತುಮಕೂರಿನ ನಾನಾ ಕಡೆ ಕಾ[...] ದುರ್ಬಲವಾಗಿದ್ದು ಸಚಿವರು ಮತ್ತು ಸಂಸದರು [...] ಸಂಘಟನೆ ಮಾಡದೇ ನಮ್ಮನ್ನು ಕಡೆಗಣಿಸಿ ಇಲ್ಲಿ[...] ಸಭೆಗಳನ್ನು ನಡೆಸಬೇಕು?" ಎಂದು ತನ್ನ ಅ[...] ತೋಡಿಕೊಂಡಿದ್ದಾರೆ.

ಹೀಗೆ ಪಕ್ಷದಲ್ಲಿ ಉಂಟಾಗಿರುವ ಭಿನ್ನಾಭಿಪ್ರಾ[...] ಮುಂದೆ ರಾಮಸ್ವಾಮಿ ಗೌಡರ ರಾಜಕೀಯ[...] ಹಾದಿಯನ್ನೂ ಬದಲಾಯಿಸಬಹುದು. ಅಷ್ಟೇ [...] ಮುಂದಿನ ಚುನಾವಣೆಯಲ್ಲಿ ಕಾಂಗ್ರೆಸ್‌ಗೆ ಬಂಡಾ[...] ಬಿಸಿ ತಟ್ಟುವುದಂತೂ ಪಕ್ಕಾ ಆಗಿದೆ.

ಡಿಕೆ ಸಹೋದರರು ತಮ್ಮ ಸಂ[...] ಡಾ.ರಂಗನಾಥ್‌ರನ್ನು ರಾಜಕೀಯಕ್ಕೆ ತರುವ ನಿಟ್ಟಿನಲ್ಲಿ [...] ಮೂಲ ಕಾರ್ಯಕರ್ತರನ್ನು ಪರಿಗಣಿಸದಿರುವುದು ಎಲ್ಲ[...] ಇರುಸು-ಮುರುಸು ಉಂಟುಮಾಡಿದೆ.

ಇದೆಲ್ಲದರ ಮಧ್ಯೆ ಸಂತೆಪೇಟೆಯಲ್ಲಿ ಕಾಯ[...] ನಡೆದ ದಿನ ವೇದಿಕೆಯ ಹಿಂಭಾಗದಲ್ಲಿ ವಾಮ[...] ಮಾಡಿಸಿರುವ ಸೂಚನೆಗಳು ಕಂಡುಬಂದಿದ್ದವು. [...] ಅಲ್ಲಿ ಕುಂಕುಮ, ನಿಂಬೆಹಣ್ಣು ಇತ್ಯಾದಿಗಳು ಸಿ[...] ಇದರತ್ತ ರಾಮಸ್ವಾಮಿ ಗೌಡರ ಗಮನ ಸೆಳೆದಾಗ "[...] ಇದಕ್ಕೆಲ್ಲಾ ತಲೆಕೆಡಿಸಿಕೊಳ್ಳುವುದಿಲ್ಲ" ಎಂದು [...] ಕಾರ್ಯಕ್ರಮವನ್ನು ಮುಂದುವರೆಸಿದ್ದರು.

ಕಾಂಗ್ರೆಸ್ ಸಂಸದರಿಂದ ಹಾಗೂ ಆ [...] ಮುಖಂಡರಿಂದ ತಾಲ್ಲೂಕು ಈ ಬಾರಿ ಅ[...] ಕಾಣಬಹುದೆಂದು ಆಶಿಸಿದ್ದ ಮತದಾರರಿಗೆ [...] ಆಗಿರುವುದು ಸುಳ್ಳಲ್ಲ, ಇವರೆಲ್ಲರ ಕುಟುಂಬ ರಾಜ[...] ಮತ್ತು ಸ್ವಾರ್ಥದ ಪೈಪೋಟಿ ಜನರಲ್ಲಿ ಬೇಸ[...] ಮೂಡಿಸಿದೆ. ಅವರೆಲ್ಲ ಮುಂದಿನ ಬಾರಿ ಬುದ್ಧಿ ಕ[...] ಕಾಯುತ್ತಿದ್ದಾರೆ. ಮೊದಲೇ ಹೇಳಲಿಲ್ಲವೆ, ಕಾಂ[...] ಕಾಂಗ್ರೆಗಳೇ ಶತ್ರುಗಳು ಎಂದು?

■ ವರದಿ[...]

ರಾಜ್ಯ ಸರಕಾರ ಪ್ರಬುದ್ಧತೆಯಿಂದ ನಡೆದುಕೊಳ್ಳಬೇಕ[...]

ಕಾವೇರಿ ನೀರಿನ ವಿಚಾರದಲ್ಲಿ ಕರ್ನಾಟಕ ರಾಜ್ಯ ಸರಕಾರ ಪ್ರಬುದ್ಧತೆಯಿಂದ ಕಾರ್ಯ ನಿರ್ವಹಿಸಬೇಕು. ಸರ್ವೋಚ್ಚ ನ್ಯಾಯಾಲಯದ ಆದೇಶವನ್ನು ಧಿಕ್ಕರಿಸಿದರೆ ಅದರಿಂದ ಕರ್ನಾಟಕ ರಾಜ್ಯಕ್ಕೆ ಅನಾಹುತವಾಗುತ್ತದೆಯೇ ವಿನಹ ಬೇರೇನೂ ಇಲ್ಲ, ನಾವು ಫೆಡರಲ್ ವ್ಯವಸ್ಥೆಯಲ್ಲಿ ಇರುವಂತಹ ವಿಷಯವನ್ನು ಮರೆತು ರಾಜ್ಯ ಸರಕಾರ ಕಾರ್ಯ ನಿರ್ವಹಿಸಬಾರದು. ಇಲ್ಲಿಯವರೆಗೆ ಕರ್ನಾಟಕ ರಾಜ್ಯ ಸರಕಾರ ನಡೆದುಕೊಂಡ ರೀತಿ ಅಪ್ರಬುದ್ಧತೆಯಿಂದ ಕೂಡಿತ್ತು, ಈಗ ನ್ಯಾಯಾಲಯದ ಆದೇಶದಂತೆ ನೀರು ಹರಿಸಿ ಆದೇಶವನ್ನು ಪಾಲನೆ ಮಾಡಿದೆ.


ಈ ವಿಚಾರದಲ್ಲಿ ಆರಂಭದ ದಿನಗಳಲ್ಲಿ ಮಾಜಿ ಪ್ರಧಾನಿಗಳಾದ ಹೆಚ್.ಡಿ.ದೇವೇಗೌಡರು ಅತ್ಯಂತ ಪ್ರಬುದ್ಧತೆಯಿಂದ ನಡೆದುಕೊಂಡಿದ್ದರು. ನಂತರ ಏಕೋ ಅವರು ಎಡವಿದರು ಎಂದು ನನಗೆ ಅನಿಸುತ್ತದೆ. ಅವರು ಏಕೆ ಈ ರೀತಿ ನಡೆದುಕೊಂಡರು ಎಂಬುದು ನನಗೆ ತಿಳಿಯುತ್ತಿಲ್ಲ.

ಈ ವಿವಾದ ಕಾವೇರಿ ನದಿ ನೀರಿನ ವಿಚಾರವೇ ಹೊರತು, ತಮಿಳುನಾಡು ಮತ್ತು ಕರ್ನಾಟಕ ರಾಜ್ಯದ ನಡುವಿನ ವಿವಾದವಲ್ಲ, ಇದು ಭಾಷಾ ವಿವಾದವೂ ಅಲ್ಲ ಅಥವ ರಾಜಕೀಯ ವಿವಾದವೂ ಅಲ್ಲ, ಯಾವುದೇ ನದಿಯಾಗಿರಲಿ ಅದು ಯಾವ ಪ್ರದೇಶದಲ್ಲಿ ಹರಿದುಹೋಗುತ್ತದೋ, ಆ ಭಾಗದವರಿಗ ಅದರಲ್ಲಿ ಹಕ್ಕು ಇರುತ್ತದೆ. ಹಾಗಾಗಿ ತಮಿಳುನಾಡಿಗೆ ನೀರು ಕೊಡಲು ಸಾಧ್ಯವೇ ಇಲ್ಲ ಎಂದು ಹೇಳುವುದು ತಪ್ಪಾಗುತ್ತದೆ.

ಕೆಲವರು ಕರ್ನಾಟಕ ರಾಜ್ಯವು ಪ್ರತ್ಯೇಕ ದೇಶವಾಗಬೇಕು ಎಂಬ ಹೇಳಿಕೆಯನ್ನು ನೀಡಿದ್ದನ್ನು ನಾನು ಗಮನಿಸಿದ್ದೇನೆ. ಈಗ ಈ ಸಮಸ್ಯೆ ಅಂತರರಾಜ್ಯ ಸಮಸ್ಯೆಯಾಗಿ ಉಳಿದುಕೊಂಡಿದೆ. ಒಂದುವೇಳೆ ಅವರು ಬಯಸಿದಂತೆ ಪ್ರತ್ಯೇಕ ದೇಶವಾದರೆ ಅದು ಅಂತರರಾಷ್ಟ್ರೀಯ ಸಮಸ್ಯೆಯಾಗಿ ಮಾರ್ಪಾಡುತ್ತದೆಯೇ ವಿನಹ, ಪ್ರತ್ಯೇಕ ದೇಶವಾದರೆ ಈ ಸಮಸ್ಯೆ ಇರುವುದಿಲ್ಲ ಎಂಬ ಕಲ್ಪನೆ ಸರಿಯಾದುದಲ್ಲ,

ಸರ್ವೋಚ್ಚ ನ್ಯಾಯಾಲಯ ಆದೇಶ ನೀಡಿದಾಗಲೆಲ್ಲಾ ಬೀದಿ ಹೋರಾಟಗಳನ್ನು ಮಾಡುತ್ತಿದ್ದಾರೆ. ನಾನು ಗಮನಿಸಿದಂತೆ ಕಳೆದ ಮೂರು ದಶಕಗಳಿಂದಲೂ ಬೀದಿ ಹೋರಾಟವನ್ನು ಕಾವೇರಿ ನದಿ ನೀರಿನ ವಿಚಾರದಲ್ಲಿ ಮಾಡುತ್ತಲೇ ಬಂದಿದ್ದಾರೆ. ಇದರಿಂದ ಏನಾದರೂ ಪ್ರಯೋಜನವಾಗಿದೆಯೇ ಎಂದು ಪ್ರಶ್ನಿಸಿದರೆ ಯಾವುದೇ ಪ್ರಯೋಜನ ಆಗಿಲ್ಲ ಎಂಬುದನ್ನು ಗಮನಿಸಬಹುದು. ಹಾಗಾಗಿ ಕಾವೇರಿ ನದಿ ನೀರಿನ ವಿಚಾರದಲ್ಲಿ ಬೀದಿ ಹೋರಾಟಗಳನ್ನು ಮಾಡುವುದು ಮತ್ತು ಅರಾಜಕತೆಯನ್ನು ಸೃಷ್ಟಿಸುವುದು ಕರ್ನಾಟಕ ರಾಜ್ಯಕ್ಕೆ ನಷ್ಟವೇ ವಿನಹ ಯಾವುದೇ ಲಾಭ ಇಲ್ಲ.

ಒಂದುವೇಳೆ ನೀರನ್ನು ಬಿಡದೇ ಹೋದರೆ, ಸರ್ವೋಚ್ಚ ನ್ಯಾಯಾಲಯ ಸರಕಾರವನ್ನು ವಜಾ ಮಾಡಲು ಶಿಫಾರಸ್ಸು ಮಾಡಬಹುದು ಅಥವ ಈಗಿರುವ ಸರಕಾರ ರಾಜೀನಾಮೆಯನ್ನು ನೀಡಬಹುದು. ಹಾಗೊಂದು ವೇಳೆ ನಡೆದರೆ, ಸರ್ವೋಚ್ಚ ನ್ಯಾಯಾಲಯದ ಆದೇಶ ಯಾವುದೇ ಕಾರಣಕ್ಕೂ ಬದಲಾಗುವುದಿಲ್ಲ ಎಂಬುದು ವಾಸ್ತವ ವಿಚಾರ. ಆಗ ಇರುವ ಸರಕಾರ ಸರ್ವೋಚ್ಚ ನ್ಯಾಯಾಲ[...] ಆದೇಶವನ್ನು ಪಾಲನೆ ಮಾಡಬೇಕಾಗುತ್ತದೆ. ಹಾಗಾ[...] ವಿಚಾರದಲ್ಲಿ ಸರಕಾರವು ಪ್ರಬುದ್ಧತೆಯನ್ನು ತೋರಿಸು[...] ಅಗತ್ಯವಿದೆ.



ನಮ್ಮಲ್ಲಿ ನೀರೇ ಇಲ್ಲ, ಹಾಗಿರುವಾಗ ಅವರಿಗೆ [...] ಕೊಡುವುದಾದರೂ ಹೇಗೆ ಎಂಬ ಪ್ರಶ್ನೆ ಕೂಡ ಸರಿ[...] ಏಕೆಂದರೆ ನಮ್ಮಲ್ಲಿ ನೀರು ಇಲ್ಲದಿದ್ದರೆ, ನೀರನ್ನು ಬಿ[...] ನೀರು ಹರಿದುಹೋಗುವುದೇ ಇಲ್ಲ, ಇರುವ ನೀ[...] ಹೇಗೆ ಬಳಸಿಕೊಳ್ಳಬೇಕು ಎಂಬ ಜಾಣ್ಮೆಯನ್ನು ಪ್ರದ[...] ಬೇಕೇ ವಿನಹ, ಅಪ್ರಬುದ್ಧತೆಯಿಂದ ಇರುವುದು ಸರಿ[...]

ಈ ವಿಚಾರದಲ್ಲಿ ಕರ್ನಾಟಕ ರಾಜ್ಯ ಸರ[...] ಸಂಪೂರ್ಣವಾಗಿ ಹಿನ್ನಡೆಯನ್ನು ಕಂಡಿದೆ [...] ಹೇಳುವುದು ಕೂಡ ಸರಿಯಲ್ಲ. ಜೊತೆಗೆ ನಮ್ಮ ರಾ[...] ಪರವಾಗಿ ವಾದ ಮಾಡಿದ ವಕೀಲರು ಕೂಡ ಸರಿ[...] ವಾದವನ್ನು ಮಂಡನೆ ಮಾಡಿಲ್ಲ. ಹಾಗಾಗಿ ಈ [...] ಇದೆ ಎಂದು ಹೇಳುವುದು ಕೂಡ ಸರಿಯಲ್ಲ. ಆರ[...] ದಿನಗಳಲ್ಲಿ 20 ಸಾವಿರ ಕ್ಯೂಸೆಕ್ಸ್ ನೀರನ್ನು ಬಿಡು[...] ಆದೇಶಿಸಬೇಕೆಂದು ತಮಿಳುನಾಡು ಸರಕಾರ [...] ಮಾಡಿತ್ತು, ಆಗ ರಾಜ್ಯ ಸರಕಾರವು 10 ಸಾವಿರ ಕ್ಯೂ[...] ನೀರನ್ನು ಬಿಡುವುದಾಗಿ ನ್ಯಾಯಾಲಯದಲ್ಲಿ ಹೇಳಿತ್ತು, ಕೊ[...] ಸರ್ವೋಚ್ಚ ನ್ಯಾಯಾಲಯವು 15 ಸಾವಿರ ಕ್ಯೂಸೆಕ್ಸ್ ಬಿ[...] ತಿಳಿಸಿತು. ಇದನ್ನು ಒಪ್ಪದಿದ್ದಾಗ 12 ಸಾವಿರ ಕ್ಯೂಸೆ[...] ಬಿಡುವಂತೆ ನ್ಯಾಯಾಲಯ ಮಧ್ಯಂತರ ಆದೇಶ[...] ನೀಡಿತ್ತು,

ರಾಜ್ಯ ಸರಕಾರ ಸರ್ವೋಚ್ಚ ನ್ಯಾಯಾಲಯದ ಮ[...] ಆದೇಶವನ್ನು ಯಾವುದೇ ಹಂತದಲ್ಲಿಯೂ ಪಾಲನೆ ಮ[...] ವಕೀಲರ ಮೇಲೆ ಮತ್ತು ನ್ಯಾಯಾಲಯದ ಮೇಲೆ ಆ[...]



ದಾವಣಗೆರೆ

ಲಂಚ ಸಮೇತ ಸಿಕ್ಕಿಬಿದ್ದ ಆರ್‌ಟಿಓ ಇನ್ಸ್‌ಪೆಕ್ಟರ್ ನಾಗರಾಜ ಸಳಗಿ

ಸೆಪ್ಟೆಂಬರ್ 21ರಂದು ದಾವಣಗೆರೆಯ ಭ್ರಷ್ಟಾಚಾರ ನಿಗ್ರಹ ದಳದವರು ಇಲ್ಲಿನ ಆರ್‌ಟಿಓ ಕಚೇರಿಯ ಸುತ್ತು ಮುತ್ತಾಕಿ ಸುಮ್ಮನೆ ಅಲ್ಲಿ ನಡೆಯುವ ವ್ಯವಹಾರ, ಏಜೆಂಟರುಗಳ ಹಾವಳಿ, ಆರ್‌ಟಿಓ, ಎಆರ್‌ಟಿಓ, ಬ್ರೇಕ್ ಇನ್ಸ್‌ಪೆಕ್ಟರು, ಗುಮಾಸ್ತರುಗಳ ಸಮಗ್ರ ದಂಧೆಗಳನ್ನೆಲ್ಲ ಹಾಕ್ಕುಂಬಿಕೊಂಡು ಹೋಗಿದ್ದರು. ಇದಾದ ಕೇವಲ ಒಂಬತ್ತು ದಿನಗಳ ನಂತರ - ಅಂದರೆ ಸೆಪ್ಟೆಂಬರ್ 29ರಂದು- ನಾಗರಾಜ ಸಳಗಿ ಎಂಬ ಇನ್ಸ್‌ಪೆಕ್ಟರ್‌ನನ್ನು ತಮ್ಮ ಬಲೆಗೆ ಬೀಳಿಸಿಕೊಂಡರು.

ಈ ನಾಗರಾಜ ಸಳಗಿ ಎನ್ನುವ ಇನ್ಸ್‌ಪೆಕ್ಟರು ದಾವಣಗೆರೆಗೆ ಬಂದು ಮೂರು ವರ್ಷವಾಯಿತಷ್ಟೆ. ಈತ ಇಲ್ಲಿಗೆ ಬರುವ ಮೊದಲು ತುಮಕುರಿನಲ್ಲಿದ್ದು ಅಲ್ಲಿನ ಕಚೇರಿಯಲ್ಲಿ ಅನಾಸಿನ್ ಅವತಾರಿಯಾಗಿದ್ದ. ಅಧಿಕಾರಿಗಳು, ಆರ್‌ಟಿಓ, ಜವಾನರು, ಗುಮಾಸ್ತರು ಇವನಿಂದ ಬೇಸರ ಗೊಂಡಿದ್ದರು. ಹಾಗಾಗಿಯೇ ಅಲ್ಲಿಂದ ಎತ್ತಂಗಡಿಯಾದ ನಾಗರಾಜ ಬಂದದ್ದು ದಾವಣಗೆರೆ ಆರ್.ಟಿ.ಓ. ಕಚೇರಿಗೆ.

ದಾವಣಗೆರೆ ಆರ್‌ಟಿಓ ಕಚೇರಿ ಅಸಾಮಾನ್ಯವಾದದ್ದು. ಸರ್ಕಾರಕ್ಕೆ ಲಾಭ ತಂದುಕೊಡುವ ಕೇಂದ್ರವಿದು. ಬೆಳೆಯುತ್ತಿರುವ ನಗರ, ರಾಜ್ಯದಲ್ಲಿ ಬೆಂಗಳೂರು ಇನ್ನು ಮುಂದೆ ಸೇಫಲ್ಲಾ ಎಂದುಕೊಂಡೇ ದಾವಣಗೆರೆ ಕಡೆ ಮುಖ ಮಾಡುವ ರಾಜ್ಯ ಸರ್ಕಾರ, ಕೇಂದ್ರ ಸರ್ಕಾರದ ನಿವೃತ್ತ ಆಫೀಸರುಗಳು ಇಲ್ಲಿಗೆ ಬಂದು ನೆಲೆಕಂಡುಕೊಳ್ಳುತ್ತಿದ್ದಾರೆ. ಜೊತೆಗೆ ದಾವಣಗೆರೆ ಕೂಡ ಬೃಹದಾಕಾರ ಬೆಳೆಯತೊಡಗಿದೆ. ಇಲ್ಲಿಗೆ ಬಂದವರೆಲ್ಲ ಬೈಕು, ಕಾರು ಅಂತ ಖರೀದಿಸುತ್ತಾರೆ. ದಾವಣಗೆರೆ ಜಿಲ್ಲಾದ್ಯಂತ ಆರ್‌ಟಿಓ ಲೆಕ್ಕದಲ್ಲೇ 3.5 ಲಕ್ಷ ಬೈಕುಗಳು, 30 ಸಾವಿರ ಕಾರುಗಳು, 225 ಖಾಸಗಿ ಬಸ್ಸುಗಳು, 175 ಕೆಎಸ್‌ಆರ್‌ಟಿಸಿ ಬಸ್ಸುಗಳು, 8000 ಲಾರಿಗಳು, 15 ಸಾವಿರ ಆಟೋಗಳು ಇವೆ. ಇಷ್ಟೆಲ್ಲಾ ಇದ್ದ ಮೇಲೆ ಇಲ್ಲಿರುವ ಆರ್‌ಟಿಓ ಮತ್ತು ಪೊಲೀಸರಿಗೆ ಇದಕ್ಕಿಂತ ಆಮದಾನಿ ಬೇರೇನು ಬೇಕು.

ಭ್ರಷ್ಟಾಚಾರ ನಿಗ್ರಹ ದಳದವರ ಕೈಗೆ ಸಿಕ್ಕಿಬಿದ್ದಿರುವ ನಾಗರಾಜ ಅಂದು ಕಚೇರಿ ಡ್ಯೂಟಿಯಲ್ಲಿರಲಿಲ್ಲ, ಆರ್‌ಟಿಓ (ಸದ್ಯ ಇನ್‌ಚಾರ್ಜ್ ಇರುವ) ಚಂದ್ರಶೇಖರ ಅವರು ಅಂದು ನಾಗರಾಜನನ್ನು ಮಂಗಳೂರು-ಸೋಲಾಪುರ ಹೆದ್ದಾರಿ 13ರಲ್ಲಿ ಚಿತ್ರದುರ್ಗ ಹೊಸಪೇಟೆ ಮಾರ್ಗದಲ್ಲಿನ ದೋಣೇಹಳ್ಳಿ ಗೇಟಿನ ಬಳಿ ಡ್ಯೂಟಿಗೆ ಹಚ್ಚಿದ್ದರು. ಈ ಚೆಕ್‌ಪೋಸ್ಟ್ ಆಮದಾನಿ ವಿಷಯದಲ್ಲಿ ತುಂಬಾ ಲಾಭ ತಂದುಕೊಡುವ ಸ್ಥಳ. ಬೆಂಗಳೂರು, ಮಂಗಳೂರು, ಉಡುಪಿ, ಮೈಸೂರು ಕಡೆಯಿಂದ ಬರುವ ಲಾರಿಗಳು, ಹಾಗೇ ಚಿತ್ರದುರ್ಗ, ಹೊಳಲ್ಕೆರೆ ಕಡೆಯಿಂದ ಬರುವ ಮೈನ್ಸ್ ಲಾರಿಗಳು ಈ ಚೆಕ್‌ಪೋಸ್ಟ್‌ನ್ನು ಹಾದೇ ಹೋಗಬೇಕು. ಹಾಗಾಗಿಯೇ ಇದು ದಾವಣಗೆರೆ ಆರ್‌ಟಿಓಗೆ ಸಮೃದ್ಧ ಅಮೇಧ್ಯ ನೀಡುವ ಅದೃಷ್ಟ ಲಕ್ಷ್ಮಿ.

ಅವತ್ತು ಅದ್ಯಾಕೆ ನಾಗರಾಜನ ನಸೀಬು ಕೈಕೊಟ್ಟಿತೋ ಏನೋ ಅವನ ಮನೆದೇವರೇ ಬಲ್ಲ. ಇದ್ದಕ್ಕಿದ್ದಂತೆ



ದಾವಣಗೆರೆ, ಹಾವೇರಿ, ಚಿತ್ರದುರ್ಗದ ಎಸಿಬಿ ಅಧಿಕಾರಿಗಳು ಮತ್ತು ಪೊಲೀಸರು ದೋಣೇಹಳ್ಳಿ ಆರ್‌ಟಿಓ ಚೆಕ್‌ಪೋಸ್ಟ್ ಮೇಲೆ ಮುಗಿಬಿದ್ದು ನಾಗರಾಜನನ್ನು ಬೆಚ್ಚಿಬೀಳಿಸಿದರು. ಅವತ್ತು ರೈಡ್ ಆದಾಗ ಅಚ್ಚರಿಯೊಂದು ಬಯಲಾಗಿತ್ತು. ಅಧಿಕಾರಿಗಳಿಗೆ ಅಂದು 91 ಸಾವಿರ ರೂಪಾಯಿಗಳು ಅನಾಮತ್ತು ಸಿಕ್ಕಿತ್ತು. ಆದರೆ ಸಿಕ್ಕ 91 ಸಾವಿರಕ್ಕೆ ಯಾವುದೇ ಇಲಾಖೆಯ ಅಧಿಕೃತ ರಸೀದಿಗಳಿರಲಿಲ್ಲ.

ಮತ್ತೊಂದು ಅಚ್ಚರಿಯ ಸಂಗತಿ ಎಂದರೆ ಮುಂಜಾನೆಯಿಂದ ಮಧ್ಯಾಹ್ನದವರೆಗೂ ಕೈಹಾಕಿ ತಪಾಸಣೆ ಮಾಡಿದ ಸಾವಿರಾರು ಲಾರಿಗಳ ಪೈಕಿ ಕೇವಲ ಎರಡೇ ಎರಡು ಲಾರಿಗಳಿಗೆ ಅದೂ ಕೇವಲ 600 ರೂಪಾಯಿ ದಂಡ ವಿಧಿಸಿದ ಎರಡು ರಸೀದಿಗಳು ಮಾತ್ರ ಇದ್ದವು. ಅಂದರೆ ಮಿಕ್ಕ 91 ಸಾವಿರ ರೂಪಾಯಿಗಳು ಎತ್ತುವಳಿ ಮಾಡಿದ್ದ ಲಂಚದ ಹಣ. ಇದು ಇಂದು ನಿನ್ನೆಯ ಎತ್ತುವಳಿ ಕತೆಯಲ್ಲ.

ದಾವಣಗೆರೆ ಆರ್‌ಟಿಓ ಕಚೇರಿಯ ಇನ್ಸ್‌ಪೆಕ್ಟರುಗಳಿಗೆ ದೋಣೇಹಳ್ಳಿ ಚೆಕ್‌ಪೋಸ್ಟ್ ಇದು ಚಿನ್ನದ ಕಣಜ ಇದ್ದಂತೆ. ಅದಕ್ಕೇ ವಾರಕ್ಕೊಬ್ಬರಂತೆ ಆರ್‌ಟಿಓಗೆ ಲಕ್ಷಗಳಲ್ಲಿ ಲಂಚ ಬಿಸಾಕಿ ಈ ಚೆಕ್‌ಪೋಸ್ಟ್‌ಗೆ ಡ್ಯೂಟಿಗೆ ಹಾಕಿಸಿಕೊಳ್ಳುತ್ತಾರೆ. ಮುಂಜಾನೆಯೇ 60 ಕಿಲೋಮೀಟರ್ ದೂರವಿರುವ ದಾವಣಗೆರೆಯಿಂದ ಬಂದು ಇಲ್ಲಿನ ಹೆದ್ದಾರಿಯಲ್ಲಿ ವಾಹನ ತಪಾಸಣೆಗೆ ನಿಲ್ಲುತ್ತಾರೆ. ಅವತ್ತು ಆರ್‌ಟಿಓ ಇನ್ಸ್‌ಪೆಕ್ಟರ್ ನಾಗರಾಜನೊಂದಿಗೆ ಮೂರು ಜನರಿದ್ದರು. ಅವರ್‍ಯಾರೂ ಅಧಿಕೃತ ಸರ್ಕಾರಿ ನೌಕರರಲ್ಲ, ಮೊದಲನೆಯವನಾದ ತಿಪ್ಪೇಶಿ ಎಂಬಾತ ಈಗ ಆರ್‌ಟಿಓ ಕಚೇರಿಯಲ್ಲಿ ಸರ್ಕಾರಿ ಡ್ರೈವರ್ ಆಗಿರುವ ಅಜ್ಜಪ್ಪನ ಅಳಿಯ. ಎರಡನೆಯವನು ಅದೇ ದೋಣೆಹಳ್ಳಿ ಚೆಕ್‌ಪೋಸ್ಟ್‌ನ ಬಳಿ ಹೋಟೆಲ್ ಇಟ್ಟುಕೊಂಡಿರುವ ಜಯಣ್ಣ, ಮೂರನೆಯವರು ಮತ್ತೊಬ್ಬ ಡ್ರೈವರ್ ಶಿವಣ್ಣನ ಮಗ.

ಈ ಮೂವರೂ ಹೆದ್ದಾರಿಯಲ್ಲಿ ಲಾರಿಗಳಿಗೆ ಕೈಹಾಕಿ ಡ್ರೈವರ್‌ಗಳನ್ನು ಇನ್ಸ್‌ಪೆಕ್ಟರ್ ನಾಗರಾಜನೆದುರು ತಂದು ನಿಲ್ಲಿಸುತ್ತಾರೆ. ಅವರ ಇಂತಹ ಕಾರ್ಯಕ್ಕೆ ಸಿಗುವ ಕೂಲಿ ತಲಾ ಒಂದು ಸಾವಿರ ರೂಪಾಯಿ ಮಾತ್ರ.

ಇರಲಿ, ಇಲ್ಲಿ ಮತ್ತೊಂದು ಎತ್ತುವಳಿ ತಂತ್ರವಿದೆ. ಸರ್ಕಾರಿ ನಿಯಮಗಳ ಪ್ರಕಾರ ಓವರ್‌ಲೋಡು ಲಾರಿಗಳಿಗೆ ಕಡ್ಡಾಯವಾಗಿ ದಂಡ ವಿಧಿಸಲೇಬೇಕು. ಜೊತೆಗೆ ಗಾಡಿಯ ಒರಿಜಿನಲ್ ದಾಖಲಾತಿಗಳೂ ಪಕ್ಕಾ ಇರಬೇಕು. ಆದರೆ ನಿಯತ್ತಾದ ಅಧಿಕಾರಿ ತನ್ನೆದುರು ಬಂದು ನಿಂತ ಓವರ್‌ಲೋಡ್ ಲಾರಿಗೆ ಸಿಆರ್ (ಅಂದರೆ ಚೆಕ್ ರಿಪೋರ್ಟ್ ಅಂತ) ಹಾಕಬೇಕು. ಆಗ ಚಾಲಕ ದಂಡ ಕಟ್ಟಬೇಕು. ಆದರೆ ನಾಗರಾಜನಂತಹ ಭ್ರಷ್ಟ ಅಧಿಕಾರಿಗಳು ದಂಡ ವಿಧಿಸದೆ ಲಂಚ ಪಡೆದು ಕಳುಹಿಸುತ್ತಾರೆ. ಇದು ಭ್ರಷ್ಟರು ಸರ್ಕಾರಕ್ಕೆ ಮೋಸ ಎಸಗುವ ರೀತಿ. ಅರ್ಥಾತ್ ಅವತ್ತು ನಾಗರಾಜನ ಹತ್ತಿರ ಸಿಕ್ಕ 91 ಸಾವಿರ ರೂಪಾಯಿ ಲಂಚದ ಹಣ, ಕೇವಲ 600 ರೂ. ನಂತೆ ಸಿಕ್ಕ ಎರಡು ರಸೀದಿಗಳು ಸರ್ಕಾರಕ್ಕೆ ಕಟ್ಟಿಸಿಕೊಂಡ ದಂಡ!

10 ವರ್ಷದಿಂದ ಬಿಟ್ಟಿ ಸಂಬಳ

ನಾಗರಾಜ ಸಳಗಿ 2008ರಲ್ಲಿ ಕೆಪಿಎಸ್‌ಸಿಯಿಂದ ಆರ್‌ಟಿಓ ಇನ್ಸ್‌ಪೆಕ್ಟರ್ (3 ಸ್ಟಾರ್) ಆಗಿ ನೇರನೇಮಕಾತಿ ಹೊಂದಿದವನು. ನೌಕರಿ ಸಿಕ್ಕ ಮೊದಲು ಉಂಡಾಡಿ ಗುಂಡನಂತೆ ಅಲೆದಾಡಿಕೊಂಡಿದ್ದವನಿಗೆ ಕಂಕಣಭಾಗ್ಯ ಕೂಡಿ ಬಂದಿತ್ತು. ಆಗ ಆತನಿಗೆ ಮೈಸೂರಿನ ರಾಜು ಎಂಬುವವರು ಬೀಗರಾದರು. ಈ ರಾಜು ಕೂಡ ಆರ್‌ಟಿಓ ಕಚೇರಿಯ ನೌಕರನೇ. ಸಾಲದ್ದಕ್ಕೆ ಎಆರ್‌ಟಿಓ ಆಗಿದ್ದ. ಈತ ಇದೇ ದಾವಣಗೆರೆಯಲ್ಲೂ ಸೀನಿಯರ್ ಇನ್ಸ್‌ಪೆಕ್ಟರಾಗಿ ಬಾಚಿಕೊಂಡು ಹೋದವನೇ. ಇಂಥಾ ಮಾವನಾದ ರಾಜು ಅಳಿಯ ನಾಗರಾಜನಿಗೂ ತಾನು ಕುಂತು ಉಂಡ ಅದೇ ಇಲಾಖೆಯಲ್ಲಿ ಕೆಪಿಎಸ್‌ಸಿಯಿಂದ ನೇರ ನೇಮಕಾತಿಗೆ ಕೈಬಿಚ್ಚಿ ರೊಕ್ಕ ಚೆಲ್ಲಿದ್ದ.

ದುರಂತವೆಂದರೆ 2008ರಲ್ಲಿ ಕೆಪಿಎಸ್‌ಸಿಯಿಂದ ದೈಹಿಕ ಮತ್ತು ವೈದ್ಯಕೀಯ ಪರೀಕ್ಷೆ ಸರಿಯಿದ್ದರೆ ಸಾಕು ಎನ್ನುವ ಒಂದಂಶದ ಅಂದಾಜು ಪರೀಕ್ಷೆ ಸಾಕಾಗಿತ್ತು, ಆಗ 222 ಜನ ಆರ್‌ಟಿಓ ಇಲಾಖೆಗೆ ನೇಮಕವಾದರು. ಅವರಲ್ಲಿ ಈ ನಾಗರಾಜನೂ ಒಬ್ಬ.

ಆದರೆ ಆ ವರ್ಷವೇ ಕೆಪಿಎಸ್‌ಸಿ ಸಾರಿಗೆ ಇಲಾಖೆ ನೇಮಕಾತಿಯಲ್ಲಿ ನೇಮಕಗೊಳ್ಳದ ಕ್ಯಾಂಡಿಡೇಟ್ ಒಬ್ಬರು 222 ಜನರ ಆಯ್ಕೆ ವಿಧಾನವನ್ನೇ ಹೈಕೋರ್ಟ್‌ನಲ್ಲಿ ಪ್ರಶ್ನಿಸಿಬಿಟ್ಟರು. ಆತನ ಪ್ರಯತ್ನದಿಂದ 222 ಜನರ ಆಯ್ಕೆಯನ್ನೇ ನ್ಯಾಯಾಲಯ ರದ್ದು ಮಾಡಿತು. ಇಲ್ಲಿ ಒಂದು ಅಚ್ಚರಿಯ ಸಂಗತಿಯಿದೆ. ಕರ್ನಾಟಕ ಹೈಕೋರ್ಟು ಕೆಪಿಎಸ್‌ಸಿ ಆಯ್ಕೆ ಪಟ್ಟಿಯನ್ನು ರದ್ದು ಮಾಡಿದರೂ 222 ಜನರನ್ನು ಸರ್ಕಾರ ನೌಕರಿಯಿಂದ ಕೈಬಿಡಲಿಲ್ಲ. ನಂತರ ಅವರೆಲ್ಲರೂ ಹೈಕೋರ್ಟಿನ ತೀರ್ಮಾನವನ್ನು ಪ್ರಶ್ನಿಸಿ ಸುಪ್ರೀಂಕೋರ್ಟ್‌ಗೆ ಹೋಗಿದ್ದರು. ಅದು 2015ರವರೆಗೂ ನಡೆಯಿತು. ಸಾರಿಗೆ ಇಲಾಖೆ ಈ 222 ಜನರ ಮುಂದುವರೆಸಿದ್ದರಿಂದ ಅವರೆಲ್ಲ ಸರ್ಕಾರಿ ಸಂಬಳ ಮತ್ತಿತರೆ ಸೌಲಭ್ಯಗಳನ್ನು ಪಡೆಯುತ್ತಿದ್ದಾರೆ. ಇನ್ನೊಂದು ವಿಚಿತ್ರವೆಂದರೆ 2008ರಿಂದ 2015ರವರೆಗೂ ಇವರ ಪ್ರೊಬೇಷನರಿ ಅವಧಿ ಡಿಕ್ಲೇರಾಗಿಲ್ಲ, ಆದ್ದರಿಂದ ಇವರಿಗೆ ಬಡ್ತಿ ಸಿಕ್ಕಿಲ್ಲ ಮತ್ತು ಇನ್‌ಕ್ರಿಮೆಂಟ್ ಇಲ್ಲ, ಆದರೇನಂತೆ, ಲಂಚ ಸಿಕ್ಕರೆ ಸಾಕಲ್ಲವೇ?

ಈ ಹಗರಣಕ್ಕೆ ಮೂಲ ಕಾರಣಪುರುಷ ಸಾರಿಗೆ ಇಲಾಖೆಯ ಕಮೀಶನರ್ ಎಂ.ಕೆ.ಅಯ್ಯಪ್ಪ, ಈ ಅಯ್ಯಪ್ಪ 2011ರಲ್ಲಿ ಡೀನೋಟಿಫಿಕೇಶನ್ ಹಗರಣದಲ್ಲಿ ಲೋಕಾಯುಕ್ತರ ಕೈಗೆ ಸಿಕ್ಕು ಮೂರು ದಿನ ಜೈಲುಪಾಲಾಗಿದ್ದ ಈ ಅಯ್ಯಪ್ಪ ಈ 222 ಜನ ನೌಕರರನ್ನು ಹೈಕೋರ್ಟ್ ಆದೇಶ ಧಿಕ್ಕರಿಸಿ ಬಚಾವು ಮಾಡಿದ. ಈ ವರ್ಷ ಸುಪ್ರೀಂಕೋರ್ಟು ಈ 222 ಜನರ ಆಯ್ಕೆಯನ್ನು ಸಕ್ರಮಗೊಳಿಸಲು ಆದೇಶಿಸಿದೆ. ವಿಚಿತ್ರವೆಂದರೆ ಸುಪ್ರೀಂ ಕೋರ್ಟಿನ ಆದೇಶವಿದ್ದರೂ ಈ ಅಯ್ಯಪ್ಪ ಮರು ಆದೇಶ ನೀಡಿಲ್ಲ, ಏಕೆಂದರೆ 2008ರಲ್ಲಿ ಹೈಕೋರ್ಟಿನ ಆದೇಶದ ವಿರುದ್ಧ ಇವರೆಲ್ಲರನ್ನು ರಕ್ಷಿಸಿ ಕಮೀಶನ್ ಪಡೆದಿದ್ದ ಅಯ್ಯಪ್ಪ ಈಗ ಸುಪ್ರೀಂಕೋರ್ಟ್ ಆದೇಶದಂತೆ ಮರುಆದೇಶ ನೀಡಲು ಪ್ರತಿಯೊಬ್ಬರ ಮುಂದೆ ಎರಡು ಲಕ್ಷ ಲಂಚದ ಬೇಡಿಕೆ ಇಟ್ಟಿದ್ದಾನೆಂಬ ಮಾತು ಕೇಳಿಬರುತ್ತಿದೆ.

2008ರಲ್ಲಿ ಬಿಜೆಪಿ ಸರ್ಕಾರವಿತ್ತು, ಆಗ ಸಾರಿಗೆ ಮಂತ್ರಿಯಾಗಿ ಆರ್.ಅಶೋಕ್ ಇದ್ದ. ಸತ್ಯವಂತರು, ಭ್ರಷ್ಟಾಚಾರರಹಿತ ಸರ್ಕಾರ, ಪ್ರಾಮಾಣಿಕರು, ಭಾರತಾಂಬೆಯ ಸಂತಾನಿಗರು ಅಂತೆಲ್ಲಾ ಬೊಂಬಡಾ ಬಜಾಯಿಸಿದ ದೇಶಭಕ್ತರು 222 ಜನ ಸಾರಿಗೆ ಇಲಾಖೆಯ ನೌಕರರ ನೇಮಕಾತಿಯ ವಿರುದ್ಧ ಹೈಕೋರ್ಟ್ ತೀರ್ಪು ನೀಡಿದರೂ ವಜಾ ಮಾಡಿರಲಿಲ್ಲ.

ಈಗ ಆ ದೇಶಭಕ್ತರು ಬಚಾವು ಮಾಡಿದ್ದ ನಾಗರಾಜ ಸಳಗಿ ಎಂಬ ಭ್ರಷ್ಟ ರೆಡ್ ಹ್ಯಾಂಡಾಗಿ ಸಿಕ್ಕಿಬಿದ್ದಿದ್ದಾನೆ. ಇಂತಹ ಹೆದ್ದಾರಿ ದರೋಡೆಕೋರರನ್ನು ಯಾವುದರಲ್ಲಿ ನಿವಾಳಿಸಬೇಕು?


■ ಟಿ.ಎನ್. ಷಣ್ಮುಖ

ಮಾಡುವುದು ಸರಿಯಲ್ಲ. ರಾಜ್ಯ ಸರಕಾರದ ಪರವಾಗಿ ವಾದಿಸಿದವರು ಸಮರ್ಥವಾಗಿ ವಾದಿಸಿದ್ದರಿಂದಲೇ, ತಮಿಳುನಾಡು ಸರಕಾರ ಬಯಸಿದಷ್ಟು ನೀರನ್ನು ಕೊಡಲು ಸರ್ವೋಚ್ಚ ನ್ಯಾಯಾಲಯ ಆದೇಶಿಸಿಲ್ಲ ಎಂಬುದನ್ನು ನಾವು ಮನಗಾಣಿಸಬೇಕು. ಹಾಗಾಗಿ ಅನವಶ್ಯಕವಾದ ಆರೋಪಗಳಿಂದ ಯಾವುದೇ ರೀತಿಯ ಪ್ರಯೋಜನ ಇಲ್ಲ ಎಂಬುದನ್ನು ಹೇಳಬೇಕಾಗಿದೆ.

ಇದಕ್ಕಿಂತಲೂ ಗಂಭೀರವಾದ ವಿಚಾರ ಏನು ಎಂದರೆ ಅಕ್ಟೋಬರ್ 18ಕ್ಕೆ ನಮ್ಮ ಮುಖ್ಯ ಅರ್ಜಿ ವಿಚಾರಣೆಗೆ ಬರಲಿದೆ. ಈ ಅರ್ಜಿಯ ವಿಲೇವಾರಿಯ ಸಂದರ್ಭದಲ್ಲಿ ಕರ್ನಾಟಕ ರಾಜ್ಯಕ್ಕೆ ಆಗಿರುವ ಅನ್ಯಾಯ ಸರಿಯಾಗುವ ನಿರೀಕ್ಷೆ ಇದೆ. ಈ ವಿಚಾರದಲ್ಲಿ ನನ್ನ ಅಧ್ಯಯನದಂತೆ ಕರ್ನಾಟಕ ರಾಜ್ಯಕ್ಕೆ ಕೆಲವು ಟಿ.ಎಂ.ಸಿ. ನೀರು ಹೆಚ್ಚುವರಿಯಾಗಿ ದೊರೆಯಲಿದೆ. ಆದರೆ ನಾವು ಸರ್ವೋಚ್ಚ ನ್ಯಾಯಾಲಯದ ಆದೇಶವನ್ನು ಪಾಲನೆ ಮಾಡದೆ, ಮುಖ್ಯ ಅರ್ಜಿಯ ವಿಚಾರಣೆಯ ವೇಳೆಯಲ್ಲಿ ನ್ಯಾಯಾಲಯದ ಮುಂದೆ ಹೋಗುವುದಾದರೂ ಹೇಗೆ ಎಂಬುದು ನನ್ನ ಪ್ರಶ್ನೆಯಾಗಿದೆ. ಒಂದುವೇಳೆ ಸರ್ವೋಚ್ಚ ನ್ಯಾಯಾಲಯವು "ನೀವು ನಮ್ಮ ಮಧ್ಯಂತರ ಆದೇಶವನ್ನು ಪಾಲನೆ ಮಾಡಿಲ್ಲ, ನಿಮಗೆ ನ್ಯಾಯಾಂಗ ವ್ಯವಸ್ಥೆಯ ಬಗ್ಗೆ ಗೌರವವಿಲ್ಲ, ಹಾಗಿರುವಾಗ ಈಗೇಕೆ ಈ ಅರ್ಜಿಯ ವಿಲೇವಾರಿಗೆ ನಮ್ಮ ಬಳಿ ಬಂದಿದ್ದೀರಿ?" ಎಂದು ಪ್ರಶ್ನಿಸಿ, ರಾಜ್ಯ ಸರಕಾರದ ಮುಖ್ಯ ಅರ್ಜಿಯನ್ನು ವಜಾ ಮಾಡಿದರೆ ಆಗಬಹುದಾದ ನಷ್ಟದ ಅರಿವು ನೀರು ಬಿಡಲೇಬೇಡಿ ಎಂದು ಹೇಳುವವರಿಗೆ ಇದೆಯೇ?

ಕೆಲವರಿಗೆ ಸಿದ್ದರಾಮಯ್ಯ ನೇತೃತ್ವದ ರಾಜ್ಯ ಸರಕಾರ ಅಸ್ಥಿರಗೊಳಿಸಬೇಕು ಎಂಬ ಬಯಕೆ ಇದೆ. ಹಾಗಾಗಿ ಅವರು ನೀರು ಬಿಡಬೇಡಿ ಎಂದು ಹೇಳುತ್ತಿದ್ದಾರೆ. ಆದರೆ ಮುಖ್ಯಮಂತ್ರಿ ಸಿದ್ದರಾಮಯ್ಯ ಇದಕ್ಕೆ ಬಲಿಯಾಗಬಾರದು ಎಂಬುದು ನನ್ನ ಮನವಿ. ಸರ್ವೋಚ್ಚ ನ್ಯಾಯಾಲಯದಲ್ಲಿ ಕರ್ನಾಟಕ ರಾಜ್ಯ ಸರಕಾರದ ಪರವಾಗಿ ಸರಿಯಾದ ಅಂಕಿಅಂಶಗಳನ್ನು ಮಂಡಿಸಿ, ನ್ಯಾಯಾಂಗದ ಹೋರಾಟ ಮಾಡುವುದರ ಮೂಲಕವೇ ಇದನ್ನು ಇತ್ಯರ್ಥಪಡಿಸಬೇಕೇ ವಿನಹ ಬೀದಿ ಹೋರಾಟದಿಂದ ಅಲ್ಲ. ಇಲ್ಲವೇ ಎರಡೂ ರಾಜ್ಯ ಸರಕಾರಗಳು ಪರಸ್ಪರ ಮಾತುಕತೆಯ ಮೂಲಕ ಈ ಬಿಕ್ಕಟ್ಟನ್ನು ಪರಿಹರಿಸಿಕೊಳ್ಳಬೇಕು.

■ ಎ.ಕೆ.ಸುಬ್ಬಯ್ಯ



ರೈ ಕೊರಳಿಗೆ ಚಾನಲ್ ಉರುಳು

ಸಿನಿಮಾ ನಟನೊಬ್ಬನ ಮರ್ಜಿಯ ಮೇಲೆ ಕಾವೇರಿ ವಿವಾದವನ್ನು ಬಗೆಹರಿಸಲು ಸಾಧ್ಯವೇ? ಸಮಯಾನುಸಾರ ಕಲಾವಿದರೂ ರಾಜಕಾರಣಿಗಳ ಮತ್ತು ಹೋರಾಟಗಾರರ ಕೆಲಸ ಮಾಡಬೇಕೇ? ಯಾವುದೋ ಸಮಸ್ಯೆಯೊಂದಕ್ಕೆ ಸಿನಿಮಾ ಮಂದಿ ತಮ್ಮ ಪ್ರತಿಕ್ರಿಯೆ ನೀಡಲೇಬೇಕೆ? ಹಾಗಂತ ಟಿವಿ ಮಂದಿಗೆ ಕಡ್ಡಾಯ ಪಡಿಸುವ ಅಧಿಕಾರ ನೀಡಿದವರು ಯಾರು? ಇದೊಳ್ಳೇ ರಾಮಾಯಣವಾಯಿತಲ್ಲ ಅನ್ನಿಸಬಹುದಲ್ಲವೆ?

ಅನ್ನಿಸಲೇಬೇಕು. ಮೊನ್ನೆ ಜನಶ್ರೀ ಚಾನಲ್ ಮಾಡಿದ ಅಧಿಕಪ್ರಸಂಗಿತನಕ್ಕೆ ಒಂದಷ್ಟು ಮಂದಿಗೆ ಬಿಟ್ಟಿ ಮನರಂಜನೆಯೇನೋ ಸಿಕ್ಕಿರಬಹುದು. ಆದರೆ ಕನ್ನಡ ಚಿತ್ರರಂಗಕ್ಕಾದ ಲುಕ್ಸಾನು ಮತ್ತು ನಮ್ಮದೇ ನಟನೊಬ್ಬನಿಗಾದ ಕಿರುಕುಳದ ಲೆಕ್ಕ ಹಾಕುವವರಾದರೂ ಯಾರು?

ಯಾರೋ ಚಾನಲ್‌ನ ಕುಚೇಷ್ಟೆ ಮತ್ತು ನಿರೂಪಕಿಯೊಬ್ಬಳ ಹುಂಬತನ ಹೇಗೆ ಸಾಮಾಜಿಕ ಕ್ಷೋಭೆಯೊಂದಕ್ಕೆ ಕಾರಣವಾಗುತ್ತದೆ ಮತ್ತು ಎಂಥಾ 'ಸಾಂಸ್ಕೃತಿಕ ನ್ಯೂಸೆನ್ಸ್' ಒಂದನ್ನು ಹುಟ್ಟಿ ಹಾಕುತ್ತದೆ ಎಂಬುದಕ್ಕೆ ಮೊನ್ನೆ ನಡೆದ 'ಪ್ರಕಾಶ್ ರೈ ಫಜೀತಿ' ಎಂಬುದು ಸಣ್ಣ ಉದಾಹರಣೆಯಷ್ಟೇ.

ಸದ್ಯ ಪ್ರಕಾಶ್ ರೈ ನಿರ್ಮಾಣದ 'ಇದೊಳ್ಳೆ ರಾಮಾಯಣ' ಚಿತ್ರ ರಾಜ್ಯಾದ್ಯಂತ ಬಿಡುಗಡೆಯಾಗಿದೆ. ಆಂಧ್ರಾ, ತಮಿಳುನಾಡು, ಕೇರಳ ಮಾತ್ರವಲ್ಲದೆ ಬಾಲಿವುಡ್ ಮಟ್ಟಿಗೂ ತನ್ನದೇ ಛಾಪು ಮೂಡಿಸಿರುವ ಬಹುಭಾಷಾ ನಟ ಪ್ರಕಾಶ್ ರಾಜ್ ಹೊರರಾಜ್ಯಗಳಲ್ಲಿ ಯಾವುದೇ ಹೆಸರಲ್ಲಿ ಮಿಂಚುತ್ತಿದ್ದರೂ ಕನ್ನಡಿಗರ ಪಾಲಿಗೆ ಪ್ರಕಾಶ್ ರೈಯೇ. ಆತ ನಮ್ಮ ಹುಡುಗ. ಕರ್ನಾಟಕದ ಮಣ್ಣಿನ ಮಗ. ತಾನು ಬೇರೆಬೇರೆ ಭಾಷೆಗಳಲ್ಲಿ ಬಣ್ಣ ಹಚ್ಚಿ ಬೆವರು ಹರಿಸಿದ ದುಡ್ಡನ್ನು ತಂದು ಕನ್ನಡಕ್ಕೆ ಸುರಿಯುತ್ತಿರುವುದೊಂದೇ ಆತನ ಕನ್ನಡ ಪ್ರೇಮ ಮತ್ತು ಕರ್ನಾಟಕ ನಿಷ್ಠೆಯ ದ್ಯೋತಕವಷ್ಟೆ. ತನ್ನ ದುಡಿಮೆಯ ಐದಾರು ಕೋಟಿ ರೂಪಾಯಿಗಳಷ್ಟನ್ನು ಗಾಂಧಿನಗರಕ್ಕೆ ತಂದು ಇಲ್ಲಿನ ಕಲಾವಿದರು, ತಂತ್ರಜ್ಞರ ಹೊಟ್ಟೆಪಾಡಿಗೊಂದು ಅವಕಾಶ ಕಲ್ಪಿಸುವುದು, ಇಲ್ಲಿನ ಟೀವಿ, ಪತ್ರಿಕೆಗಳಿಗೆ ನೀಡುವ ಜಾಹೀರಾತು, ಆ ಮೂಲಕ ಕನ್ನಡ ಚಿತ್ರರಂಗವನ್ನೂ ಗಟ್ಟಿಗೊಳಿಸುವುದಿದೆಯಲ್ಲ, ಅದನ್ನು ವ್ಯಾಪಾರ ಎಂದೇ ಇಟ್ಟುಕೊಳ್ಳೋಣ.





ಗೋಲ್ಡ್ ಫಿಂಚಿನಲ್ಲಿ

ಪ್ರಕಾಶ್ ರೈ ಕೇವಲ ವ್ಯಾಪಾರಕ್ಕಷ್ಟೇ ವರ್ಷಕ್ಕೊಂದು ಕನ್ನಡ ಚಿತ್ರ ನಿರ್ಮಿಸುವುದಾಗಿದ್ದರೆ ತಮಿಳಿನಲ್ಲೋ ತೆಲುಗಿನಲ್ಲೋ ಮಾಡಿ ಇನ್ನೂ ಹೆಚ್ಚಿನ ರೊಕ್ಕ ಸಂಪಾದಿಸಬಹುದಿತ್ತಲ್ಲವೇ? ಇದನ್ನೇ ಬಾಲಿವುಡ್ ಮಟ್ಟಕ್ಕೆ ಮಾಡಿ ನೂರಾರು ಕೋಟಿ ಗಳಿಸಬಲ್ಲ ತಾಕತ್ತಾಗಲಿ ಅವಕಾಶವಾಗಲಿ ಪ್ರಕಾಶ್ ರೈಯಂಥ ನಟನೊಬ್ಬನಿಗೆ ಇಲ್ಲವೆಂದವರ್‍ಯಾರು?

ಇರಲಿ, ಮೊನ್ನೆ ಅಂದರೆ ಅಕ್ಟೋಬರ್ 1 ರಂದು ಬಳ್ಳಾರಿ ಗಣಿಕೋರರ ಖಾಸಗಿ ಚಾನಲ್ಲಾದ 'ಜನಶ್ರೀ' ಮಾಡಿದ ಕುಚೋದ್ಯವನ್ನೇ ಪರಿಗಣಿಸೋಣ. ಆವತ್ತು ತಮ್ಮ 'ಇದೊಳ್ಳೆ ರಾಮಾಯಣ' ಚಿತ್ರದ ಪ್ರೊಮೋಷನ್ನಿಗೆಂದು ಪ್ರಕಾಶ್ ರೈ ಬೆಂಗಳೂರಿನ ಗೋಲ್ಡ್ ಫಿಂಚ್ ಹೋಟೆಲಿನಲ್ಲಿ ವಿಶೇಷ ಆಡಿಷನ್ ಇಟ್ಟುಕೊಂಡಿದ್ದಾರೆ. ಮಧ್ಯಾಹ್ನ ಮೂರು



ಗಂಟೆಗೆ ಗುರುವಾರ ಪ್ರೊಮೋಷನ್‌ನಲ್ಲಿ 'ಇದೊಳ್ಳೆ ರಾಮಾಯಣ' ಚಿತ್ರದ ಅನೇಕ ಕಲಾವಿದರು ಮಾತ್ರವಲ್ಲದೆ ಅದರ ತಂತ್ರಜ್ಞರೂ ಇದ್ದಾರೆ.

'ಇದೊಳ್ಳೆ ರಾಮಾಯಣ' ಅವರ ಸ್ವಂತ ನಿರ್ಮಾಣದ ಮೂರನೇ ಕನ್ನಡ ಚಿತ್ರ. 'ಪ್ರಕಾಶ್ ರಾಜ್ ಸಿನೇಮಾಸ್' ಕೇವಲ ಕನ್ನಡ ಚಿತ್ರಗಳ ನಿರ್ಮಾಣಕ್ಕೆಂದೇ ಹುಟ್ಟಿಕೊಂಡ ಸಂಸ್ಥೆಯಲ್ಲ, ಕನ್ನಡ ಚಿತ್ರಗಳ ಮಾರುಕಟ್ಟೆ, ಉತ್ಪತ್ತಿಗೆ ಹೋಲಿಸಿದರೆ ಇಲ್ಲಿ ಸಿನಿಮಾ ಮಾಡುವುದರಿಂದ ಅವರಿಗೆ ಅಂಥ ಲಾಭವೇನೂ ಇಲ್ಲ, ಹಾಗಿದ್ದೂ 'ನಾನೂ ನನ್ನ ಕನಸು', ನಂತರ 'ಒಗ್ಗರಣೆ' ಮತ್ತು ಈಗ 'ಇದೊಳ್ಳೆ ರಾಮಾಯಣ' ನಿರ್ಮಿಸಿದ್ದಾರೆ. ಇಂಥ ಚಿತ್ರಗಳಿಂದ ಪ್ರಕಾಶ್ ರೈಗೆ ಲಾಭಕ್ಕಿಂತ ನಷ್ಟವಾಗಿದ್ದೇ ಹೆಚ್ಚು, ಅಷ್ಟಾಗ್ಯೂ ರೈ ಕರ್ನಾಟಕಕ್ಕೆ ಬಂದು ವರ್ಷಕ್ಕೊಂದು ಕನ್ನಡ ಚಿತ್ರ ಮಾಡುತ್ತಿದ್ದಾರೆಂದರೆ, ಅದು ಅವರ ಹುಟ್ಟೂರಿನ ಪ್ರೀತಿ ಮತ್ತು ವ್ಯಾಮೋಹವಲ್ಲದೆ ಬೇರೇನೂ ಆಗಲು ಸಾಧ್ಯವಿಲ್ಲ. ಮಾಮೂಲಿ ಜನ ಸಾಮಾನ್ಯರಿಗೆ ಅರ್ಥವಾಗುವ ರೈಯ ಈ ಕರ್ನಾಟಕ ಪಕ್ಷಪಾತವನ್ನು ಜನಶ್ರೀ ಟೀವಿಯ ನಿರೂಪಕಿಗೆ ಹೇಗೆತಾನೇ ಅರ್ಥವಾಗಲು ಸಾಧ್ಯ?

ಕೆಣಕಿದ ಆ್ಯಂಕರ್

ಆವತ್ತು ಅಂದರೆ ಅಕ್ಟೋಬರ್ 1 ರ ಶನಿವಾರ ಮಧ್ಯಾಹ್ನ ರೈಯ ಗೋಲ್ಡ್ ಫಿಂಚ್ ಪತ್ರಿಕಾಗೋಷ್ಠಿ ಬೇರೆಲ್ಲ ಸಿನಿಮಾಗಳ ಹಾಗೆಯೇ ಪಸಂದಾಗಿ ನಡೆದಿದೆ. ಸಿನಿಮಾ ಪತ್ರಕರ್ತರಿಗೆಂದೇ ಪಾರ್ಟಿಯೂ ಸಜ್ಜಾಗಿದೆ. ಎಲ್ಲಾ ಮುಗಿದ ಮೇಲೆ ಮುಗಿಬಿದ್ದ ಒಂದೊಂದೇ ಟೀವಿಗಳಿಗೆ ಪ್ರತ್ಯೇಕ ಸಂದರ್ಶನ ನೀಡಲೆಂದೇ ಪ್ರಕಾಶ್ ರೈ ಅವಕಾಶ ಕಲ್ಪಿಸಿದ್ದಾರೆ. ಅದು 'ಇದೊಳ್ಳೆ ರಾಮಾಯಣ'ದ ವ್ಯಾಪಾರಿ ತಂತ್ರವೆಂದೇ ಇಟ್ಟುಕೊಂಡರೂ ಅದಕ್ಕೆಂದು ರೈ ವಹಿಸಿದ ತಾಳ್ಮೆ, ವ್ಯವಧಾನ ಮತ್ತು ಸಮಯವಿದೆಯಲ್ಲ; ಅದಕ್ಕೂ ಒಂದು ಬೆಲೆ ಅಂತ ಇದೆಯಲ್ಲವೆ? ಅದರಿಂದ ಚಾನಲ್‌ಗಳ ಟಿಆರ್‌ಪಿಗೂ ಲಾಭ ತಾನೆ?

ಒಂದೊಂದೇ ಚಾನಲ್ಲುಗಳು 'ಇದೊಳ್ಳೆ ರಾಮಾಯಣ' ಕುರಿತಂತೆ ರೈಯಿಂದ ಏನೇನು ಬಾಯಿ ಬಿಡಿಸಬೇಕೋ ಬಿಡಿಸಿಕೊಂಡೇ ಜಾಗ ಖಾಲಿ ಮಾಡಿದ ನಂತರ ಕೊನೆಗೆಂಬಂತೆ ಅಟಕಾಯಿಸಿಕೊಂಡಿದ್ದು ಜನಶ್ರೀ. ರೈ ಕೂರಿಸಿಕೊಂಡು ಬಾಯಿಬಿಡಿಸಲೆಂದೇ ಚಾನಲ್ ಮಹಾಶಯರು 'ಐಶ್ವರ್ಯ' ಎಂಬ ಅಮುಲ್ ಬೇಬಿಯಂಥ ನಿರೂಪಕಿಯನ್ನು ಅಣಿಗೊಳಿಸಿದ್ದಾರೆ. ಸಂದರ್ಶನವೇನೋ ಸಿನಿಮಾದ ವಿಷಯವಾಗೇ ಶುರುವಾಗಿದೆ. ಸಿನಿಮಾದ ಕುರಿತು ಅದೂ ಇದೂ ಯಥಾವತ್ ಪ್ರಶ್ನೆಗಳನ್ನೇ ನಿರಾಸಕ್ತಿಯಿಂದ ಕೇಳುತ್ತಿದ್ದ ನಿರೂಪಕಿ ಇದ್ದಕ್ಕಿದ್ದಂತೆ ಕಾವೇರಿ ವಿವಾದದ ಮಾತು ಶುರುವಿಟ್ಟಿದ್ದಾಳೆ. ಅದೂ ಎಂಥಾ ಉಡಾಫೆಯ ಪ್ರಶ್ನೆಯೆಂದರೆ "ನೀವೇನೋ 'ಇದೊಳ್ಳೆ ರಾಮಾಯಣ' ಅಂತ ಸಿನಿಮಾ ಮಾಡ್ತೀರಿ. ಆದ್ರೆ ಕರ್ನಾಟಕದಲ್ಲೇ ಕಳೆದ ಒಂದು ತಿಂಗಳಿಂದ ಕಾವೇರಿ ರಾಮಾಯಣ ನಡೀತಾ ಇದೆ. ಈ ಬಗ್ಗೆ ನೀವೇನು ಹೇಳ್ತೀರಾ? ಇದು ಪರಿಹಾರ ಕಂಡು ಕೊಳ್ಳುತ್ತಾ...." ಎಂದು ಅನಿರೀಕ್ಷಿತ ಚೇಷ್ಟೆಗಿಳಿದಿದ್ದಾಳೆ ನಿರೂಪಕಿ.



ಏಕಾಏಕಿ ಎದುರಾದ ಈ ಪ್ರಶ್ನೆಯಿಂದಾದ ಆಘಾತಕ್ಕೆ ಅಷ್ಟೇ ಹುಷಾರಾಗಿ ಸಾವರಿಸಿಕೊಂಡ ರೈಗೆ ಕ್ಷಣಾರ್ಧದಲ್ಲೇ ಕುಚೇಷ್ಟೆ ಅರ್ಥವಾಗಿದೆ. "ನಟ, ನಿರ್ದೇಶಕ, ನಿರ್ಮಾಪಕ ಈ ಪ್ರಕಾಶ್ ರೈ ಆಗಿ ನಾನು ಮಾತಾಡುತ್ತಿರುವುದು 'ಇದೊಳ್ಳೆ ರಾಮಾಯಣ' ಸಿನಿಮಾ ಬಗ್ಗೆ. ರಾಜಕೀಯ ಅದು ದೊಡ್ಡ ವಿಷಯ. ನೀವಂದುಕೊಂಡಷ್ಟು ಚಿಕ್ಕ ವಿಷಯ ಅಲ್ಲ ಅದು, ತುಂಬಾ ಆಳವಾದ ವಿಷಯ. ರೈತರ ಸಮಸ್ಯೆ ನೀರು ಮಾತ್ರವಲ್ಲ. ಬೇರೆಬೇರೆ ಸಮಸ್ಯೆಗಳೂ ಇವೆ. ಅದನ್ನು ವಿವರವಾಗಿ ಮತ್ತು ಗಂಭೀರವಾಗಿ ಮಾತಾಡಬೇಕು. ಈ ರೀತಿ ಸುಮ್ಮಸುಮ್ಮನೆ ಪ್ರಶ್ನೆ ಕೇಳಿ ಬಾಯಿಗೆಬಂದಂತೆ ಮಾತಾಡಿ ನನ್ನನ್ನು ಎಳೀಬೇಡಿ. ಇದನ್ನು ನೀವು ರೀಲೇ ಮಾಡಲೇ ಬೇಕು..." ಎಂದು ಆಕ್ರೋಶದಿಂದಲೇ ರೈ ಉತ್ತರಿಸಿದ್ದಾರೆ.

ಮೈಕ್ ಕಿತ್ತು ನಡೆದ ಪ್ರಕಾಶ್

ಅಷ್ಟಕ್ಕೆ ಸುಮ್ಮನಾಗದ ಆ ನಿರೂಪಕಿ ಮತ್ತೆ ಅದೇ ಪ್ರಶ್ನೆ ಕೆದಕುತ್ತಿದ್ದಂತೆ ರೈ ಸಿಟ್ಟು ನೆತ್ತಿಗೇರಿದೆ. ಇದನ್ನು ನಿಲ್ಲಿಸಿ ಎಂದು ಗತ್ಯಾಗಿಯೇ ಚಾನಲ್ ಕ್ಯಾಮರಾಮನ ಸೂಚಿಸಿದ್ದಾರೆ.

"ಸ್ನ್ಯಾಪ್ ಇಟ್, ಇದರಿಂದ ಏನು ಸಿಗುತ್ತದೆ ನಿಮ ಸ್ನ್ಯಾಪ್ ಇಟ್, ಜನರು ಈಗಲೇ ಕೋಪದಲ್ಲಿದ್ದಾ ನೋವಿನಲ್ಲಿದ್ದಾರೆ. ಸಿನಿಮಾ ನೆಪದಲ್ಲಿ ಬೇರೆ ಏನ ಕೇಳಿಕೊಂಡು ಇನ್ನೇನೋ ಮಾಡಲು ಯತ್ನಿಸುತ್ತಿದ್ದೀರ ಇಂಥ ಕೆಟ್ಟಬುದ್ಧಿ ಯಾಕೆ ಬರುತ್ತದೆ ನಿಮಗೆ? ಇದ ಇದು ಸಮಯ ಅಲ್ಲ ಅಲ್ವೇ....? ದಯವಿಟ್ಟು ನೀ ಜವಾಬ್ದಾರಿಯಿಂದ ಇರಬೇಕು. ಇದನ್ನು ನೀವು ರೆಕಾ ಮಾಡಿ ಜನರಿಗೆ ಹೇಳಬೇಕು."

ಬಾಯಿಗೆ ಬಂದಂಗೆ ಯಾಕೆ ಕೇಳ್ತೀರಿ

"ನಿಮಗ್ಯಾಕೆ ಆ ಜವಾಬ್ದಾರಿಗಳಿಲ್ಲ. ಯ ಸಂದರ್ಭದಲ್ಲಿ ಯಾವ ಪ್ರಶ್ನೆ ಕೇಳಬೇಕು ಅನ್ನೋ ಬೇಸಿ ತಾಳ್ಮೆ ಇಲ್ಲದಿದ್ದರೆ ತಪ್ಪಲ್ವಾ, ಅಮ್ಮಾ ನೀವು ಮಾ ಇರೋದು? ನಾನ್ಯಾವ ಪಾಪ ಮಾಡಿದ್ದೀನಿ ನಿಮ ಇದರಿಂದ ಏನು ಸಾಧಿಸುತ್ತೀರಿ? ನಿಮ್ಮ ಉದ್ದೇಶವೇನು ಎಂದು ರೈ ಕೆರಳುತ್ತಿದ್ದಂತೆ ಆ್ಯಂಕರ್ "ಇಲ್ಲಿರುವ ನಟರು ಅಲ್ಲಿರುವ ನಟರು..." ಎಂದು ಏನೋ ಹೇಳ ಯತ್ನಿಸಿದ್ದಾಳೆ.

"ಇಲ್ಲಿರುವವರೂ ನಟರೇ ಅಲ್ಲಿರುವವರೂ ನಟ ಎಲ್ಲರೂ ಮನುಷ್ಯರೇ, ಸಮಸ್ಯೆ ಬೇರೆ ಇದೆ. ನಮ್ಮೆಲ್ಲರಿ ಗೊತ್ತದು..." ಎಂದಿದ್ದೇ ತಮ್ಮ ಕೊರಳಪಟ್ಟಿಗೆ ಅಂಟ ಚಾನಲ್‌ನವರ ಮೈಕ್ ಕಿತ್ತು ಕೆಳಕ್ಕಿಟ್ಟಿದ್ದಾರೆ. ಮು ಗಂಟಿಕ್ಕಿದ್ದಾರೆ. ಸಿಡುಕಿನಿಂದಲೇ "ಯಾವ ಚಾನಲ್ ನಿಮ್ಮದು..." ಎಂದಿದ್ದಾರೆ. "ಜನಶ್ರೀ...." ಎನ್ನುತ್ತಿದ್ದ "ನೆವರ್ ಕಮ್ ಟು ಮೀ ಅಗೇಯ್ನ್" ಎಂದಿದ್ದೇ ಎ ನಡೆದಿದ್ದಾರೆ. "ಹೋಗುವ ಮುನ್ನ ಕಾಂಟ್ರೋವರ್ಸಿ ಬೇಕೇ ನಿಮಗೆ...?" ಎಂದು ರೇಗುತ್ತಾ ಹೊರನಡೆದಿದ್ದಾರೆ.

ಇದು ಆವತ್ತೇ ಜನಶ್ರೀ ಬಿತ್ತರಿಸಿದ 'ಇದೊ ರಾಮಾಯಣ'ದ ರಾದ್ಧಾಂತ. ಬಹುಶಃ ಯಥಾವತ್ತಾ ಬಿತ್ತರಿಸಿದ್ದರೆ ಚಾನಲ್ ಕುಚೇಷ್ಟೆ ಎಂಥವರಿಗ ಅರ್ಥವಾಗುತ್ತಿತ್ತು, ಆದರೆ ದೃಶ್ಯಾವಳಿಯ ನಡುವೆ 'ಕಾವ ನೀರು ಕುಡಿದ ಕನ್ನಡಿಗನಿಂದಲೇ ದ್ರೋ' 'ವಿವಾದದ ಬಗ್ಗೆ ಕೇಳಿದರೆ ಪ್ರಕಾಶ್ ರ ಕೋಪ', 'ಹಾಗಾದರೆ ಕಾವೇ ಹೋರಾಟಕ್ಕೂ ಇವರಿಗೂ ಸಂಬ ಇಲ್ವಾ?', 'ಅಭಿಪ್ರಾಯ ಕೇಳಿದ್ದಕ್ಕೆ ಮ ಹೋದ ಪ್ರಕಾಶ್ ರೈ', 'ಸಮಾಧಾ ಮಾತಾದರೂ ಹೇಳಬಹುದಿತ್ತು, ನಾ ಅಭಿಪ್ರಾಯ ಕೇಳುವುದು ಕೂ ತಪ್ಪಾ...?' ಇತ್ಯಾದಿ ಕಲ್ಪಿತ, ಪ್ರಚೋ ಶೀರ್ಷಿಕೆಗಳನ್ನು ಕೊಟ್ಟಿದ್ದಾರೆ!

ಕಾವೇರಿ ದ್ರೋಹಿಯಂತೆ?

ಇದರಿಂದ ಪ್ರಕಾಶ್ ರೈ ವಿರುದ್ಧ ಕನ್ನಡಿಗ ತಿರುಗಿಬಿದ್ದು ಅವರ ಸಿನಿಮಾಕ್ಕೆ ಜನ ಬಹಿಷ್ ಹಾಕುತ್ತಾರೆಂಬುದು ಚಾನಲ್‌ನ ನಿರೀಕ್ಷೆಯಾಗಿತ್ತೇನ ಆದರದು ಬೇರೆಯದೇ ರೂಪ ತಾಳಿದೆ. ಸಾಮಾ ಜಾಲತಾಣ ಫೇಸ್‌ಬುಕ್ ಮತ್ತು ವ್ಯಾಟ್ಸಪ್‌ಗಳಲ್ಲಿ ರೈಯ ಬೆಂಬಲಿಸಿ ಚಾನಲ್ ಚೇಷ್ಟೆಗೆ ಜನ ಮಂಗಳಾ ಶುರುವಿಟ್ಟಿದ್ದು ಬಹುಶಃ ಅದರ ಹತಾಶೆಯ ಹೆಚ್ಚಿಸಿತೇನೊ. ಇದಾದ ಕೆಲ ಗಂಟೆಗಳಲ್ಲೇ ರೈ ವರ್ತನೆಯ ಖಂಡಿಸಲೆಂದೇ ಕೆಲ ನಿರುದ್ಯೋಗಿ ವಕ್ತಾರರನ್ನು ಹಿಡಿ ತಂದು ಅವರ ಬಾಯಿಂದ ರೈ ಮಾಡಿದ್ದೇ ತಪ್ಪೆಂಬ ಡೈಲಾಗ್ ಕೂಡ ಹೊಡೆಸಿದ್ದಾರೆ. ಹೀಗೆ ಚಾನಲ್‌ರ ಒತ್ತಡ ತಾಳಲಾರದೆ ರೈ ವಿರುದ್ಧ ಕಿಡಿಕಾರಿದ ಮಹನೀ ರಾದರೂ ಎಂಥವರೆಂದರೆ, ಸದ್ಯ ಯಾವುದೇ ಸಿನಿ ಕೈಯಲ್ಲಿಲ್ಲದೆ ಗಾಯ ನೆಕ್ಕುತ್ತಿರುವ ಸೋಕಾಲ್ಡ್ ಡೈರೆ ಎ.ಎಂ.ಆರ್. ರಮೇಶ್, ರಕ್ಷಣಾ ವೇದಿಕೆಯ ಸಂ ಬಣಗಳಲ್ಲೊಂದರ 'ರಾಜ್ಯ' ಅಧ್ಯಕ್ಷ ಶಿವರಾಮೇಗೌಡ

ಇವರಾದರೂ ಗಿಣಿಪಾಠ ಒಪ್ಪಿಸದೇ ಬೇರೇ ಮಾಡಲು ಸಾಧ್ಯ? ಅಂದರೆ ಚಾನಲ್‌ನವರ ಟಿಆ ಚೇಷ್ಟೆಗೆ ಪ್ರಕಾಶ್ ರೈ ತಲೆ ಕೊಡಲೇಬೇಕಿತ್ತು; ಕೊ ಕಾರಣಕ್ಕಾಗಿ 'ಕಾವೇರಿ ನೀರು ಕುಡಿದೂ ದ್ರೋಹಿ ಕನ್ನಡಿಗ...!'

ಆದರೆ ಮರುದಿನ ಬಹುತೇಕ ಪತ್ರಿಕೆಗಳಲ್ಲಿದು ಚಾ ಪಾಲಿಗೇ ಮುಳುವಾಗಿ ಹೋಯಿತು. ಬಹುತೇಕ ಪತ್ರಿಕೆ 'ನಿರೂಪಕಿ ಮೇಲೆ ರೈ ಕಿಡಿ' ಎಂಬಂತೆ ವರದಿ ಪ್ರಕಟಿಸಿ

▶▶ 15

ದಕ್ಷಿಣದ ನಾನಾ ಪಾಟೇಕರ್ ರೀತಿಯಲ್ಲಿ ರೈ ಮೆರೆದ ನಿಷ್ಠೆ

ಇದೆಂಥಾ ಸೋಗಲಾಡಿತನವೆಂದರೆ ಕದಿಯಲು ಬಂದ ಕಳ್ಳನನ್ನು ಗೌರವಯುತವಾಗಿ ನಡೆಸಿಕೊಳ್ಳದಿರುವುದೇ ಅಪರಾಧವೆಂದಂತೆ!

ಚಾನಲ್ ಒಂದು ಕೊರಳಪಟ್ಟಿ ಹಿಡಿದು 'ನಿನ್ನ ಕರ್ನಾಟಕ ನಿಷ್ಠೆಗೆ ನಮ್ಮಿಂದೇಕೆ ಸರ್ಟಿಫಿಕೇಟ್ ಪಡೆಯಲಿಲ್ಲ' ಎಂದು ದಬಾಯಿಸುತ್ತಿದ್ದರೆ 'ರೈ ಹಾಗೆ ಸಿಡುಕಿದ್ದೇ ತಪ್ಪು, ಸಮಾಧಾನದಿಂದ ವರ್ತಿಸಬೇಕಿತ್ತು, ಚಾನಲ್‌ನವರನ್ನು ಗೌರವದಿಂದ ಕಾಣಬೇಕಿತ್ತು' ಎಂದು ಬಿಟ್ಟಿ ತೀರ್ಪು ನೀಡುವವರಿಗೆ ಬಹುಶಃ ಗೊತ್ತಿರಲಿಕ್ಕಿಲ್ಲ, ಪ್ರಕಾಶ್ ರೈ ಹೀಗೆ ತೀರ್ಪು ನೀಡುವವರು, ಚಾನಲ್‌ನವರು, ಸಲಹೆ ಕೊಡುವವರಿಗಿಂತಲೂ ಸಾವಿರ ಪಟ್ಟು ಕರ್ನಾಟಕ ಪ್ರೇಮಿ ಮತ್ತು ಅವರೆಲ್ಲರಿಗಿಂತಲೂ ಕನ್ನಡಕ್ಕೆ ಹೆಚ್ಚು ಕೊಡುಗೆ ಕೊಟ್ಟಿರುವಾತ.

ಹೇಗೆ ಮಹಾರಾಷ್ಟ್ರದ ರೈತರ ದುರ್ಗತಿಯ ವಿರುದ್ಧ ಹಿಂದಿ ನಟ ನಾನಾ ಪಾಟೇಕರ್ ಪ್ರತಿನಿತ್ಯ ಒಂದಲ್ಲ ಒಂದು ರೀತಿಯಲ್ಲಿ ಹೆಣಗಾಡುತ್ತಿದ್ದಾರೋ ಅದನ್ನು ದಕ್ಷಿಣ ಭಾರತದ ಮಟ್ಟಿಗೆ ಅಕ್ಷರಶಃ ಚಾಲ್ತಿಗೆ ತಂದಿದ್ದು ಪ್ರಕಾಶ್ ರೈ. ತಮಿಳುನಾಡಿನಲ್ಲಿ ರೈತರ ದಿವಾಳಿಯ ವಿರುದ್ಧ ಸಾವಯವ ಕೃಷಿ ಪದ್ಧತಿಯನ್ನು ಚಾಲ್ತಿಗೆ ತರಲೆಂದೇ ರೈ ಹಲವಾರು ಯೋಜನೆಗಳನ್ನು ರಚಿಸಿದ್ದಾರೆ. ಅದನ್ನು ಕೇವಲ ತಮಿಳುನಾಡಿಗಷ್ಟೇ ಅಲ್ಲ, ಕರ್ನಾಟಕಕ್ಕೂ ವಿಸ್ತರಿಸುವ ಯೋಜನೆ ರೂಪಿಸಿದ್ದಾರೆ.

ಯಾರಿಗೂ ಗೊತ್ತಿಲ್ಲದ ಮತ್ತೊಂದು ಸಂಗತಿಯೆಂದರೆ ನಮ್ಮ ಕರ್ನಾಟಕದ ಅರಣ್ಯ ಸಂಪತ್ತು ಮತ್ತು ಹುಲಿ ಸಂರಕ್ಷಣೆಗೆಂದೇ ಪ್ರಕಾಶ್ ರೈ ಪ್ರತಿವರ್ಷ ಲಕ್ಷಗಳ ಲೆಕ್ಕದಲ್ಲಿ ಫಂಡು ಕೊಡುತ್ತಿದ್ದಾರೆ. ಇದೆಲ್ಲಕ್ಕೂ ಮೀರಿ ವರ್ಷಕ್ಕೊಂದರಂತೆ ಕೋಟಿ ಕೋಟಿ ಸುರಿದು ಕನ್ನಡ ಚಿತ್ರ ನಿರ್ಮಿಸಿ ಮೇಲಿಂದ ಮೇಲೆ ಕೈಸುಟ್ಟುಕೊಂಡರೂ ಛಲಕ್ಕೆ ಬಿದ್ದ ಬೇತಾಳನಂತೆ ಮತ್ತೆ ಮತ್ತೆ ಕನ್ನಡ ಸಿನಿಮಾ ನಿರ್ಮಿಸುವುದಿದೆಯಲ್ಲ; ಬೇರೆ ಯಾರು ತಾನೇ ಇಂಥ ತ್ಯಾಗ ಮಾಡಿದ್ದಾರೆ?

ಪ್ರಕಾಶ್ ರೈ ಅವರ ಕಾವೇರಿ ನಿಷ್ಠೆಯನ್ನೋ ಕರ್ನಾಟಕ ನಿಷ್ಠೆಯನ್ನೋ ಪ್ರಶ್ನಿಸುವ ಅಧಿಕಾರ ನಮಗ್ಯಾರಿಗಾದರೂ ಉಂಟೆ?




ಅದಾನಿ ಹಾಕಿದ ಕಾವೇರಿ ಬೆಸುಗೆ



ಹೀಗೆ 25 ಲಕ್ಷ ಸೌರಫಲಕಗಳ ಮೂಲಕ ಉತ್ಪಾದನೆಯಾಗುವ ಸೌರವಿದ್ಯುತ್ ಸಾಗಣೆಗೆಂದು ಬಳಕೆಯಾಗುವ ಕೇಬಲ್‌ಗಳ ಒಟ್ಟು ಉದ್ದ ಬರೋಬ್ಬರಿ ಆರು ಸಾವಿರ ಕಿಲೋಮೀಟರುಗಳ ದೂರದಷ್ಟು!

ವಿಶ್ವದ ಅತೀದೊಡ್ಡ ಅತ್ಯಂತ ಸುಸಜ್ಜಿತ ಸೌರವಿದ್ಯುತ್ ಕೇಂದ್ರ ಮತ್ತು ಅದು ಉತ್ಪಾದಿಸಿದ ವಿದ್ಯುತ್‌ನ ಆದಾಯವೆಂದರೆ ಅದು ಸಹಸ್ರ ಕೋಟಿಗಳ ಲೆಕ್ಕದ್ದೇ.


ಮೋದಿ-ಜಯಾ ಒಟ್ಟೊಟ್ಟಿಗೆ



ಮೋದಿ ಸಾಮ್ರಾಜ್ಯದ ಅನಭಿಷಕ್ತ ದೊರೆ ತಮ್ ಅದಾನಿ ಎಂಬ ಉದ್ದಿಮೆಕೋರ ಕರ್ನಾಟಕದ ಮುಸಿಗೆ ಬಂದು ಖರೀದಿಸಿದ ಉಷ್ಣವಿದ್ಯುತ್ ಸ್ಥಾವರದ ಣಿಕೆಯಾಗಿ ಪೇಜಾವರ ಸ್ವಾಮೀಜಿಗೊಂದು ಐಷಾರಾಮಿ ರನ್ನೇ ಕೊಟ್ಟಿರಬಹುದು. ಆದರೆ ತಮಿಳುನಾಡು ಖ್ಯಮಂತ್ರಿ ಜಯಲಲಿತಾಗಾಗಿ ಕಾವೇರಿಯನ್ನೆ ಡಿಗರಿಂದ ಕಿತ್ತು ಕೊಡುವಷ್ಟು ಸಂಬಂಧ ಮತ್ತು ಣವೂ ನಿಗೂಢ!

ಸುಪ್ರೀಂಕೋರ್ಟ್ ನ್ಯಾಯಮೂರ್ತಿ ಉದಯ್ ಲಲಿತ್ ವರ ತಂದೆ ಉಮೇಶ್ ಲಲಿತ್‌ಗೂ ಬಿಜೆಪಿ ರಾಷ್ಟ್ರೀಯ ಕ್ಷ ಅಮಿತ್ ಷಾಗೂ ಇರುವ ಆರ್‌ಎಸ್‌ಎಸ್ ಟಸ್ತಿಕೆಯೇನೂ ಗುಟ್ಟಾಗುಳಿದಿಲ್ಲ ನಿಜ. ಆದರೆ ಮೊನ್ನೆ ಂಬರ್ 20ರ ಸೋಮವಾರದಂದು ಸುಪ್ರೀಂಕೋರ್ಟ್ ತ ನೀಡಿದ ಅನ್ಯಾಯದ ತೀರ್ಪನ್ನು ಗಮನಿಸಿದರೆ ಳುನಾಡು ಮುಖ್ಯಮಂತ್ರಿ ಜಯಲಲಿತಾಗೂ ಸುಪ್ರೀಂ ಮೂ. ಉದಯ್ ಲಲಿತ್‌ಗೂ ಮತ್ತು ಪ್ರಧಾನಿ ೋದಿಗೂ ಮಧ್ಯೆ ಕೋರ್ಟು, ಕಾನೂನು, ದೇಶ ಮತ್ತು ಸಂವಿಧಾನವನ್ನೂ ಮೀರಿದ ಇನ್ನೆಂಥದೋ ಬಂಧವಿರಲೇಬೇಕು. ಹತ್ತೋ ಇಪ್ಪತ್ತೋ ಲೋಕಸಭಾ ಸ್ಯರು ಅವರ ಬೆಂಬಲದಿಂದ ಗಿಟ್ಟುವ ಅಂತಸ್ತು ಮತ್ತು ಕಾರಕ್ಕಿಂತಲೂ ಹೆಚ್ಚು ಲಾಭದಾಯಕವಾದ ಯಾವ ಬಂಧ' ಕಾವೇರಿ ಅನ್ಯಾಯಕ್ಕೆ ಕಾರಣವಾಗಿರಬಹುದು?

ಅದು 'ಅದಾನಿ' ಎಂಬ ಬಗ್ಗೆ ಕನ್ನಡಿಗರಿಗಿರಲಿ ಖುದ್ದು ಳುನಾಡಿಗೇ ಅನುಮಾನಗಳಿದ್ದಂತಿಲ್ಲ. ಗೌತಮ್ ಅದಾನಿ ನಿ ಮೋದಿಯ ಬೆನ್ನ ಹಿಂದಿನ ಅಸಲಿ ಗಾಡ್‌ಫಾದರ್ ತ್ತು ಸೂತ್ರಧಾರ ಕೂಡ. ಮೋದಿ ಪ್ರಧಾನಿಯಾದ ಒಂದೇ ಕ್ಕೆ ಅದಾನಿಯ ಕಾಂಚಾಣ ಸಾಮ್ರಾಜ್ಯದ ಲಾಭ ಶೇ. ರಷ್ಟು ಹೆಚ್ಚಾಯಿತು. ದೇಶದ ಉತ್ತಮ ಬಂದರುಗಳನ್ನೆಲ್ಲ ನಿ ಆವರಿಸಿಕೊಂಡ. ಒಂದರ ಮೇಲೊಂದು ಉಷ್ಣ ದ್ಯುತ್ ಸ್ಥಾವರಗಳನ್ನು ಅದಾನಿಯೇ ಹುಟ್ಟು ಹಾಕತೊಡಗಿದ. ಹಿಂದಿದ್ದ ಅಂಬಾನಿ, ಟಾಟಾ, ಬಿರ್ಲಾ, ಸಹಾರಾಯ್, ಮಿತ್ತಲ್ ಇತ್ಯಾದಿ ಕುಬೇರರಿಗೆ ಹೋಲಿಸಿದರೆ ರಾತ್ರೋರಾತ್ರಿ ದೇಶದ ಬಲಿಷ್ಠ ಹೂಡಿಕೆದಾರನಾಗಿ ರೂಪುಗೊಂಡ ಅದಾನಿ ಚಾಲ್ತಿಗೆ ಬಂದಿದ್ದೇ ಮೋದಿ ಗುಜರಾತ್‌ನ ಮುಖ್ಯಮಂತ್ರಿಯಾದ ನಂತರದಿಂದ!

ಈಗ ಕಾವೇರಿ ಅನ್ಯಾಯಕ್ಕೂ ಈ ಅದಾನಿಗೂ ಇರುವ ಬಂಧ ನೆಂಟಸ್ತಿಕೆಯ ಮರೆಯಲ್ಲಿರುವುದು ಪ್ರಧಾನಿ ಮೋದಿ ಮತ್ತು ಜಯಲಲಿತಾ ನಡುವಿನ ರಾಜಕೀಯ ಕಣ್ಣುಮುಚ್ಚಾಲೆಯೇ. ದಕ್ಷಿಣದ ಬೇರೆಲ್ಲಾ ರಾಜ್ಯಗಳಿಗಿಂತಲೂ ಅದಾನಿಗೂ ಅಚ್ಚುಮೆಚ್ಚಾಗಿರುವುದು ತಮಿಳುನಾಡೇ. ಕರ್ನಾಟಕದ ಉಡುಪಿಯಲ್ಲೊಂದು ಉಷ್ಣ ವಿದ್ಯುತ್ ಸ್ಥಾವರ ಬಿಟ್ಟರೆ ಅಂತಾ ಉದ್ದಿಮೆಗಳೇನೂ ಅದಾನಿಯಿಂದ ಕರ್ನಾಟಕಕ್ಕೆ ಬರಲಿಲ್ಲ.

ಆದರೆ ತಮಿಳುನಾಡಿನಲ್ಲಿ ಅದಾನಿಯ ಅಟ್ಟಹಾಸವೇ ರೆ ಅಬ್ಬರವೇ ಬೇರೆ. ಸೆಪ್ಟೆಂಬರ್ 20ರ ಸೋಮವಾರ ಸುಪ್ರೀಂಕೋರ್ಟ್ ದ್ವಿಪೀಠದಲ್ಲಿ ಕೂತು ಜಸ್ಟೀಸ್ ದಯ್ ಲಲಿತ್ ಕರ್ನಾಟಕದ ವಿರುದ್ಧ ಅನ್ಯಾಯದ ರ್ಪು ಬರೆಯುತ್ತಿದ್ದರೆ ಇತ್ತ ತಮಿಳುನಾಡಿನ ಮನಾಥಪುರಂನಲ್ಲಿ ಖುದ್ದು ಜಯಲಲಿತಾರೇ ತಮ್ಮ ಚೇರಿಯಿಂದಲೇ ಅದಾನಿಯ ವಿಶ್ವದ ಅತೀ ದೊಡ್ಡ ಸೋಲಾರ್ ಪವರ್ ಪ್ಲಾಂಟ್‌ನ ಉದ್ಘಾಟನೆಗೈದರು. ದಾನಿಯ ಈ ಸೋಲಾರ್ ಪವರ್ ಪ್ಲಾಟ್‌ಗೂ ವೇರಿಗೂ ಇರುವ ಸಂಬಂಧವೇ ಅದಾನಿಗೂ ಪ್ರಧಾನಿ ಮೋದಿಗೂ ಮತ್ತು ನ್ಯಾ.ಮೂ. ಉದಯ್ ಲಲಿತ್‌ಗೂ ಬಂಬುದೇ ಹಕೀಕತ್ತಿನ ಮೂಲ.

ತಮಿಳುನಾಡಿನ ಕಾವೇರಿ ಜಲಾನಯನಕ್ಕೆ ಅಂಟಿಕೊಂಡಂತಿರುವುದು ರಾಮನಾಥಪುರಂ. ಇತ್ತ ಮೆಟ್ಟೂರು ಜಲಾಶಯಕ್ಕೂ ಹತ್ತಿರ ಭವಾನಿಗೂ ಅಷ್ಟೇ ದೂರ ಎಂಬಂತಿರುವುದು ರಾಮನಾಥಪುರಂ ಜಿಲ್ಲೆಯ ಕುಮುದಿ ಎಂಬ ಊರು. ಮೊನ್ನೆ ಜಯಲಲಿತಾ ಉದ್ಘಾಟನೆಗೈದ ವಿಶ್ವದ ಅತೀದೊಡ್ಡ ಸೌರ ವಿದ್ಯುತ್ ಸ್ಥಾವರ ಕೂಡ ಕಾವೇರಿ ನೀರನ್ನೇ ಅವಲಂಬಿಸಿ ಅಸ್ತಿತ್ವಕ್ಕೆ ಬಂದ ಯೋಜನೆಯೆ. ಬರೋಬ್ಬರಿ 648 ಮೆಗಾವ್ಯಾಟ್ ಸೌರವಿದ್ಯುತ್ ಉತ್ಪಾದನೆಯ ಗುರಿಹೊತ್ತೇ 2014ರ ಸೆಪ್ಟೆಂಬರ್‌ನಲ್ಲಿ ಇಂಥಾದ್ದೊಂದು ಯೋಜನೆಗೆ ಚಾಲನೆಯಿತ್ತಿದ್ದೇ ಪ್ರಧಾನಿ ಮೋದಿ. ದೆಹಲಿಗೆ ಬಂದಿದ್ದ ಜಯಾ ಜೊತೆ ಭೇಟಿ ಏರ್ಪಡಿಸಿಕೊಂಡು ಇತ್ತ ಕಾಂಗ್ರೆಸ್ ವಿರುದ್ಧ ಮೈತ್ರಿಗೂ ಸೆಡ್ಡು ಹೊಡೆದಂತಾಯ್ತು ಅತ್ತ ತನ್ನ ಸ್ವಾಮಿ ಅದಾನಿ ಸಾಮ್ರಾಜ್ಯವನ್ನೂ ವಿಸ್ತರಿಸಿದಂತಾಯಿತು.

ಇದರ ಪ್ರತಿಫಲವೇ ತಮಿಳುನಾಡಿನಲ್ಲಿ ತಲೆ ಎತ್ತಿದ ಅದಾನಿ ಸಾಮ್ರಾಜ್ಯ. ಚೆನ್ನೈಗೆ ಹತ್ತಿರದಲ್ಲೇ ಆರು ಸಾವಿರ ಕೋಟಿಯ ಉಷ್ಣ ವಿದ್ಯುತ್ ಸ್ಥಾವರ, ಪ್ರತಿಷ್ಠಿತ ಚೆನ್ನೈ ಬಂದರಿಗೆ ಪರ್ಯಾಯವಾಗಿ ಅದಾನಿಯದ್ದೇ ಖಾಸಗಿ ಬಂದರು, ರಾಮನಾಥಪುರಂನಲ್ಲಿ ವಿಶ್ವದಲ್ಲೇ ಅತೀ ದೊಡ್ಡದೆನ್ನಲಾದ ಸೌರವಿದ್ಯುತ್ ಸ್ಥಾವರ, ಕಾರೈಕುಂಡಿ ಅರಣ್ಯಕ್ಕೆ ಅಂಟಿಕೊಂಡಂತೆ ಗಣಿಗಾರಿಕೆ ಮತ್ತು ಕೊಯಮತ್ತೂರ್, ತೂತುಕುಡಿ, ಈರೋಡುಗಳ ಅಕ್ಕಪಕ್ಕ ಇನ್ನೂ ಮೂರು ಉಷ್ಣ ವಿದ್ಯುತ್ ಸ್ಥಾವರಗಳೂ ಸೇರಿದಂತೆ ಒಟ್ಟು ಹತ್ತು ಸಾವಿರ ಕೋಟಿಯ ಅದಾನಿ ಪ್ರಾಜೆಕ್ಟುಗಳಿಗೆ ಜಯಲಲಿತಾ ವ್ಯವಹಾರ ಕುದುರಿಸಿಕೊಂಡರು.

ಇದಕ್ಕೆ ಪ್ರತಿಯಾಗಿ ಜಯಾ ವಿರುದ್ಧದ ಅಕ್ರಮ ಆಸ್ತಿ ಮೊಕದ್ದಮೆಗಳನ್ನೂ ಭ್ರಷ್ಟಾಚಾರದ ಹಗರಣಗಳನ್ನೂ ಗತಿ ಕಾಣಿಸುವುದು ಮತ್ತು ಅದಾನಿಯ ಪ್ರಾಜೆಕ್ಟುಗಳ ಕಮೀಷನ್ನೆಂದು ಇಂತಿಷ್ಟು ಕಪ್ಪಕಾಣಿಕೆಯ ಒಪ್ಪಂದವಂತೂ ಆಗಲೇಬೇಕಲ್ಲ!

ಚೆನ್ನೈ ಬಂದರಿಗೆ ಪರ್ಯಾಯವಾಗಿ ಪಕ್ಕದ ಕೂಟುಪಲ್ಲಿಯಲ್ಲಿ ಅದಾನಿ ತನ್ನದೇ ಖಾಸಗಿ ಬಂದರು ಸ್ಥಾಪಿಸಲು ಮುಂದಾಗಿದ್ದೇ ಅದರ ದುಷ್ಪರಿಣಾಮದ ಲೆಕ್ಕ ಹಾಕಿದ್ದು ಕರುಣಾನಿಧಿ. ಮುಂದೊಮ್ಮೆ ಚೆನ್ನೈ ಬಂದರು ತನ್ನ ಮಹತ್ವವನ್ನೇ ಕಳೆದುಕೊಂಡು ಪಕ್ಕದ ಅದಾನಿಯ ಖಾಸಗಿ ಬಂದರೇ ಸಿಂಗಾಪೂರ್, ಹಾಂಕಾಂಗ್, ಮಲೇಷಿಯಾ, ಇಂಡೋನೇಷಿಯಾದಂಥ ದೇಶಗಳ ಆಮದು ಮತ್ತು ರಫ್ತಿನ ಕೇಂದ್ರವಾಗಿ ರೂಪುಗೊಂಡಿತೆಂದರೆ ಅಲ್ಲಿಗೆ ಚೆನ್ನೈ ಬಂದರಿನ ಬಹುಪಾಲು ಆದಾಯ ಅದಾನಿಯ ಬೊಕ್ಕಸದ ಪಾಲಾದ ಹಾಗೆಯೆ. ಜೊತೆಗೆ ಕಳ್ಳಸಾಗಾಣಿಕೆಗೂ ಹಿಂಬಾಗಿಲ ಪರವಾನಗಿಯಿತ್ತಂತೆ. ಪ್ರಧಾನಿ ಮೋದಿ ಮತ್ತು ತಮಿಳುನಾಡು ಸಿಎಂ ಜಯಲಲಿತಾರ ರಾಜಕೀಯ ನೆಂಟಸ್ತಿಕೆಯೆಂಬುದು ಅದಾನಿಯ ಆರ್ಥಿಕ ಸಾಮ್ರಾಜ್ಯದ ರೂಪದಲ್ಲಿ ದ್ರಾವಿಡ ನಾಡಿನಲ್ಲಿ ಚಿಗುರುತ್ತಿರುವುದನ್ನು ಸೂಕ್ಷ್ಮವಾಗೇ ಗಮನಿಸಿದ ಡಿಎಂಕೆ ನಾಯಕ ಕರುಣಾನಿಧಿ ಅದಾನಿಯ ಪ್ರಾಜೆಕ್ಟುಗಳ ದೂರಗಾಮಿ ಅಪಾಯಗಳ ವಿರುದ್ಧ ಬಹಿರಂಗವಾಗೇ ಪ್ರತಿಭಟಿಸಿದರು. ಮುಂದೊಮ್ಮೆ ಚೆನ್ನೈ ಬಂದರೆಂಬುದು ಅದಾನಿಯ ಖಾಸಗಿ ಬಂದರಿನ ಮುಂದೆ ತನ್ನ ಅಸ್ತಿತ್ವವನ್ನೇ ಕಳೆದುಕೊಳ್ಳಲಿದೆ ಎಂದೂ ಕಿಡಿ ಕಾರಿದರು.

2015 ರಲ್ಲಿ ತಮಿಳುನಾಡಿನ ವಿದ್ಯುತ್ ಪ್ರಸಾರ ನಿಗಮಕ್ಕೂ ಅದಾನಿ ಪವರ್ ಲಿಮಿಟೆಡ್ ಅಂದರೆ ಎಪಿಎಲ್ ಕಂಪೆನಿಗೂ ವಿದ್ಯುತ್ ಖರೀದಿಯ ಒಪ್ಪಂದಗಳಾದವು. ಖುದ್ದು ಜಯಲಲಿತಾನೇ ಅದಾನಿಯ ಜೊತೆ ಒಪ್ಪಂದಕ್ಕೆ ಸಹಿ ಹಾಕಿದರು. ಚೆನ್ನೈನ ಉಷ್ಣವಿದ್ಯುತ್ ಸ್ಥಾವರದ ಹೊರತಾಗಿಯೂ ಸಿಎಂ ಜಯಲಲಿತಾ ಅತೀವ ಆಸಕ್ತಿ ವಹಿಸಿದ್ದು ರಾಮನಾಥಪುರಂ ಜಿಲ್ಲೆಯ ಕುಮುದಿ ಬಳಿಯ ಸೌರವಿದ್ಯುತ್ ಸ್ಥಾವರಕ್ಕೆ. ವಿಶ್ವದ ಅತಿದೊಡ್ಡ ಒಂದೇ ಪ್ರದೇಶಕ್ಕೆ ಸೀಮಿತಗೊಂಡು ಬರೋಬ್ಬರಿ 648 ಮೆಗಾವ್ಯಾಟ್ ವಿದ್ಯುತ್ ಉತ್ಪಾದನೆಯ ಕುಮುದಿ ಸೌರವಿದ್ಯುತ್ ಕೇಂದ್ರಕ್ಕೆಂದೇ ಅದಾನಿ ಪ್ರತ್ಯೇಕ ಕಂಪೆನಿಯೊಂದನ್ನು ಹುಟ್ಟುಹಾಕಿದ್ದ. ಅದಕ್ಕೆ ಅದಾನಿ ಗ್ರೀನ್ ಎನರ್ಜಿ (ತಮಿಳುನಾಡು) ಲಿಮಿಟೆಡ್ ಎಂಬ ಹೆಸರನ್ನೂ ಕೊಟ್ಟ.

ಕುಮುದಿ ಸೌರ ವಿದ್ಯುತ್ ಸ್ಥಾವರವೆಂದರೆ ಅದು ಐದು ಸಾವಿರ ಎಕರೆಗಳಷ್ಟು ವಿಸ್ತಾರದ ಬೃಹತ್ ಸೌರ ಫಲಕಗಳ ಸಾಗರ. ಇದಕ್ಕೆಂದೇ ಐದು ಸಾವಿರ ಎಕರೆಗಳಷ್ಟು ಕೃಷಿ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳುವಂತೆ ಜಯಲಲಿತಾ ಆದೇಶಿಸಿದರು. ಕುಮುದಿ ತಾಲ್ಲೂಕಿನ ಸೆಂಗಪಾಡಿ, ಪುದುಕೋಟೈ, ಎಂ. ಕರೀಸಾಲ್‌ಕುಲಂ, ಮುದಲ್‌ನಾಡು ಮುಂತಾದ ಗ್ರಾಮಗಳು ಸೇರಿದಂತೆ ಅದರ ಸುತ್ತಮುತ್ತಲ ಸರ್ಕಾರಿ ಭೂಮಿ, ಗೋಮಾಳ, ಅರಣ್ಯ ಭೂಮಿಯೆಲ್ಲ ಅದಾನಿಗೆ ಬಿಟ್ಟಿಯಾಗಿ ಬಂದಂತಾಯ್ತು. ರಾಮನಾಥಪುರಂ ಜಿಲ್ಲಾಧಿಕಾರಿಯೇ ನಿಂತು ಬಡ ರೈತರನ್ನು ಬಡಿದೋಡಿಸಿದರು.

ಹೆಚ್ಚೂಕಮ್ಮಿ ನಾಲ್ಕೂವರೆ ಸಾವಿರ ಕೋಟಿ ರೂಪಾಯಿಗಳ ಬಂಡವಾಳದ ಕುಮುದಿ ಸೌರವಿದ್ಯುತ್ ಸ್ಥಾವರಕ್ಕೆಂದೇ ವಿಶ್ವದ ವಿವಿಧ ಭಾಗಗಳಿಂದ ಅತ್ಯಾಧುನಿಕ ಯಂತ್ರೋಪಕರಣಗಳನ್ನು ತರಿಸಲಾಯ್ತು. ಎಂಟೂವರೆ ಸಾವಿರ ಮಂದಿಗೆ ಉದ್ಯೋಗ ಕಲ್ಪಿಸುವ ಭರವಸೆಯನ್ನೂ ಅದಾನಿ ಕಂಪೆನಿ ಕೊಟ್ಟಿತ್ತು. ಸೌರಫಲಕಗಳನ್ನು ಸ್ಥಾಪಿಸಲೆಂದೇ 3.8 ಲಕ್ಷದಷ್ಟು ಫೌಂಡೇಶನ್ನುಗಳನ್ನು ಕಟ್ಟಲಾಯಿತು. ಇಷ್ಟೊಂದು ಭಾರೀ ಸಂಖ್ಯೆಯ ಕಟ್ಟೆಗಳನ್ನು ಕಟ್ಟಿ ಅವುಗಳಿಗೆ 27 ಲಕ್ಷದಷ್ಟು ಸೌರಫಲಕಗಳನ್ನು ಜೋಡಿಸಲಾಯಿತು. ಈ ಪಾಟಿ ಸಂಖ್ಯೆಯ ಸೌರಫಲಕಗಳಲ್ಲದೆ ಅವುಗಳು ಉತ್ಪತ್ತಿ ಮಾಡುವ ವಿದ್ಯುತ್‌ನ ದಾಸ್ತಾನಿಗೆಂದೇ 27 ಸಾವಿರ ಕಟ್ಟಡಗಳು, 576 ಇನ್‌ವರ್ಟರ್‌ಗಳು, 154 ಟ್ರಾನ್ಸ್‌ಫಾರ್ಮರ್‌ಗಳು.



ಮೊನ್ನೆ ಸೆಪ್ಟೆಂಬರ್ 21ರಂದು ರಾಮನಾಥಪುರಂನ ಅದಾನಿಯ ಸ್ಥಾವರವನ್ನು ವೀಡಿಯೋ ಮೂಲಕ ತನ್ನ ಕಚೇರಿಯಿಂದಲೇ ಉದ್ಘಾಟನೆ ಮಾಡಿದ ಜಯಲಲಿತಾ ಬಾಯಿಂದ ಮೊದಲು ಬಂದ ಮಾತೇ ಪ್ರಧಾನಿ ಮೋದಿ. 'ಪ್ರಧಾನಿ ಮೋದಿಯವರ ಕಾಣಿಕೆಯ ಫಲವಾಗಿ ತಮಿಳುನಾಡಿಗೆ ಇಂಥಾದ್ದೊಂದು ಸೌರವಿದ್ಯುತ್ ಸ್ಥಾವರ ಬಂದಿದೆ. ಅದಾನಿಯಂಥ ಸಮರ್ಥ ಹೂಡಿಕೆದಾರರನ್ನು ತಮಿಳುನಾಡಿಗೆ ಕೊಟ್ಟ ಪ್ರಧಾನಿ ಮೋದಿಯವರಿಗೆ ನಾನು ತಮಿಳುನಾಡಿನ ಜನತೆಯ ಪರವಾಗಿ ಕೃತಜ್ಞತೆ ಸಲ್ಲಿಸುತ್ತಿದ್ದೇನೆ...!'


ಅತ್ತ ಸುಪ್ರೀಂಕೋರ್ಟ್ ಕರ್ನಾಟಕದ ಮೇಲೆ ಚಪ್ಪಡಿ ಎಳೆದು ತಮಿಳುನಾಡಿನ ಪರ ಅನ್ಯಾಯದ ತೀರ್ಪು ನೀಡಿದ್ದರೆ ಇತ್ತ ಜಯಲಲಿತಾ ಮೋದಿಗೆ ಕೃತಜ್ಞತೆ ಸಲ್ಲಿಸುತ್ತಿದ್ದರು. ಹಾಗೇ ಕೃತಜ್ಞತೆ ಸಲ್ಲಿಸಿದ್ದು ತಮಿಳುನಾಡಿನ ಜನತೆಯ ಪರವಾಗಿ ಎಂದು ಜಯಲಲಿತಾ ಆದೆಷ್ಟೇ ವಿಷಯ ಮರೆಮಾಚಲೆತ್ನಿಸಿದರೂ ಹಕೀಕತ್ತು ಬೇರೆಯದೇ ಇತ್ತು. ಕರ್ನಾಟಕವನ್ನು ವಂಚಿಸಿ ತಮಿಳುನಾಡಿಗೆ ಹರಿಯುವ ಕಾವೇರಿಯ ಪ್ರತಿ ಕ್ಯೂಸೆಕ್ಸ್ ಹೆಚ್ಚುವರಿ ನೀರೂ ಅಲ್ಲಿನ ರೈತರಿಗೆ ಹರಿಸಿದರೆಷ್ಟು ಬಿಟ್ಟರೆಷ್ಟು? ಆದರೆ ಅದಾನಿಯ ಸೌರವಿದ್ಯುತ್ ಸ್ಥಾವರಕ್ಕಂತೂ ಅನಿವಾರ್ಯವಾಗಿತ್ತು. ಕುಮುದಿ ಸೌರವಿದ್ಯುತ್ ಸ್ಥಾವರದ 25 ಲಕ್ಷದಷ್ಟಿರುವ ಸೌರವಿದ್ಯುತ್ ಫಲಕಗಳನ್ನು ತೊಳೆಯುವುದೆಂದರೆ ಸಣ್ಣ ಮಾತೆ?

ಪ್ರತಿ ಸೌರಫಲಕದ ಮೇಲೂ ದಿನಕ್ಕಿಷ್ಟೆಂಬಂತೆ ಧೂಳು ಶೇಖರಣೆಯಾಗೇ ತೀರುತ್ತದೆ. ಒಮ್ಮೆ ಫಲಕದ ಮೇಲೆ ಧೂಳು ಕೂತಿತೆಂದರೆ ಬಿದ್ದ ಸೂರ್ಯರಶ್ಮಿ ಮಂಕಾಗಿ ಉತ್ಪಾದನೆಯಾಗುವ ವಿದ್ಯುತ್‌ನ ಶೇ.5ರಷ್ಟು ಕುಂಠಿತಗೊಳ್ಳುತ್ತದೆ. ಐದು ಪರ್ಸೆಂಟ್ ವಿದ್ಯುತ್ ನಷ್ಟವೆಂದರೆ ಸಣ್ಣ ಮಾತೆ?

ಪ್ರತಿನಿತ್ಯ ಸೋಲಾರ್ ಪ್ಯಾನಲ್‌ಗಳನ್ನು ತೊಳೆಯಲೇಬೇಕೆಂದರೆ ಅದಕ್ಕೆ ಗ್ಯಾಲನ್ನುಗಟ್ಟಲೇ ನೀರು ಬೇಕೇಬೇಕು. ಮೆಟ್ಟೂರು ಜಲಾಶಯಕ್ಕೂ ರಾಮನಾಥಪುರದ ಅದಾನಿಯ ಪ್ಲಾಂಟ್‌ಗೂ ನೂರಾರು ಮೈಲಿಗಳ ದೂರವಾದರೂ 2010ರಿಂದಲೇ ಪ್ರತಿನಿತ್ಯ 100 ಎಂಎಲ್‌ಡಿ ಕಾವೇರಿ ನೀರನ್ನು ರಾಮನಾಥಪುರಕ್ಕೆ ಹರಿಸುವ ಯೋಜನೆಯನ್ನು ತಮಿಳುನಾಡು ಸರ್ಕಾರ ಜಾರಿಗೆ ತಂದಿದೆ. ರಾಮನಾಥಪುರ ಕಾವೇರಿ ಪ್ರದೇಶದ ವ್ಯಾಪ್ತಿಗೆ ಬರುವುದಿಲ್ಲವಾದರೂ ಕಾವೇರಿ ನ್ಯಾಯಾಧಿಕರಣದ ಕಣ್ಣಿಗೆ ಮಣ್ಣೆರಚಿ ತಮಿಳುನಾಡು ಈ ಯೋಜನೆ ರೂಪಿಸಿಕೊಂಡಿದೆ. ಯಾರಿಗಲ್ಲದಿದ್ದರೂ ಅದಾನಿಯ ಪ್ಲಾಂಟ್‌ಗಾದರೂ ಕಾವೇರಿ ನೀರು ಬೇಕಲ್ಲ; ಮೋದಿಯ ಆಜ್ಞಾಪಾಲಕರಾದ ಉದಯ್‌ಲಲಿತ್ ಅದಾನಿಗಾಗಿಯಾದರೂ, ಅದಾನಿಯ ದಕ್ಷಿಣದ ಕುಲಿಗೆ ಸಾಮ್ರಾಜ್ಯವಾದ ತಮಿಳುನಾಡಿನ ಹಿತಕ್ಕಾದರೂ ಅನ್ಯಾಯದ ತೀರ್ಪು ನೀಡಲೇಬೇಕಲ್ಲವೇ?

■ ರಾ. ಸೋಮನಾಥ್

ಗಾನಕೋಗಿಲೆ ದನಿ ನಿಂತಿಲ್ಲ



ಪ್ರಖ್ಯಾತ ಗಾಯಕಿ ಎಸ್. ಜಾನಕಿ "ಇನ್ನು ಮುಂದೆ ನಾನು ಹಾಡಲ್ಲ, ವಿಶ್ರಾಂತಿ ಬೇಕು" ಎಂದು ಘೋಷಿಸಿದ್ದಾರೆ. ನಿಜಕ್ಕೂ ಅದು ವಿಶ್ರಾಂತಿ ಅಲ್ಲ ನಿವೃತ್ತಿ. ಬಹು ಭಾಷಾ ಗಾಯಕಿಯಾದ ಜಾನಕಿ ಇನ್ನು ಹಾಡಬೇಕಾದ ಹಾಡುಗಳೇ ಇಲ್ಲ ಅನ್ನಿಸುತ್ತದೆ. ಈ ಅಭಿಜಾತ ಕಲಾವಿದೆ ಕನ್ನಡದಲ್ಲಿ ಹೆಚ್ಚು ಹಾಡುಗಳನ್ನು ಹಾಡಿದ್ದು ನಮ್ಮ ಸೌಭಾಗ್ಯ. ನಮ್ಮ ಕನ್ನಡದ ಶ್ರೇಷ್ಠ ಕವಿಗಳ ಹಾಡುಗಳನ್ನು ಜಾನಕಿ ಹಾಡಿದ್ದಾರೆ. ಅವುಗಳನ್ನ ಕೇಳಿದರೆ, ಕಾಲಾತೀತವಾಗುಳಿಯುವ ಶಕ್ತಿ ಪಡೆದಿವೆ. ಅಂದು ಆಕಾಶವಾಣಿಯಿಂದ ಚಿತ್ರಗೀತೆ ಕೇಳುತ್ತಿದ್ದ ಕಾಲದಲ್ಲಿ "ಈಗ ಎಸ್. ಜಾನಕಿ ಹಾಡಿರುವ ಗೀತೆ. ಚಿತ್ರ ಗೌರಿ" ಎಂದಾಗ ಆ ದನಿಯ ತಾರುಣ್ಯದ ತಾಜಾತನಕ್ಕೆ ಮತ್ತು ಮಧುರತೆಗೆ ಮನಸೋತಿದ್ದೆ. ಎಸ್. ಜಾನಕಿ ಎಂದರೆ ಲಂಗ ದಾವಣಿಯ ಎರಡು ಜಡೆ ಹುಡುಗಿ, ದನಿಯೇ ಹೀಗಿರಬೇಕಾದರೆ ಆಕೆ ಇನ್ನೆಂತಹ ರೂಪವತಿ ಇರಬಹುದು ಅನ್ನಿಸಿತ್ತು. ಆದರೆ ಜಾನಕಿಯವರನ್ನು ನೋಡಿದಾಗ ಈ ಆಕೃತಿಯಲ್ಲಿ ಅಂತಹ ದನಿಯೆ ಅನ್ನಿಸಿತು.


ಆಗ ಡಾ. ರಾಜ್‌ಕುಮಾರ್ ಖ್ಯಾತಿಯ ಉತ್ತುಂಗದಲ್ಲಿದ್ದರು. ಗಾಯನ, ಅಭಿನಯ ಮತ್ತು ಶ್ರೇಷ್ಠ ನಡವಳಿಕೆಯಿಂದಾಗಿ ಕನ್ನಡಿಗರ ಮನ ಸೂರೆಗೊಂಡು ಕನ್ನಡದ ಸಂಸ್ಕೃತಿಯ ಕಿರೀಟದಂತಾಗಿದ್ದರು. ಆಗ ಅವರಿಗೊಂದು ಸನ್ಮಾನ ಸಮಾರಂಭವನ್ನು ಕಂಠೀರವ ಸ್ಟೇಡಿಯಂನಲ್ಲಿ ಆಯೋಜಿಸಿದ್ದರು. ಸನ್ಮಾನ, ಭಾಷಣವೆಲ್ಲಾ ಮುಗಿದನಂತರ ಜನ ಹೊರಡುವ ತವಕದಲ್ಲಿ ನಿಂತ ಹೆಜ್ಜೆ ಕಿತ್ತರು. ಆಗ ವಿಜಯಭಾಸ್ಕರ್ ಸಂಗೀತದಲ್ಲಿ ಎಸ್. ಜಾನಕಿಯವರು 'ಗೆಜ್ಜೆಪೂಜೆ'ಯ "ಗಗನವು ಎಲ್ಲೋ ಭೂಮಿಯು ಎಲ್ಲೋ" ಎನ್ನುವ ಹಾಡಿನ ಆಲಾಪನ ತೆಗೆದು ಆಹಾಹಹಹಾ ಎಂದರು. ಇಡೀ ಸ್ಟೇಡಿಯಂನ ಜನಸ್ತೋಮ ಗರ ಹೊಡೆದಂತೆ ಕದಲದೆ ನಿಂತುಬಿಟ್ಟಿತು. ಅಂದಿನ ರೋಮಾಂಚನದ ಕ್ಷಣವನ್ನು ಅನುಭವಿಸಿದವರಿಗೇ ಗೊತ್ತು. ಮನೆ ಸೇರುವ ಗಡಿಬಿಡಿಯಲ್ಲಿದ್ದವರು ಗಾಯಕಿಯ ಗಾನಮಾಧುರ್ಯಕ್ಕೆ ಮನಸೋತು ನಿಂತಿದ್ದರು. ಅದೇನು ಹೊಸದಲ್ಲ.

ಜಾನಕಿ ಕನ್ನಡಿಗರ ಮನಸೂರೆಗೊಂಡು ಮೂರು ದಶಕಗಳೇ ಕಳೆದಿದ್ದವು. 1963 ರಲ್ಲಿ 'ಕುಲವಧು' ಚಿತ್ರಕ್ಕೆ ಹಾಡಿದ ಬೇಂದ್ರೆ ಕವನ "ಯುಗ ಯುಗಾದಿ ಕಳೆದರು, ಯುಗಾದಿ ಮರಳಿ ಬರುತಿದೆ" ಎಂಬ ಗೀತೆ ಪ್ರತಿವರ್ಷ ಮೊಳಗುತ್ತಿದೆ. ಅದರ ಕಡೆಯ ಸಾಲು "ಒಂದೇ ಒಂದು ಜನ್ಮದಲ್ಲಿ ಒಂದೇ ಬಾಲ್ಯ ಒಂದೇ ಹರೆಯ ನಮಗದಷ್ಟೆ ಏತಕೆ?" ಎಂದು ಕವಿ ನಿಸರ್ಗಕ್ಕೆ ಕೇಳಿದ ಮಾತು ತರುಣಿಯ ದನಿಯಲ್ಲಿ ನಮ್ಮ ಮನಸಿನಾಳದಲ್ಲಿ ನಿಂತುಬಿಟ್ಟ ಸಾಲಾಗಿದೆ. ಇನ್ನ ಅದೇ ಬೇಂದ್ರೆ ಕವನ "ಮೂಡಲ ಮನೆಯ ಮುತ್ತಿನ ನೀರಿನ" ಎಂಬ 'ಬೆಳ್ಳಿಮೋಡ'ದ ಹಾಡು ಮೂಡಿಸುವ ಬೆಳಗು ನಿಜಕ್ಕೂ ದೃಶ್ಯ ಕಾವ್ಯ.

ಮಲೆನಾಡಿನ ಬೆಳಗನ್ನು ಬೇಂದ್ರೆ ಕವನ ಮತ್ತು ಜಾನಕಿಯ ದನಿಯಲ್ಲಿ ಅಜರಾಮರಗೊಳಿಸಿರುವ ಪುಟ್ಟಣ್ಣ ತಮ್ಮ ಬಹುತೇಕ ಚಿತ್ರಗಳಲ್ಲಿ ಜಾನಕಿಯನ್ನು ಶಾಶ್ವತವಾಗಿ ಕನ್ನಡದ ಗಾಯಕಿಯನ್ನಾಗಿಸಿದ್ದಾರೆ. ಅವರ 'ಉಪಾಸನೆ' ಚಿತ್ರದಲ್ಲಿ "ಭಾರತ ಭೂಷಿರ ಮಂದಿರ ಸುಂದರಿ" ಮತ್ತು 'ಎಡಕಲ್ಲು ಗುಡ್ಡದ ಮೇಲೆ' ಚಿತ್ರದಲ್ಲಿನ "ನಿಲ್ಲು ನಿಲ್ಲೇ ಪತಂಗ" ಹಾಡುಗಳು ಶ್ರೇಷ್ಠವಾದ ಕಾವ್ಯ ಮತ್ತು ಸಂಗೀತದಿಂದ ಕೂಡಿವೆ.

ಜಾನಕಿಯವರು ದುಃಖದ ಹಾಡಿನಲ್ಲಿ ಮೂಡಿಸುವ ದನಿಯ ಆರ್ದ್ರತೆ ಯಾವ ಗಾಯಕಿಗೂ ಸಾಧ್ಯವಿಲ್ಲವೇನೋ. ನೀವು ಗಮನಿಸುವುದಾದರೆ 'ಎರಡು ಕನಸು' ಚಿತ್ರದ "ಇಂದು ಎನಗೆ ಗೋವಿಂದ" ಮತ್ತು 'ಎಡಕಲ್ಲಿನ' "ನಿಲ್ಲು ನಿಲ್ಲೆ ಪತಂಗ" ಮತ್ತು 'ಅಂತ' ಚಿತ್ರದ "ಪ್ರೇಮವಿದೆ", 'ನಾಂದಿ' ಚಿತ್ರದ "ಗಾಳಿಗೋಪುರ ನಿನ್ನಾಶಾ ತೀರ" ಕೇಳಬಹುದು.

ಕುವೆಂಪುರವರ ಶ್ರೇಷ್ಠ ಗೀತೆಗಳಲ್ಲಿ ಬಹುಪಾಲನ್ನು ಜಾನಕಿಯವರೇ ಹಾಡಿರುವುದೊಂದು ವಿಶೇಷ. ಅವರ "ಯಾವ ಜನ್ಮದ ಮೈತ್ರಿ", 'ಮಿಸ್ ಲೀಲಾವತಿ'ಯ "ದೋಣಿ ಸಾಗಲಿ ಮುಂದೆ ಹೋಗಲಿ", 'ಹೊಸ ಬೆಳಕು' ಚಿತ್ರದ "ತೆರೆದಿದೆ ಮನ" ಹಾಗು 1965ರಲ್ಲಿ ಹಾಡಿರುವ 'ಮಾವನ ಮಗಳು' ಚಿತ್ರದ "ನಾನೇ ವೀಣೆ ನೀನೇ ತಂತಿ ಅವನೇ ವೈಣಿಕ" ಎಂಬ ಹಾಡು ಯಾವತ್ತಿಗೂ ಮಧುರ ಗೀತೆಗಳು



'ಮಾವನ ಮಗಳು' ಚಿತ್ರದಲ್ಲಿ ಜಯಲಲಿತ ನಿಜಕ್ಕೂ ಮೈಸೂರು ಅರಮನೆಯ ವೀಣೆಯಂತೆಯೇ ಕಾಣುತ್ತಾಳೆ. 'ಸಂಧ್ಯಾ ರಾಗ'ದಲ್ಲಿ ಜಿ.ವಿ. ಅಯ್ಯರ್ ಬರೆದಿರುವ "ನಂಬಿದೆ ನಿನ್ನ ನಾದ ದೇವತೆ" ಎಂಬ ಹಾಡಿನಲ್ಲಂತೂ ತುಂಬಿದ ಭಾರತಿ ಮತ್ತು ಜಾನಕಿ ದನಿ ಮೇಳೈಸುತ್ತಿದೆ. ಒಂದೇ ಹಾಡನ್ನು ಮೂರು ಮಹಾನ್ ಗಾಯಕರಾದ ಬಾಲಮುರಳಿ, ಭೀಮಸೇನ್ ಜೋಶಿ, ಜಾನಕಿ ಹಾಡಿರುವುದು ಐತಿಹಾಸಿಕ ಘಟನೆ. ಇದರಲ್ಲಿ ಜಾನಕಿ ದನಿ ಸಿತಾರ್‌ನಷ್ಟು ಮಧುರವಾಗಿದೆ. ನನಗೇಕೊ ಸಿತಾರ್ ಹೆಣ್ಣಿನಂತೆ, ಸರೋದ್ ಗಂಡಿನಂತೆ ಕಾಣುತ್ತದೆ. ಸರೋಧಿನಲ್ಲಿ ಪ್ರಣಯ ಗಾರ್ದಬನ ದನಿಯನ್ನು ಆಲಿಸಿದ್ದೇನೆ. ಆದ್ದರಿಂದ ಅದು ಗಂಡು.

ಎಸ್. ಜಾನಕಿಯವರಿಂದ ಶ್ರೇಷ್ಠ ಹಾಡುಗಳು ಬಂದಿರುವುದು ಅರವತ್ತು ಎಪ್ಪತ್ತರ ದಶಕದಲ್ಲೇ ಅನ್ನಿಸುತ್ತದೆ. ಆಗ ಕನ್ನಡದ ಶ್ರೇಷ್ಠ ಕವಿಗಳ ಕವನಗಳನ್ನು ಹಾ ಬಳಸಿಕೊಳ್ಳುತ್ತಿದ್ದರು. ಆದ್ದರಿಂದ ಸಿನಿಮಾ ರಚನೆಕಾರರೂ ಕೂಡ ಕವಿಗಳಿಗೆ ಸಮನಾಗಿಯೇ ರಚನೆ ಮಾಡುತ್ತಿದ್ದರು. ಆ ಪೈಕಿ ಹುಣಸೂರು ಕೃಷ್ಣಮ ಕುರಾಸಿ, ಆರ್.ಎನ್.ಜಯಗೋಪಾಲ್, ಕಣಗಾಲ್ ಪ್ರಭ ಶಾಸ್ತ್ರಿ ಜಿ.ವಿ. ಅಯ್ಯರ್, ಚಿ. ಉದಯ್ ಶಂಕರ್ ಕವಿಗಳಿಗೆ ಸಮನಾಗಿಯೇ ಬರೆಯುತ್ತಿದ್ದರು. ಆ ಹಾಡುಗಳಿಗೂ ಜಾನಕಿ ದನಿ ನೀಡಿದ್ದರಿಂದ ಶಾಶ್ವತ ಹಾಡುಗಳನ್ನು ಹಾಡಿದ್ದಾರೆ.

ಯಾವ ಗಾಯಕಿಯೂ ಹಾಡಲಾಗದ ಹಾಡು ಹಾಡಿದ್ದಾರೆ. ಆ ಪೈಕಿ ಹೇಮಾವತಿಯ "ಶಿವ ಶಿವ ... ಶಾಶ್ವತ ಸುಖವು" ಹಾಡು ಮತ್ತು ತಮಿಳಿನ ಚಿತ್ರವೊಂ ಅವರು ನಾದಸ್ವರದೊಂದಿಗೆ ಹಾಡಿರುವ ಹಾಡು ವಿಸ್ಮಯಕರವಾಗಿದೆ.



ಆ ಹಾಡಿನಲ್ಲಿ ನಾದಸ್ವರಕ್ಕೆ ಸಮನಾಗಿ ಏರಿ ಸರಿಗಮದಲ್ಲಿನ ಜಾನಕಿ ದನಿ ನಾದಸ್ವರವನ್ನು ಮೀರಿಸಿಬಿ ಒಂದುಕ್ಷಣ ಇದು ಸಾಧ್ಯವೆ ಎಂಬ ವಿಸ್ಮಯವಾಗು ಬೇಂದ್ರೆ ಕಾವ್ಯದಲ್ಲಿ ಕನ್ನಡ ಪದ ಕುಣಿದಂತೆ ಜಾನಕಿಯ ನಾಲಿಗೆಯಲ್ಲಿ ಕನ್ನಡ ತನ್ನ ಸೊಗಡಿನೊಂದಿಗೆ ಕ ಹಲವು ಹಾಡುಗಳಿವೆ. ಅದರಲ್ಲಿ "ಗಿಲಗಿಲಗಿಲ ತಾಳಗೆಜ್ಜೆ ಝುಲ್ಲಕ್ಕು" ಮತ್ತು "ಇವ ಯಾವ್ರವ್ವ", '... ರಾಜ್‌ಕುಮಾರ್' ಚಿತ್ರದ "ರಂಗ ನಿನ್ ಚಂತೆಲಿ ಬಡ ಕೇಳಬಹುದು.

ಪಿ. ಸುಶೀಲ ತಮಿಳಿನಲ್ಲಿ ಆವರಿಸಿಕೊಂಡಂತೆ ಕನ್ನಡದ ಮನೆ ಮಾತಾಗಿದ್ದರು. ತನ್ನ ಹಾಡಿನ ಮ ಜೊತೆಗೆ ಗೌರವ ಪ್ರಶಸ್ತಿಗಳನ್ನು ನಿರೀಕ್ಷಿಸಿದ ಜಾನಕಿಯ ನಾವು ಗೌರವ ಕೊಡದ ಬಗ್ಗೆ ಬೇಸರವಿತ್ತು, ಕನ್ನಡಿ ಕನ್ನಡಿಗರನ್ನೇ ಗೌರವಿಸದಿರುವಾಗ ಇನ್ನೂ ಅನ್ಯ ಭ ಪ್ರತಿಭಾವಂತರನ್ನು ಗುರುತಿಸುವುದು ನಿಜವೆ.

ಡಾ. ಅಶೋಕ್ ಪೈ ಎಂಬ ಅದ್ಭುತ ಚೈತನ

ಕರ್ನಾಟಕದ ಖ್ಯಾತ ಮನೋವೈದ್ಯರಾದ ಡಾ. ಅಶೋಕ್ ಪೈ ದೂರದ ಸ್ಕಾಟ್ಲೆಂಡಿನಲ್ಲಿ ಹೃದಯಾಘಾತದಿಂದ ನಿಧನರಾಗಿದ್ದಾರೆ. ಇವರ ತಿರುಗಾಟ ನೋಡಿದವರಿಗೆ ಇದು ಸಹಜವಾಗಿ ಕಾಣುತ್ತದೆ. ಸದಾ ರೆಕ್ಕೆ ಕಟ್ಟಿಕೊಂಡವರಂತೆ ಹಾರುತ್ತಿದ್ದ ಅಶೋಕ್ ಪೈ ಕರ್ನಾಟಕದಲ್ಲಿದ್ದಾಗ ಸರ್ಕಾರಿ ಬಸ್ಸಿನಲ್ಲಿ ಪ್ರಯಾಣಿಸುವುದಕ್ಕೂ ರೆಡಿಯಿದ್ದರು.

ಅಶೋಕ್ ಪೈಯವರು ಅಗಾಧ ಜನಪ್ರಿಯತೆ ಗಳಿಸಿದ್ದು ತರಂಗ ಎಂಬ ವಾರಪತ್ರಿಕೆಯಿಂದ. ತಮ್ಮ ಮಾನಸ ನರ್ಸಿಂಗ್ ಹೋಮಿಗೆ ಕನ್ನಡದ ಕೆಲ ವಾರಪತ್ರಿಕೆಗಳ ಕತೆಗಾರರನ್ನೆಲ್ಲಾ ಕರೆಸಿ, ಅವರಿಗೆ ಮಾನಸಿಕ ರೋಗಿಗಳನ್ನು ತೋರಿಸಿ, "ಇವರ ಮೇಲೆಲ್ಲಾ ಕತೆ ಬರೆಯಿರಿ" ಎಂದು ವಿನಂತಿಸಿಕೊಂಡರು. ಇದೊಂದು ಅಮಾನುಷವಾದ ನಡವಳಿಕೆಯಾದ್ದರಿಂದ ಪತ್ರಿಕೆ ಅಶೋಕ್ ಪೈಯವರನ್ನು ಟೀಕಿಸಿ ಬರೆದಿತ್ತು, ಆಗ ಪತ್ರಿಕೆಯ ಮೇಲೆ ಕೇಸು ದಾಖಲಿಸಲು ಓಡಾಡಿದ್ದ ಪೈಯವರು ಗಿರೀಶ್ ಕಾರ್ನಾಡ್ ಸಲಹೆಯಂತೆ ಸುಮ್ಮನಾಗಿದ್ದರು.

ಪೈಯವರು ಪ್ರಖ್ಯಾತ ಮನೋವೈದ್ಯರು. ಇವರ ಖ್ಯಾತಿ ಹೇಗೆ ಹಬ್ಬಿತ್ತೆಂದರೆ ದೂರದ ಊರುಗಳಿಂದ ಹುಚ್ಚರಲ್ಲದ, ಚರ್ಮರೋಗ, ಕೀಲುನೋವು ಮತ್ತು ಹೊಟ್ಟೆನೋವಿನ ರೋಗಿಗಳೂ ಅಶೋಕ್ ಪೈ ಹುಡುಕುತ್ತ ಬರತೊಡಗಿದ್ದರು. ಅವರ ಭಾಗಕ್ಕೆ ಪೈ ಸರ್ವವೈದ್ಯ ರತ್ನದಂತೆ ಕಾಣಿಸಿದ್ದರು.

ಶಿವಮೊಗ್ಗದ ಮೆಗ್ಗಾನ್ ಆಸ್ಪತ್ರೆಯಲ್ಲಿ



ಮನೋವೈದ್ಯರಾಗಿದ್ದ ಅವಧಿಯಲ್ಲಿ ಮಾನಸ ನರ್ಸಿಂಗ್ ಹೋಂ ತೆರೆದ ಪೈ ಪ್ರಾಮಾಣಿಕವಾಗಿಯೇ ತಮ್ಮ ವೃತ್ತಿ ಮಾಡುತ್ತಿರುವಾಗ ಒಳ್ಳೆಯ ವೈದ್ಯರಾಗಿಯೇ ಇದ್ದರು. ಆದರೆ ಅದ್ಯಾವಾಗ ಖ್ಯಾತಿ ಮತ್ತು ಹಣದ ಬೆನ್ನು ಹತ್ತಿದರೋ ಏನೋ, ದಶದಿಕ್ಕುಗಳಿಗೂ ಕೈಚಾಚತೊಡಗಿದರು. ಕಲೆ, ಸಾಹಿತ್ಯ, ಸಂಗೀತ, ಸಿನಿಮಾ ಎಲ್ಲೆಂದರಲ್ಲಿ ಕಾಣಿಸಿಕೊಳ್ಳುವುದಲ್ಲದೆ, ಅಂತರರಾಷ್ಟ್ರೀಯ ಸೆಮಿನಾರುಗಳಲ್ಲಿ ಭಾಗವಹಿಸುತ್ತ ಖ್ಯಾತಿಯ ಬೆನ್ನು ಹತ್ತಿದರು.

ನರ್ಸಿಂಗ್ ಹೋಂಗೆ ಬರುವ ಮನೋರೋಗದವರ ಸಂಖ್ಯೆಯೂ ದಿನೇದಿನೇ ಅಧಿಕವಾಗುತ್ತ ಹೋದಂತೆ; ರೋಗಿಗಳ ಸುಲಿಗೆಯಿಂದ ಧನವೂ ರಾಶಿಯಾಗ ತೊಡಗಿತು. ಅದರ ಫಲವಾಗಿ ಪೈ ನರ್ಸಿಂಗ್ ಹೋಮಿದ್ದ ಇಡೀ ಕ್ರಾಸಿನ ಕಟ್ಟಡಗಳನ್ನೆಲ್ಲಾ ಕೊಂಡು, ಐದಾರು ಸಂಸ್ಥೆಗಳನ್ನು ಪ್ರಾರಂಭಿಸಿದರೇ ಹೊರತು ಜೈಲಿನ ಸೆಲ್‌ಗಳಂತಿದ್ದ ಮನೋರೋಗಿಗಳ ಕೊಠಡಿಗಳನ್ನು ಸುಧಾರಿಸಿ ಗಾಳಿ ಬೆಳಕು ದೊರಕುವಂತಹ ವ್ಯವಸ್ಥೆ ಮಾಡಲಿಲ್ಲ. ಬಹುಶಃ ಅಂತಹ ವ್ಯವಸ್ಥೆಯೇ ಮಾನಸಿಕ ರೋಗಿಗಳ ಗಮನಕ್ಕೆ ಬರುವುದಿಲ್ಲ ಎಂಬ ನಂಬಿಕೆ ಇರಬೇಕು.

ಪೈಯವರು ಬಡ್ಡಿ ವ್ಯವಹಾರವನ್ನೂ ಮಾಡುತ್ತಿದ್ದರು. ಕಡಿಮೆ ಬಡ್ಡಿ ದರದ ವ್ಯವಹಾರ ಮಾಡುತ್ತಿದ್ದ ಅವರು ಅದನ್ನು ಸಾರ್ವಜನಿಕರಿಗೆ ತಾನು ಮಾಡುವ ಆಪತ್ಕಾಲೀನ ಸಹಾಯ ಎಂದು ಭಾವಿಸಿದ್ದರು.

ಪೈಯವರು ರೋಗಿಗಳಿಗೆ ಸಿಗುತ್ತಿದ್ದುದು ಅಪರೂಪ. ಸಿಕ್ಕರೆ ಅವರ ಅದೃಷ್ಟ. ಉಳಿದಂತೆ ನರ್ಸಿಂಗ್ ಹೋಂನ ಯಾವ್ಯಾವುದೋ ಕೋರ್ಸಿನ ವೈದ್ಯರು ಅಡ್ಮಿಟ್ ಮಾಡಿಕೊಂಡು ಇಂಜಕ್ಷನ್ ಕೊಟ್ಟು ಕಳುಹಿಸುತ್ತಿದ್ದರು. ನಿದ್ದೆ ಮಾತ್ರೆ ಕೊಡುವುದರಲ್ಲಿ ಪೈ ನರ್ಸಿಂಗ್ ಹೋಂ ತುಂಬಾ ಖ್ಯಾತಿ ಗಳಿಸಿತ್ತು, ಪೈಯವರು ರೋಗಿಗಳನ್ನು ನೋಡಿದ್ದಕ್ಕಿಂತ ಹೆಚ್ಚು ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಮನೋರೋಗದ ಬಗ್ಗೆ ಒಳ್ಳೆಯ ಉಪನ್ಯಾಸ ನೀಡುತ್ತಿದ್ದರು. ಸಂದರ್ಶಕರು ಬರುವಂತೆ ಮಾಡುತ್ತಿದ್ದರು.

ಮಾನಸಿಕ ಆರೋಗ್ಯದ ಕಾರ್ಯಪಡೆಯ ಅಗತ್ಯ ಸರ್ಕಾರಕ್ಕೆ ಮನದಟ್ಟು ಮಾಡಿ, 2012 ರಲ್ಲಿ ಅಸ್ತಿತ್ವಕ್ಕೆ ಬಂದಾಗ ನಿರೀಕ್ಷೆಯಂತೆ ಅವರೇ ಅಧ್ಯಕ್ಷರಾದರು. ಆದರೆ ಅಲ್ಲೂ ನಿಲ್ಲುವವರಾಗಿ ಏಕೆಂದರೆ ಅವರ ಜೋಳಿಗೆಯಲ್ಲಿದ್ದ ಜವಾಬ್ದಾರಿಯ ಎರಡು ಡಜನ್ನಿಗೂ ಮಿಕ್ಕಿದ್ದವು.

ತಮ್ಮದೇ ಆರು ಸಂಸ್ಥೆಯ ಜವಾಬ್ದಾರಿಯ ಜೊ ಕರ್ನಾಟಕ ವೈದ್ಯ ಸಾಹಿತ್ಯ ಪರಿಷತ್, ಪರಿಸರ ಸ ಸಮಿತಿ, ಇಂಡಿಯನ್ ಎಪಿಲೆಕ್ಟಿಕ್ ಸೊಸೈಟಿ, ಕು ವಿ.ವಿ. ಸಿಂಡಿಕೇಟ್ ಸದಸ್ಯರು..... ಹೀಗೆ ಒಂದು ಜವಾಬ್ದಾರಿಯನ್ನು ಹೊತ್ತು ತಿರುಗುತ್ತಿದ್ದರು. ಹಾಗಾಗಿ ಐದತ್ತು ನಿಮಿಷ ನಿಲ್ಲುತ್ತಿರಲಿಲ್ಲ, ಅವರ ತಹತಹ ಗಮನಿಸಿದ ಸಾಮಾನ್ಯರು, ಅಶೋಕ್ ಪೈಯವರು ಕೆಟ್ಟವರನ್ನು ಸರಿ ಮಾಡಿ ಮಾಡಿ ಅವರ ತಲೆಯೇ ಹೋಗಿದೆ ಎಂದು ಆಡಿಕೊಳ್ಳುತ್ತಿದ್ದರು. ಹಾಸ್ಯ ಪ್ರ ಪೈ ಈ ಅಭಿಪ್ರಾಯವನ್ನು ಎಂಜಾ ಮಾಡುವವರಾಗಿದ್ದರು. ಏಕೆಂದರೆ ಅವರೂ ಹಾಸ್ಯ ಲೇ

ತಮ್ಮಲ್ಲಿನ ಮನೋವೈದ್ಯರ ಚಿಕಿತ್ಸೆಯನ್ನು ತಮ ಮಾಡಿಕೊಳ್ಳುವ ಛಾತಿಯೂ ಅವರಿಗಿತ್ತು. 'ಕಾಡಿನ ಸಿನಿಮಾದ ಕತೆಯನ್ನು ಬರೆದವರು ನಾ ಡಿಸೋಜ, ಅಂತಹ ಒಂದು ರೋಗವನ್ನು ಗುರುತಿಸಿ ಚಿಕಿತ್ಸೆ ನೀಡಿ



ಪಿ.ಬಿ. ಶ್ರೀನಿವಾಸರು ತಮ್ಮ ಕಡೆ ಘಳಿಗೆಯಲ್ಲಿ ಮುಖ್ಯಮಂತ್ರಿ ಯಡಿಯೂರಪ್ಪನನ್ನು ಭೇಟಿಯಾಗಿ ಒಂದು ...ಟು ಕೇಳಿದ್ದರು. ಆದರೂ ಆಗಿನ ಸರ್ಕಾರ ಕೊಡಲಿಲ್ಲ. ...ಲೆ, ಸಾಹಿತ್ಯ, ಸಂಗೀತದ ವಿಷಯದಲ್ಲಿ ನಮ್ಮ ರಾಜಕಾರಣಿಗಳು ಅಜ್ಞಾನಿಗಳು. ಎಂ.ಪಿ. ಪ್ರಕಾಶ್ ತರದ ...ಬ್ಬನೇ ಒಬ್ಬ ರಾಜಕಾರಣಿ ಈಗಿಲ್ಲ. ಇದ್ದಿದ್ದರೆ ಜಾನಕಿಯಂತಹ ಗಾಯಕಿಗೆ ಒಂದು ಅದ್ದೂರಿ ಸನ್ಮಾನ ಏರ್ಪಡಿಸುತ್ತಿದ್ದರು. ಏಕೆಂದರೆ ನಮ್ಮ ಭಾಷೆಯ ಹಾಡುಗಳನ್ನು ...ಮಗೆ ಹಾಡಿಹೋದ ಆ ಗಾಯಕಿ ತಲುಗಿನವರು.

ನಮ್ಮ ಕನ್ನಡ ಚಿತ್ರರಂಗದಲ್ಲಿ ಡಾ. ರಾಜ್ ಹಾಡುವವರೆಗೆ ಹಾಡುಗಾರರೇ ಇರಲಿಲ್ಲ, ಮಹಿಳೆಯರ ಪೈಕಿ ಬಿ.ಕೆ. ಸುಮಿತ್ರ ...ಳೆಂಟು ಹಾಡಿಗೆ ಸುಮ್ಮನಾದರು. ಆದರೆ ಪಿ. ಸುಶೀಲ, ಎಸ್. ಜಾನಕಿ, ಪಿ.ಬಿ. ಶ್ರೀನಿವಾಸ್ ನಾಲ್ಕು ದಶಕ ಕನ್ನಡದಲ್ಲಿ ಹಾಡಿದರು. ಜಾನಕಿಯವರಂತೂ ಪ್ರತಿ ಹಬ್ಬದಲ್ಲೂ ಕೇಳುವ ಹಾಡುಗಳನ್ನು ಹಾಡಿದ್ದಾರೆ. ಯುಗಾದಿ ಬಂತೆಂದರೆ ಅವರು ಹಾಡಿರುವ "ಯುಗ ಯುಗಾದಿ ಕಳೆದರೂ" ಹಾಡು ಆಕಾಶವಾಣಿಯಿಂದ ಕೇಳುತ್ತದೆ. ಹಾಗೆಯೇ ದೀಪಾವಳಿಯಲ್ಲಿ ...ನಾಡಿನಿಂದ ಈ ದೀಪಾವಳಿ ಬಂದು" ಎಂಬ ಹಾಡಲ್ಲದೆ, ಗಣೇಶನ ಹಬ್ಬಕ್ಕೆ "ಗಜಮುಖನೆ ಗಣಪತಿಯೇ" ಎಂಬುದು ಯಾವತ್ತಿಗೂ ಹಳತಾಗದ ಹಾಡಾಗಿದೆ. ಹಾಗೆಯೇ ...ಜಯಗೌರಿ ಜಗದೀಶ್ವರಿ" ಎಂಬ ಹಾಡಂತೂ ಗಜಗೌರಿ ವ್ರತದವರಿಗೆ ಆರಂಭದ ಹಾಡಾಗಿದೆ. ಹೀಗೆ ನಮ್ಮ ಸಂಸ್ಕೃತಿಯಲ್ಲೇ ಎಸ್. ಜಾನಕಿಯವರ ದನಿ ...ರೆತುಹೋಗಿರುವುದರಿಂದ ಅವರು ಹಾಡುವುದನ್ನು ...ಲ್ಲಿಸಿದರೆ ಅಂತಹ ನಷ್ಟವಿಲ್ಲ.

ಈಚೆಗೆ ಕೆ.ಎಸ್. ನರಸಿಂಹಸ್ವಾಮಿಯವರ "ಇವಳು ಯಾರು ಬಲ್ಲೆಯೇನು" ಎಂಬ ಹಾಡು ಕೇಳುತ್ತಿರುವಾಗ ಅದರಲ್ಲಿನ ಎಸ್. ಜಾನಕಿಯವರ ಆಲಾಪನೆಯನ್ನು ಯಾವನೊ ಸೀಡಿ ಮಾರುವ ಮೂರ್ಖ ಕಟ್ ಮಾಡಿದ್ದಾನೆ. ...ದು ಸಿ.ಡಿ ಮಾರುವವರ ಅಸಂಸ್ಕೃತ ನಡವಳಿಕೆ ಇರಬೇಕು. ...ವರನ್ನು ಪತ್ತೆ ಹಚ್ಚಿ ಮಹಾಗಾಯಕಿಯ ದನಿಗೆ ಮಾಡಿದ ಅವಮಾನವೆಂದು ಕೇಸು ಮಾಡಬೇಕೆಂದಿದ್ದೇನೆ. ಇಂತಹ ...ತ್ಯವನ್ನು ಯಾರೂ ಸಹಿಸಬಾರದು.

■ ಬಿ. ಚಂದ್ರೇಗೌಡ

...ಡಾ. ಗಣಪತಿ. ನಿಜಜೀವನದಲ್ಲಿ ಆ ಹುಡುಗಿ ಆತ್ಮಹತ್ಯೆ ಮಾಡಿಕೊಳ್ಳುತ್ತಾಳೆ. ಆದರೆ ಪೈಯವರು ಚಿಕಿತ್ಸೆ ನೀಡಿ ...ನಿಪಡಿಸಿದಂತೆ ಚಿತ್ರ ತಯಾರಿಸಿ ಇಪ್ಪತ್ತು ಲಕ್ಷದಷ್ಟು ...ಣ ಸಂಪಾದಿಸುತ್ತಾರೆ. ಆದರೆ ಎಲ್ಲೂ ಡಾ. ಗಣಪತಿಯವರ ...ಸ್ತಾಪವಾಗುವುದಿಲ್ಲ. ಈಗ ಬೆಂಗಳೂರಿನ ಸ್ಪಂದನ ...ೈಕಿಯಾಟ್ರಿಕ್‌ನಲ್ಲಿ ಕಾರ್ಯ ನಿರ್ವಹಿಸುತ್ತಿರುವ ಗಣಪತಿಯವರು ಕೂಡ, "ಅದು ನಾನು ನಿಭಾಯಿಸಿದ ಕೇಸು" ಎಂದು ಹೇಳಿಕೊಳ್ಳುವುದಿಲ್ಲ. ಇದು ಪೈಯವರ ...ಕ್ಷಮಣಶೀಲ ಗುಣದ ಒಂದು ಸಾಂಪಲ್ಲಷ್ಟೇ.


ಪೈಯವರಿಗೆ ಒಂದು ಡಜನ್ ಪ್ರಶಸ್ತಿಗಳು ಸಿಕ್ಕಿವೆ. ಡಾಕ್ಟರೇಟುಗಳೂ ಸಿಕ್ಕಿವೆ. ಇತ್ತೀಚೆಗೆ ಪದ್ಮಶ್ರೀ, ಪದ್ಮವಿಭೂಷಣ ಪ್ರಶಸ್ತಿ ಕೊಡುವವರ ಬಳಿಯೂ ...ಳಿಯುತ್ತಿದ್ದರು.


ಬಹುತೇಕ ಪ್ರಪಂಚದ ಎಲ್ಲಾ ದೇಶಗಳನ್ನು ಸುತ್ತಿರುವ ಪೈ ಅಲ್ಲಿನ ಎಲ್ಲಾ ಸೆಮಿನಾರುಗಳಲ್ಲಿ ಭಾಗವಹಿಸಿ ನಮ್ಮ ಕರ್ನಾಟಕದಲ್ಲೂ ಪ್ರತಿಭಾವಂತ ಮನೋವೈದ್ಯರಿದ್ದಾರೆ ಎಂಬ ಸಂದೇಶವನ್ನು ಜಗತ್ತಿಗೇ ಸಾರಿ ಬಂದಿದ್ದರು. ಆದರೂ ...ಲ್ಲಿ ಒಬ್ಬ ಘನತೆವೆತ್ತ ಗೌರವಾನ್ವಿತ ಮನೋವೈದ್ಯರಾಗಿ ...ಣಲೇ. ಇಲ್ಲ. ಇದಕ್ಕೆ ಕಾರಣವೇನು ಎಂಬುದನ್ನು ...ಹುಡುಕುತ್ತ ಹೋದರೆ ಪೈಯವರಿಗಿದ್ದ ಖ್ಯಾತಿಯ ವ್ಯಸನ ...ಸಿತ್ತು ಧನದಾಹದ ಸಮಸ್ಯೆ ಎದ್ದು ಕಾಣುತ್ತದೆ.

...ವಿಪರೀತ ಹಣ ಯಾರಿಗೂ ಸುಖ, ನೆಮ್ಮದಿ ಕೊಟ್ಟಂತೆ ...ಕಾಣುತ್ತಿಲ್ಲ. ನೂರಾರು ಕೋಟಿಯನ್ನು ಬಿಡುಗಡೆ ಮಾಡಿದ ...ರೀಗೆ ಬಸಾಟಿ ಕಣ್ಣರೆಯಾಗುತ್ತಿರುವವರನ್ನು ...ನೋಡಿಯಾದರೂ ವೈದ್ಯರುಗಳು ಕಣ್ತೆರೆಯಬೇಕಾಗಿದೆ.

■ ವರದಿಗಾರ

ವೈದಿಕ ಮತ ತಿರಸ್ಕಾರಕ್ಕೆ ಯೋಗ್ಯವಾದದ್ದು





ಪ್ರಜಾವಾಣಿ 'ಸಂಗತ'ದಲ್ಲಿ (09-09-2016) ರವೀಂದ್ರ ಕೊಟಕಿ ನಿರಾಧಾರವಾಗಿ ಬರೆದುಕೊಂಡಿದ್ದಾರೆ. ದಲಿತ ಸಭೆಗಳಿಗೆ ಹೋದಾಗ ಅಂಬೇಡ್ಕರ್ ವಿಚಾರಗಳನ್ನು ಸಭಿಕರ ಗಮನಕ್ಕೆ ತರಲು ನಾನು ಪ್ರಯತ್ನಿಸುತ್ತೇನೆ, ನಿಜ. ಇವರು ನನ್ನವು ಎಂದು ಆರೋಪಿಸಿರುವ ಅಂಶಗಳು ಕೆಲವು ನನ್ನವಲ್ಲ, ಉದಾಹರಣೆಗೆ ರಾಮನ ಹುಟ್ಟಿನ ಬಗ್ಗೆ ಅಂಬೇಡ್ಕರ್ ಬರೆದಿದ್ದಾರೆ (ಸಂ. 4, ರಿಡ್ಲ್ಸ್ ಇನ್ ಹಿಂದೂಯಿಸಂ, ಪು. 324). ಪಾಂಡವರ ಬಗೆಗೂ ಇದೇ ಆರೋಪ ಇದೆ. ಏಕೆ ಹೀಗೆ ಸಾಮಾನ್ಯವಾಗಿ ಎಲ್ಲಾ ಕ್ಷತ್ರಿಯ ರಾಜರನ್ನು ಕುರಿತು ಬರೆಯಲಾಗಿದೆ ಎಂದರೆ ಕ್ಷತ್ರಿಯರಿಗೂ ಬ್ರಾಹ್ಮಣರಿಗೂ ಜನರ ಮೇಲಿನ ಆಧಿಪತ್ಯಕ್ಕಾಗಿ ಭಾರೀ ಹೋರಾಟಗಳು ನಡೆದವು (ನೋಡಿ ಸ್ವಾಮಿ ವಿವೇಕಾನಂದರಿಂದ ಉದ್ಧರಣೆ- ಶಂಕರಾಚಾರ್ಯ ಮತ್ತು ಪ್ರತಿಗಾಮಿತನ, ಹತ್ತೊಂಬತ್ತನೆಯ ಮುದ್ರಣ 2016, ಪು. 46). ಶಸ್ತ್ರಸಜ್ಜಿತರಾಗಿ ಸೇನಾ ಬಲವಿದ್ದ ಕ್ಷತ್ರಿಯರು ಹಾರುವರನ್ನು ಸಂಪೂರ್ಣ ಸೋಲಿಸಿದರು. ಈ ಅವಮಾನವನ್ನು ಸಹಿಸಿಕೊಳ್ಳದ ಹಾರುವರು ಕಾವ್ಯಕತೆಗಳು ಮತ್ತು ಪುರಾಣಗಳನ್ನು ಬರೆಯುವಾಗ, ಕ್ಷತ್ರಿಯ ವೀರರೆಲ್ಲ ಬ್ರಾಹ್ಮಣರಿಗೆ ಹುಟ್ಟಿದವರೆಂದು ಬರೆದುಕೊಂಡು ತಮ್ಮ ಕೀಳು ಅಭಿರುಚಿ ಮತ್ತು ಹೀನ ಸಂಸ್ಕೃತಿಯನ್ನು ಪ್ರದರ್ಶಿಸಿ, ತಮ್ಮ ಸೇಡು ತೀರಿಸಿಕೊಂಡರು. ಇವರು ಆರೋಪಿಸಿರುವಂತೆ, ನಾನು ಸೀತೆಯ ಪ್ರೇಮ ಪ್ರಕರಣದ ಬಗ್ಗೆ ಬರೆದಿಲ್ಲ, ಇನ್ನು "ಭಗವದ್ಗೀತೆ ಸುಡಬೇಕು" ಎಂದೆ ಎಂಬ ಮಾತು. ಭಗವದ್ಗೀತೆಯಲ್ಲಿ ಸ್ತ್ರೀಶೂದ್ರರ ಬಗ್ಗೆ ಅವಹೇಳನಕರ ಶ್ಲೋಕಗಳಿವೆ. ಇವನ್ನು (9. 32-33) ಸುಡಬೇಕು ಎಂದು ನಾನು ಹೇಳಿದ್ದು ನಿಜ. ಈ ಶ್ಲೋಕಗಳು ಬ್ರಾಹ್ಮಣರು ಮತ್ತು ಕ್ಷತ್ರಿಯರು ಪುಣ್ಯವಂತರು, ಸ್ತ್ರೀಶೂದ್ರವೈಶ್ಯರೆಲ್ಲ ಪಾಪಿಗಳು ಎಂದು ಹೇಳುತ್ತವೆ. ನಾವ್ಯಾರೂ ಪಾಪಿಗಳಲ್ಲ. ಶಂಭೂಕನನ್ನು ಹಾರುವರ ಮಾತುಕೇಳಿ ವಿನಾಕಾರಣ ಕೊಂದ (ವಾಲ್ಮೀಕಿ ರಾಮಾಯಣ, ಉತ್ತರ ಕಾಂಡ, 76. 2-5) ಶ್ರೀರಾಮ ಪಾಪಿ; ಬೇರೊಬ್ಬನ ಹೆಂಡತಿಯಾಗಿದ್ದ ರಾಧೆಯನ್ನು ಹಾರಿಸಿಕೊಂಡು (ಅಂಬೇಡ್ಕರ್ ಸಂ. 4; ಪು.336) ಹೋದುದಲ್ಲದೆ ಹದಿನಾರು ಸಾವಿರದ ನೂರೆಂಟು ಹೆಂಗಸರನ್ನು ಇಟ್ಟುಕೊಂಡು ಅಷ್ಟೊಂದು ಮಂದಿ ಗಂಡಸರಿಗೆ ಹೆಂಡಿರಿಲ್ಲದಂತೆ ಮಾಡಿದ ಶ್ರೀಕೃಷ್ಣ ಪಾಪಿ, ಎಂದೆನು.

ಒಂದು ಕಡೆ ಶ್ರೀರಾಮನನ್ನು ಏಕಪತ್ನಿ ವ್ರತಸ್ಥ ಎಂದು ಹೊಗಳಿ, ಇನ್ನೊಂದು ಕಡೆ ಸಾವಿರಾರು ಹೆಂಗಸರನ್ನು ಇಟ್ಟುಕೊಂಡಿದ್ದ ಶ್ರೀಕೃಷ್ಣನನ್ನು ಆದರ್ಶ ವ್ಯಕ್ತಿ ಎನ್ನುವಲ್ಲಿ ಏನಾದರೂ ಅರ್ಥ ಇದೆಯೇ? ರಾಮ ("ಚಾತುರ್ವರ್ಣಸ್ಯ ರಕ್ಷಿತಾ"- ಚಾತುರ್ವರ್ಣ ರಕ್ಷಕ; "ಬ್ರಾಹ್ಮಣನಾಂ ಉಪಾಸಿತಾ"-ಬ್ರಾಹ್ಮಣರನ್ನು ಪೂಜಿಸುತ್ತಿದ್ದನು; ಬ್ರಾಹ್ಮಣರಿಗೆ ಸೇವೆ ಸಲ್ಲಿಸುತ್ತಿದ್ದನು; ಸುಂದರ ಕಾಂಡ, ಸರ್ಗ 35. ಶ್ಲೋಕ 11;13) ಮತ್ತು ಕೃಷ್ಣ ("ಚಾತುರ್ವರ್ಣ್ಯಂ ಮಯಾ ಸೃಷ್ಟಂ" - ಚಾತುರ್ವರ್ಣವನ್ನು ನಾನೇ ಸೃಷ್ಟಿ ಮಾಡಿದ್ದೇನೆ. ಭಗವದ್ಗೀತೆ 4. 13) ಇಬ್ಬರೂ ಚಾತುರ್ ವರ್ಣವನ್ನು ರಕ್ಷಿಸಿದ್ದರಿಂದ ಇವರನ್ನು ಪುರೋಹಿತ ವರ್ಗ ದೇವರನ್ನಾಗಿ ಮಾಡಿದೆ. ಏಕೆಂದರೆ, ಬ್ರಾಹ್ಮಣ ಮೇಲು ಸ್ತ್ರೀ ಶೂದ್ರ ವೈಶ್ಯ ಕ್ಷತ್ರಿಯರೆಲ್ಲ ಕೀಳು ಎಂದು ವೈದಿಕ ಮತ ಅರ್ಥಾತ್ ಬ್ರಾಹ್ಮಣ ಮತ ಅಥವಾ ಹಿಂದೂ ಮತ ಆಚರಿಸುತ್ತದೆ.

ಕನ್ನಡ ಮತ್ತು ಕೋಮುವಾದಿ ಪತ್ರಿಕೆಗಳು ನಾನು ಗೀತೆಯನ್ನು ಸುಡಬೇಕು ಎಂದು ಹೇಳಿದೆ ಎಂದು ಬರೆದವು. ಆದರೆ ದೂರದ ದೆಹಲಿ ಪತ್ರಿಕೆಗಳು ಈ ಶ್ಲೋಕಗಳನ್ನು (9. 32-33) ಸುಡಬೇಕೆಂದು ಹೇಳಿದ್ದನ್ನು ನಿಖರವಾಗಿ ಪ್ರಕಟಿಸಿದವು ('ಔಟ್‌ಲುಕ್' 14-03-2015).

ಹಾಲಿ ಶಾಸಕರೂ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಮಾಜಿ ಸಚಿವರೂ ಆದ ಶ್ರೀನಿವಾಸ ಪ್ರಸಾದ್ ಅವರು ವಿವೇಕಯುತವಾಗಿ ಚಿಂತಿಸುವ ಸಜ್ಜನ ರಾಜಕಾರಣಿ. ಸ್ವರಕ್ಷಣೆಗೆ ಆಯುಧ ಕೊಡಿ ಎಂದು ಸಂಸತ್ತಿನಲ್ಲಿ ನಾನು ಭಾಷಣ ಮಾಡಿದ್ದೆ ಎಂದು ನನಗೆ ತಿಳಿಸಿದರು. ಅನೇಕ ದಲಿತ ಸಂಘಟನೆಗಳ ನಾಯಕರು ಮಾನಸಯ್ಯ, ಡಾ. ಡಿ.ಜಿ.ಸಾಗರ್, ವೆಂಕಟಗಿರಿಯಯ್ಯ ಮುಂತಾದ ಕಾರ್ಯಕರ್ತರು, ವಿದ್ಯಾರ್ಥಿಗಳು ತಮ್ಮ ಬೆಂಬಲ ಮತ್ತು ಮೆಚ್ಚಿಕೆ ವ್ಯಕ್ತಪಡಿಸಿದ್ದಾರೆ.

ಸ್ವಾತಂತ್ರ್ಯ ಬಂದು ಎಪ್ಪತ್ತು ವರ್ಷಗಳಾದವು. ದುರ್ಬಲರು ಮತ್ತು ದಲಿತರ ಮೇಲೆ ಹಲ್ಲೆಗಳು ನಿಂತಿಲ್ಲ, ಪ್ರತಿದಿನ ದೇಶದಲ್ಲಿ ಎಲ್ಲಾದರೂ ಒಬ್ಬ ದಲಿತನ ಕೊಲೆ ಮತ್ತು ಹೆಣ್ಣಿನ ಮಾನಭಂಗ ಆಗುತ್ತದೆಂದು ವರದಿ. ಇತ್ತೀಚೆಗೆ ಗುಜರಾತಿನ ಬೀದಿಯಲ್ಲಿ ರಾಜಾರೋಷವಾಗಿ ದಲಿತ ಯುವಕರನ್ನು ಥಳಿಸಿದ್ದು ನೋಡಿದಾಗ ನನ್ನ ಮೈಮೇಲೆ ಬಾಸುಂಡೆಗಳು ಬಂದಂತೆ ನನಗೆ ನೋವಾಯಿತು. ದಲಿತರನ್ನು ಕೊಲ್ಲದೆ ಬದುಕಿಸಿದರಲ್ಲವೇ ಅವರು ಎಲ್ಲ ಮೀಸಲಾತಿ, ಸರ್ಕಾರಿ ನೌಕರಿ, ಬ್ಯಾಕ್‌ಲಾಗ್ ಹುದ್ದೆ ಭರ್ತಿ ಇತ್ಯಾದಿಗಳನ್ನು ಅನುಭವಿಸಲು ಸಾಧ್ಯವಾಗುವುದು?



ಹೆಣ್ಣು ಮಕ್ಕಳನ್ನು ಅತ್ಯಾಚಾರಕ್ಕೆ ಎಳೆಯುವ, ಮಾನಭಂಗ ಮಾಡುವ ವ್ಯಕ್ತಿಗಳ ಚರಸ್ಥಿರ ಆಸ್ತಿಪಾಸ್ತಿಗಳನ್ನು ಮುಟ್ಟುಗೋಲು ಹಾಕಿಕೊಳ್ಳುವ ಕಾಯಿದೆಯನ್ನು ಜಾರಿಗೆ ತರಬೇಕು. ಇದೊಂದೇ ಮಾನಭಂಗವನ್ನು ತಡೆಯುವ ಪರಿಣಾಮಕಾರಿ ಮಾರ್ಗ. ಆಗ ನೋಡಿ ಎಂಥ ಬದಲಾವಣೆ ಆಗುತ್ತದೆ ಎಂದು.

"ಬಂದೂಕಲ್ಲ, ಅಧಿಕಾರ ಕೊಡಿ" ಎಂದರೆ ಸರಿಯೇನೋ? ಪ್ರಧಾನಮಂತ್ರಿಗಳಿಗೆ ಅಧಿಕಾರ ಇದೆ; ಮುಖ್ಯಮಂತ್ರಿಗಳಿಗೆಲ್ಲ ಅಧಿಕಾರ ಇದೆ. ಆದರೆ ಅವರಿಗೆಲ್ಲ ಅಂಗರಕ್ಷಕರಿಲ್ಲವೆ? ಏಕೆ ಇದ್ದಾರೆ? ತೆಗೆದು ಬಿಡಿ! ಕಾನೂನು ರಕ್ಷಣೆ ಮಾಡಲು ಪೊಲೀಸರಿಗೇಕೆ ಲಾಠಿ, ಬಂದೂಕು ಕೊಟ್ಟದ್ದೀರಿ? ಅವನ್ನು ರದ್ದುಮಾಡಿ, ಅಹಿಂಸಾವ್ರತ ಅನುಸರಿಸಿ!

ವಾಸ್ತವ ಅಷ್ಟು ಸುಲಭವಲ್ಲ. ಅಹಿಂಸೆಯಿಂದ ಸ್ವಾತಂತ್ರ್ಯಗಳಿಸಿದೆವು ಎಂಬ ಭ್ರಮೆಯಿಂದ ನಮ್ಮ ರಕ್ಷಣಾ ಪಡೆಗಳನ್ನು ಅಭಿವೃದ್ಧಿಪಡಿಸಿ ಆಧುನಿಕಗೊಳಿಸದೆ ಇದ್ದುದರಿಂದ 1962ರಲ್ಲಿ ಚೀನಾ ದೇಶವು ನಮ್ಮ ಮೇಲೆ ಆಕ್ರಮಣ ಮಾಡಿತು; ನಮ್ಮ ದೇಶದ ಭೂಭಾಗವನ್ನು ವಶಪಡಿಸಿಕೊಂಡಿತು. ಆ ಪ್ರದೇಶ ಯಾವಾಗ ಭಾರತಕ್ಕೆ ಬರುತ್ತದೋ? ಎಂಥ ನಷ್ಟ!

ಕಳಿಂಗ ಯುದ್ಧದ ನಂತರ ಪ್ರಪಂಚದಲ್ಲಿ ಅತ್ಯುತ್ತಮ ಸಾಮ್ರಾಟ ಎಂದು ವಿಶ್ವವೇ ಹೊಗಳುವ ಅಶೋಕ ತನ್ನ ಸೈನ್ಯಶಕ್ತಿಯನ್ನು ಕಡೆಗಣಿಸದೆ ಇನ್ನೂ ಅತ್ಯುತ್ತಮಗೊಳಿಸಿದ್ದರಿಂದ ಅಖಂಡ ಭಾರತವನ್ನು ಸ್ಥಾಪಿಸಿದ ಎಂಬುದನ್ನು ಮರೆಯಬಾರದು.

ಭಗವಾನ್ ಬುದ್ಧ ಗುರುಗಳು ಅಹಿಂಸೆ ಬೋಧಿಸಿದರು, ನಿಜ. ಆದರೆ, ಅವರು ಹೇಳಿದ್ದು ಮಧ್ಯಮ ಮಾರ್ಗ. ಅವರಲ್ಲಿ ಯಾವುದೂ ಅತಿರೇಕ ಇಲ್ಲ, ಯಾವುದನ್ನು ಎಷ್ಟು ಮತ್ತು ಹೇಗೆ ಬಳಸಿಕೊಳ್ಳಬೇಕು ಎಂಬ ಬಗ್ಗೆ ವಿವೇಕ ಇರಬೇಕು.

ಎಲ್ಲರಿಗೂ ಜಾತಿ ಇದೆ ಎಂದಿದ್ದಾರೆ ಕೊಟಕಿ. ಆದರೆ ತಮಗೂ ಜಾತಿ ಇದೆ ಎಂದು ಹೇಳಿಲ್ಲ, ಅವರು ತಮ್ಮ ಜಾತಿಯನ್ನು ಹೇಳದೆ ಅದನ್ನು ಭಯಂಕರವಾಗಿ ಬಳಸಿಕೊಂಡಿದ್ದಾರೆ. ಅದು ಋಗ್ವೇದದ ಉದ್ಧರಣೆಯಲ್ಲಿ ವ್ಯಕ್ತವಾಗಿದೆ. ಅವರು ಹೇಳಿರುವ ಹಾಗೆ ವೇದದಲ್ಲಿ ಸೋದರತ್ವ ಇದ್ದರೆ, ವರ್ಣಪದ್ಧತಿಯಲ್ಲಿ ಏಕೆ ಮೇಲುಕೀಳು ಬಂತು? ಬ್ರಾಹ್ಮಣ ಜಾತಿಯಲ್ಲೇ ಹುಟ್ಟಿ ಅದರ ಅಮಾನುಷತೆಯನ್ನು ಕಂಡು, ಅದನ್ನು ತೊರೆದ ಬಸವಣ್ಣನವರು "ವೇದಕ್ಕೆ ಒರೆಯ ಕಟ್ಟುವೆ" ಎಂದು ಏಕೆ ಹೇಳಿದರು? ಸರ್ವಸಮಾನತೆಯನ್ನು ತರಲು ಹೋರಾಡಿದ ವಿಶ್ವಜ್ಞಾನಿ ಅಂಬೇಡ್ಕರ್ "ಅಪ್ಲೈ ಡಾಯ್ನಾಮೈಟ್ ಟು ದ ವೇದಾಸ್" (ಸಂ. 1, ಪು. 75) ಎಂದು ಏಕೆ ಕರೆ ಕೊಟ್ಟರು? ಕಾರಣ, ವೇದ ಎಂದರೆ ಭೇದ.

ಹಿಂದೂತ್ವ ಉಗಮವಾಗಿರುವುದೇ ವೇದದಿಂದ. ಅದನ್ನು ಬಸವಣ್ಣನವರು ತಿರಸ್ಕರಿಸಿದರು. ಇದನ್ನು ಅರಿಯದೆ ಬಸವಣ್ಣನವರ ಅನುಯಾಯಿಗಳು ಹಿಂದೂತ್ವವನ್ನು ಬೆಂಬಲಿಸುವುದು ಸರಿಯಲ್ಲ ಎಂದು ಸಮಾನತಾವಾದಿ ಮಹತ್ತ್ವಪೂರ್ಣ ಕವಿ ಚಂಪಾ ಅವರು ಎಚ್ಚರಿಸಿದ್ದನ್ನು ಅವರು ಗ್ರಹಿಸಲು ವಿಫಲರಾಗಿದ್ದಾರೆ. ಖ್ಯಾತ ಸಾಹಿತಿ ಚಂಪಾ ಅವರು ಕೋಮುವಾದವನ್ನು ಧಿಕ್ಕರಿಸಿದಂತೆ ಕೊಟಕಿ ಅವರು ಧಿಕ್ಕರಿಸಬಲ್ಲರೆ? ಚಂಪಾ ಅವರ ಗಂಭೀರ ಕಾಳಜಿ ಮತ್ತು ಬದ್ಧತೆ ಇದೆಯೇ? ಬಸವಣ್ಣನವರ ಅನುಯಾಯಿಗಳಾದ ಮಾಜಿ ಮುಖ್ಯಮಂತ್ರಿ ಯಡೂರಪ್ಪನವರು, ಜಗದೀಶ್ ಶೆಟ್ಟರ್ ಅವರು ಹಾಗೂ ಇತರರು ಹೇಗೆ ಹಿಂದೂತ್ವದ ಪರವಾಗಿರಲು ಸಾಧ್ಯ?

ಋಗ್ವೇದವನ್ನು ಉಲ್ಲೇಖಿಸಿ ಉದ್ದೇಶಪೂರ್ವಕವಾಗಿ ಕೊಟಕಿ ತಪ್ಪಾಗಿ ವಿವರಿಸಿದ್ದಾರೆ. ವೇದದಲ್ಲಿ, ಇವರು ಹೇಳುವಂತೆ, ಸಹೋದರತ್ವ, ಸಮಾನತೆ ಇದ್ದರೆ ಶೂದ್ರರು ವೇದಗಳನ್ನು ಓದಬಾರದು, ಕೇಳಬಾರದು ಎಂದು 131 ಸ್ಮೃತಿ ಗ್ರಂಥಗಳು ಹಾಗೂ ಆಚಾರ್ಯತ್ರಯರು ಶೂದ್ರರನ್ನು ಶಿಕ್ಷಿಸಬೇಕೆಂದು ಏಕೆ ಕಟ್ಟಪ್ಪಣೆ ಮಾಡಿದರು?

ಕೊಟಕಿ ಅವರು ಉದ್ಧರಿಸಿರುವ ಋಕ್ಕಿನಲ್ಲಿ (ಋಗ್ವೇದ 5. 60. 5) ಬರುವ ಸೋದರರು ಯಾರು? ಅವರು ಮರುತ್ ದೇವತೆಗಳು, ನಾನಾ ಜಾತಿ ವರ್ಣಗಳಲ್ಲಿರುವ ಮನುಷ್ಯರಲ್ಲ. "ಮರುತ್ ದೇವತೆಗಳಲ್ಲಿ ಉಚ್ಚ ನೀಚ ಭಾವವಿಲ್ಲ, ಜ್ಯೇಷ್ಠ ಕನಿಷ್ಠ ಎಂಬ ವ್ಯತ್ಯಾಸವಿಲ್ಲ, ಎಲ್ಲರೂ ಸಮಾನರು, ಸಮಾನೋತ್ಪತ್ತಿಯುಳ್ಳ ಸೋದರರು". (ಪು.788, ಋಗ್ವೇದ ಸಂಹಿತಾ) ಇದನ್ನು ಉದ್ದೇಶಪೂರ್ವಕವಾಗಿ ತಪ್ಪು ಅರ್ಥ ಹೇಳಿ ತಿರುಚುವ ತಮ್ಮ ಜಾತಿಯ ಬಣ್ಣವನ್ನು ಕೊಟಕಿ ಬಯಲು ಮಾಡಿದ್ದಾರೆ.

ಮೇಲುಕೀಳು ಮಾಡಿ ತನ್ನ ಜನರನ್ನೇ ಕೊಲ್ಲುವ ಬ್ರಾಹ್ಮಣ ಮತವನ್ನು ಬಿಟ್ಟರೆ ಪ್ರಪಂಚದಲ್ಲಿ ಬೇರಾವ ಮತವೂ ಹಾಗೆ ಮಾಡುವುದಿಲ್ಲ, ಬೇರೆ ಎಲ್ಲಾ ಮತಗಳವರು ನಮ್ಮ ಧರ್ಮಗ್ರಂಥ ಓದಿ, ನಮ್ಮ ಮತಕ್ಕೆ ಸೇರಿಕೊಳ್ಳಿ ಎಂದು ಹಾತೊರೆದರೆ ಬ್ರಾಹ್ಮಣರು ನಮ್ಮ ವೇದಗಳನ್ನು ಓದಿದರೆ ಕೊಲ್ಲುತ್ತೇವೆಂದು ಹಿಂಸಿಸುತ್ತಾರೆ. ವೈದಿಕ ಮತ ಹಿಂಸಾತ್ಮಕವಾದುದು. ಭಾರತದ ಸಂವಿಧಾನ ಜಾರಿಯಾಗಿ 66 ವರ್ಷಗಳಾದವು. ಅದಕ್ಕೆ ಈಗಾಗಲೇ 105ಕ್ಕೂ ಹೆಚ್ಚು ತಿದ್ದುಪಡಿಗಳಾಗಿವೆ. ಸುಮಾರು 3000 ವರ್ಷಗಳಷ್ಟು ಹಳೆಯದಾದ ವೈದಿಕ (ಹಿಂದೂ) ಮತಕ್ಕೆ ಒಂದು ತಿದ್ದುಪಡಿಯನ್ನೂ ತಂದಿಲ್ಲ. ಅದು ತಿರಸ್ಕಾರಕ್ಕೆ ಯೋಗ್ಯವಾದದ್ದು.

■ ಪ್ರೊ. ಕೆ.ಎಸ್.ಭಗವಾನ್

ಯುದ್ಧೋನ್ಮಾದದ ವಾತಾವರಣವನ್ನು ಸೃಷ್ಟಿಸಲಾಗುತ್ತಿದೆಯೆ

ನಾವೆಲ್ಲರೂ ನೋಡಿರುವ ಹಾಗೆ ಚುನಾವಣಾ ಪೂರ್ವದಲ್ಲಿ ಭಾರಿ ವಾಚಾಳಿಯಾಗಿದ್ದ ಮೋದಿ ಪಾಕಿಸ್ತಾನಕ್ಕೆ ಸರಿಯಾದ ಪಾಠ ಕಲಿಸುವ ವಿಷಯದಲ್ಲಿ ಅಂದಿನ ಪ್ರಧಾನಿ ಶುದ್ಧ ನಿಷ್ಪ್ರಯೋಜಕ ಎಂದು ಜರೆದಿದ್ದ. ಆತನ ಬಾಯಿಯಿಂದ ಪಾಕಿಸ್ತಾನದ ವಿರುದ್ಧ ಬಲಪ್ರಯೋಗ ಮಾಡುವ ಮಾತುಗಳೂ ಕೇಳಿಬರುತ್ತಿದ್ದವು. ಇದೇ ಮೋದಿ ಪ್ರಧಾನಿಯಾದ ನಂತರ ನಿಯಂತ್ರಣ ರೇಖೆಯಾಚೆಯಿಂದ ಕಾಶ್ಮೀರದಲ್ಲಿರುವ ಸೇನಾ ನೆಲೆಗಳ ಮೇಲೆ ಸುಮಾರು 20 ದಾಳಿಗಳು (19 ಯೋಧರ ಸಾವಿಗೆ ಕಾರಣವಾದ ಉರಿ ದಾಳಿಯನ್ನೂ ಒಳಗೊಂಡಂತೆ) ನಡೆದಿವೆ. ಪಂಜಾಬ್‌ನಲ್ಲಿ ಎರಡು ದಾಳಿಗಳು ಸಂಭವಿಸಿವೆ – ಒಂದು ಗುರುದಾಸ್‌ಪುರ ಪೊಲೀಸ್ ಠಾಣೆಯ ಮೇಲೆ (ಮೃತಪಟ್ಟವರ ಸಂಖ್ಯೆ 7); ಎರಡು, ಪಠಾಣ್‌ಕೋಟ್ ವಾಯುಸೇನಾ ನೆಲೆ ಮೇಲೆ (ಮೃತಪಟ್ಟವರ ಸಂಖ್ಯೆ 6). ಉರಿ ಶಿಬಿರದ ಮೇಲಿನ ದಾಳಿ ಶಾಂತಿ ಕಾಲದಲ್ಲಿ ಸೇನಾಪಡೆಗಳ ಮೇಲಾಗಿರುವ ಅತ್ಯಂತ ಮಾರಕ ದಾಳಿಗಳಲ್ಲೊಂದು. ಪಠಾಣ್‌ಕೋಟ್ ಮತ್ತು ಉರಿ ದಾಳಿಗಳಿಂದಾಗಿ ಮೋದಿ ಸರ್ಕಾರಕ್ಕೆ ಭಾರಿ ದೊಡ್ಡ ಮುಖಭಂಗವಾಗಿರುವುದು ಸ್ಪಷ್ಟ. ಇದರ ಬಳಿಕ ಸಂಘಿಗಳು ಏಕ್‌ದಂ ತಣ್ಣಗಾಗಿದ್ದರು. ಎರಡೆರಡು ಬಾರಿ ಅಷ್ಟೊಂದು ಕಟ್ಟೆಚ್ಚರದ ಭದ್ರತಾ ವ್ಯವಸ್ಥೆಯನ್ನು ಮುರಿದು ದಾಳಿ ಮಾಡಿರುವುದು ಭಾರತೀಯ ಸೇನೆಯ ಪಾಲಿಗೂ ಅವಮಾನದ ವಿಷಯ. ಹೀಗಾಗಿ ಸೆಪ್ಟಂಬರ್ 29ರಂದು ನಡೆದುದೆನ್ನಲಾದ ನಿರ್ದಿಷ್ಟ ದಾಳಿಗಳ (Surgical Strikes) ಹಿಂದೆ ಕಳೆದುಹೋದ ಮರ್ಯಾದೆಯನ್ನು ಮರಳಿ ಪಡೆಯುವ ಉದ್ದೇಶವಿದೆ ಎಂದರೆ ತಪ್ಪಾಗಲಾರದು.



ಭಾರತದ ಸೇನಾಪಡೆಗಳು ಪಾಕ್ ಆಕ್ರಮಿತ ಕಾಶ್ಮೀರದೊಳಗಿನ ಕೆಲವೊಂದು ಉಗ್ರರ ಕಟ್ಟೆಗಳಿಗೆ (ಲಾಂಚ್ ಪ್ಯಾಡ್) ದಾಳಿ ಮಾಡಿ ವಾಪಾಸಾಗಿವೆ ಎಂದು ಮೋದಿ ಸರ್ಕಾರ ಮಾಧ್ಯಮಗಳ ಮೂಲಕ ಹೇಳಿಕೊಂಡದ್ದೇ ತಡ, ಇದು ಉರಿ ದಾಳಿಗೆ ಪ್ರತೀಕಾರವೆಂದು ಸಂಭ್ರಮಿಸಿದ ಸಂಘಿಗಳು ಕೇಕೆ ಹಾಕಿ ಕುಣಿದಾಡತೊಡಗಿದ್ದಾರೆ. ಐವತ್ತಾರಿಂಚಿನ ಎದೆಯ ಪರಾಕ್ರಮವನ್ನು ಹೊಗಳಲಾರಂಭಿಸಿದ್ದಾರೆ. ಭಾರತೀಯ ಸೇನೆಯ ಶೌರ್ಯವನ್ನು ಪರಿಪರಿಯಾಗಿ ಕೊಂಡಾಡುತ್ತಿದ್ದಾರೆ. ಕೇಂದ್ರ ರಕ್ಷಣಾಮಂತ್ರಿಯ ಸ್ಥಾನದಲ್ಲಿರುವ ವ್ಯಕ್ತಿ ಸೇನೆಯನ್ನು ಹನುಮಂತನಿಗೆ ಹೋಲಿಸುತ್ತಾನೆಂದರೆ ಇವರ ಅತಿರೇಕದ ಮಟ್ಟ ಎಷ್ಟಿದೆ ಎಂದು ಊಹಿಸಬಹುದು! ಬಾಂಗ್ಲಾ ದೇಶದ ವಿಮೋಚನೆ ಬಗ್ಗೆ ಅನಗತ್ಯ ಮಾತುಗಳನ್ನಾಡಿರುವ ಈ ಸಡಿಲು ನಾಲಿಗೆಯ ಮಂತ್ರಿಗೆ ಪ್ರಚೋದನಾಕಾರಿ ಹೇಳಿಕೆಗಳ ಗೀಳು ಅಂಟಿಕೊಂಡಿರುವಂತಿದೆ.

ಇಲ್ಲಿ ಒಂದು ವಿಷಯವನ್ನು ಹೇಳಬೇಕಾಗಿದೆ. ಯಾವುದೇ ಸರ್ವಾಧಿಕಾರಿ ಅಥವಾ ಫ್ಯಾಸಿಸ್ಟ್ ಪ್ರಭುತ್ವಕ್ಕೆ ತನ್ನ ಉಳಿವಿಗೋಸ್ಕರ ಸೇನಾಪಡೆಗಳ ಮೇಲೆ ಸಂಪೂರ್ಣವಾಗಿ ಹೊಂದಿಕೊಳ್ಳಬೇಕಾದ ಅನಿವಾರ್ಯತೆ ಇರುವುದರಿಂದಲೆ ಅಂಥಲ್ಲಿ ಸೇನಾಪಡೆಗಳಿಗೆ ಅತಿಯಾದ ಮಹತ್ವವನ್ನು ನೀಡಲಾಗುತ್ತದೆ ಮತ್ತು ಅತಿಯಾದ ವೈಭವೀಕರಣ ನಡೆಯುತ್ತದೆ. ಉಗ್ರರ ದಾಳಿಗಳಲ್ಲಿ ಸಾವನ್ನಪ್ಪುವ ಯೋಧರು ನಿಜಕ್ಕೂ ವಂದನೆಗೆ ಪಾತ್ರರು. ಆದರೂ ಅವರನ್ನು ಹುತಾತ್ಮರೆಂದು ಕರೆಯುವುದರಿಂದ ಹುತಾತ್ಮ ಶಬ್ದ ಅದರ ನಿಜವಾದ ಅರ್ಥವನ್ನು ಕಳೆದುಕೊಳ್ಳುತ್ತದೆ ಎಂಬುದನ್ನು ನಾವು ಗಮನಿಸಬೇಕು. ಇರಲಿ.

ಈಗ ಸೆಪ್ಟಂಬರ್ 29ರ ದಾಳಿಯಲ್ಲಿ ಗಮನಾರ್ಹ ಸಂಖ್ಯೆಯ ಉಗ್ರರು ಹಾಗೂ ಅವರನ್ನು ಬೆಂಬಲಿಸಲು ಯತ್ನಿಸುವವರು ತೀವ್ರವಾಗಿ ಗಾಯಗೊಂಡಿದ್ದಾರೆ ಅಥವಾ ಸತ್ತಿದ್ದಾರೆ ಎಂದು ಭಾರತೀಯ ಸೇನೆ ಹೇಳುತ್ತಿದೆ. ಭಾರತದ ದೇಶಭಕ್ತ ದೃಶ್ಯ ಮತ್ತು ಮುದ್ರಣ ಮಾಧ್ಯಮಗಳ ಪ್ರತಿಪಾದನೆಗಳನ್ನು ನಂಬುವುದಾದರೆ ಭಾರತೀಯ ಸೇನೆಯ ನಿರ್ದಿಷ್ಟ ದಾಳಿ ಕಾರ್ಯಾಚರಣೆ ಉರಿ ದಾಳಿಗೆ ಪ್ರತೀಕಾರವಾಗಿತ್ತು; ಇದರಿಂದ ಪಾಕಿಸ್ತಾನದ ಸೇನೆಗೆ ತಕ್ಕ ಶಾಸ್ತಿ ಆಗಿದ್ದು ಅದೀಗ ಪ್ರತಿದಾಳಿ ಮಾಡದಂತಾಗಿದೆ. ಆದರೆ ಭಾರತೀಯ ಸೇನೆಯ ಹೇಳಿಕೆಯನ್ನು ತಳ್ಳಿಹಾಕಿರುವ ಪಾಕಿಸ್ತಾನ, ಭಾರತದ ಸೇನಾಪಡೆಗಳು ನಿಯಂತ್ರಣ ರೇಖೆ ದಾಟಿಲ್ಲ; ತಮ್ಮ ನೆಲೆಗಳಿಂದಲೆ ನಡೆಸಿದ ಗುಂಡಿನ ದಾಳಿಯಲ್ಲಿ ಇಬ್ಬರು ಪಾಕ್ ಯೋಧರು ಹತರಾಗಿ 9 ಮಂದಿ ಗಾಯಾಳುಗಳಾಗಿದ್ದಾರೆಂದು ವಾದಿಸುತ್ತಿದೆ. ಪಾಕಿಸ್ತಾನದ ಐಎಸ್‌ಪಿಆರ್ (Inter Services Public Relations) ಸಂಸ್ಥೆ ಹೊರಡಿಸಿದ ಪ್ರಕಟಣೆಯನ್ನು ಆಧರಿಸಿದ ಪಾಕಿಸ್ತಾನಿ ಮಾಧ್ಯಮಗಳೂ ಇದನ್ನೆ ಹೇಳುತ್ತಿವೆ. ಇನ್ನು ಪಾಕಿಸ್ತಾನ ಸೆರೆಹಿಡಿದ ಭಾರತೀಯ ಯೋಧನ ಬಗ್ಗೆ ಎರಡೂ ದೇಶಗಳು ಚಿತ್ರವಿಚಿತ್ರ ಹೇಳಿಕೆಗಳನ್ನು ನೀಡುತ್ತಿವೆ. ಹೀಗಿರುವಾಗ ಅತ್ತ ಸೆಪ್ಟಂಬರ್ 29ರ ಘಟನೆಗೆ ಸಂಬಂಧಿಸಿದಂತೆ ನಿಯಂತ್ರಣ ರೇಖೆಯಲ್ಲಿ ಯಾವುದೇ ಗುಂಡಿನ ಚಕಮಕಿಗಳು ನಡೆದಿರುವುದನ್ನು ಭಾರತ, ಪಾಕಿಸ್ತಾನಗಳಲ್ಲಿರುವ ವಿಶ್ವಸಂಸ್ಥೆಯ ಮಿಲಿಟರಿ ವೀಕ್ಷಕರ ತಂಡ ಪ್ರತ್ಯಕ್ಷವಾಗಿ ವೀಕ್ಷಿಸಿಲ್ಲವೆಂದು ವಿಶ್ವಸಂಸ್ಥೆಯ ಕಾರ್ಯದರ್ಶಿಯ ವಕ್ತಾರರು ಹೇಳುತ್ತಿದ್ದಾರೆ!

ವಾಸ್ತವದಲ್ಲಿ ಈ ಹಿಂದಿನ ಯುಪಿಎ ಸರ್ಕಾರದ ಪ್ರತಿಕ್ರಿಯೆಗೂ ಮೋದಿ ಸರ್ಕಾರಕ್ಕೂ ವಿಶೇಷ ವ್ಯತ್ಯಾಸಗಳೇನೂ ಇಲ್ಲ. ಅಂದು ನಮ್ಮ ಬಹುತೇಕ ಟಿವಿ ಮತ್ತು ಸಾಮಾಜಿಕ ಜಾಲತಾಣಗಳು ವಿರೋಧ ಪಕ್ಷಗಳನ್ನು ಬೆಂಬಲಿಸುತ್ತ ದುರ್ಬಲ ಪ್ರತಿಕ್ರಿಯೆಗಾಗಿ ಆಳುವ ಸರಕಾರವನ್ನು ತರಾಟೆಗೆ ತೆಗೆದುಕೊಳ್ಳುತ್ತಿದ್ದವು. ಆದರೆ ಈ ಬಾರಿ ಮಾಧ್ಯಮಗಳ ಪ್ರತಿಕ್ರಿಯೆ ತೀರ ಭಿನ್ನವಾಗಿರುವುದನ್ನು ಗಮನಿಸಬಹುದು. ಮೋದಿ ಕಳೆದ ಡಿಸೆಂಬರ್‌ನಲ್ಲಿ ಅನಿರೀಕ್ಷಿತವಾಗಿ ಲಾಹೋರಿಗೆ ತೆರಳಿ ನವಾಜ್ ಷರೀಫ್‌ನನ್ನು ಭೇಟಿಯಾದಾಗ, ಬಟ್ಟೆಬರೆ ಮೊದಲಾದ ಗಿಫ್ಟ್‌ಗಳ ವಿನಿಮಯ ನಡೆದಾಗ, ಪಾಕಿಸ್ತಾನದ ತನಿಖಾ ತಂಡಕ್ಕೆ ಪಠಾಣ್‌ಕೋಟ್ ಭೇಟಿಗೆ ಅನುಮತಿಯಿತ್ತಾಗ ಆಗಬೇಕಾದಷ್ಟು ವಿಶ್ಲೇಷಣೆಗಳು ಆಗಲಿಲ್ಲ, ಬದಲು ಮೆಚ್ಚುಗೆ, ಸಮರ್ಥನೆಗಳು ವ್ಯಕ್ತವಾಗಿದ್ದವು. ಅದೇ ಮೋದಿ ಜಾಗದಲ್ಲಿ ಸಿಂಗ್ ಇದ್ದಿದ್ದರೆ ಟೀಕೆಗಳ ಸುರಿಮಳೆ ಆಗುತ್ತಿದ್ದುದು ನಿಶ್ಚಿತ.

ಇವತ್ತು ಮೋದಿ ಸರ್ಕಾರವನ್ನು, ಸಂಘ ಪರಿವಾರವನ್ನು ಟೀಕಿಸುವ ಮಾಧ್ಯಮಗಳ ಸಂಖ್ಯೆ ತೀರಾ ಕಡಿಮೆಯಾಗಿದ್ದು ಆ ಟೀಕೆಗಳು ಕೂಡ ತುಂಬಾ ಕ್ಷೀಣಧ್ವನಿಯಲ್ಲಿರುವುದು ಎದ್ದುಕಾಣುವಂತಿದೆ. ಕಾರಣ ಬಹಳ ಸ್ಪಷ್ಟವಿದೆ: ಮೋದಿ ಸರ್ಕಾರ ಅಧಿಕಾರ ವಹಿಸಿಕೊಂಡ ನಂತರದಲ್ಲಿ ಸಾಮಾಜಿಕ, ಸಾಂಸ್ಕೃತಿಕ ವಲಯಗಳಲ್ಲಿ ಆಗುತ್ತಿರುವಂತೆ ಮಾಧ್ಯಮಗಳಲ್ಲಿಯೂ ವ್ಯವಸ್ಥಿತ ಕೇಸರೀಕರಣ ನಡೆದಿದೆ. ಇದರೊಂದಿಗೆ ಜಾಹೀರಾತುಗಳ ಆಯುಧವೂ ಇರುವುದರಿಂದ ಬಹುತೇಕ ಮಾಧ್ಯಮಗಳು ಮೋದಿ ಸರ್ಕಾರದ ವಕ್ತಾರರಂತಾಗಿವೆ. ಹೊಗಳುವಿಕೆ, ಮುಖಸ್ತುತಿಗಳೂ ಜಾಸ್ತಿಯಾಗಿವೆ ಎನ್ನಬಹುದು.

ಗುಜರಾತ್ ಹತ್ಯಾಕಾಂಡದ ಬಗ್ಗೆ, ನಕಲಿ ಎನ್‌ಕೌಂಟರ್‌ಗಳ ಬಗ್ಗೆ, ಆರೆಸ್ಸೆಸ್‌ನ ಅನೈತಿಕ ಚಟುವಟಿಕೆಗಳ ಬಗ್ಗೆ ತನಿಖಾ ವರದಿಗಳನ್ನು ಪ್ರಕಟಿಸಿದ ಇಂಗ್ಲಿಷ್ ನಿಯತಕಾಲಿಕಗಳ ಸಂಪಾದಕರು ಕೆಲಸ ಕಳೆದುಕೊಂಡಿರುವುದಷ್ಟೇ ಅಲ್ಲ ಅವುಗಳ ನಿಲುವು ಕೂಡ ಈಗ ಹೆಚ್ಚುಕಡಿಮೆ 180 ಡಿಗ್ರಿ ಬದಲಾಗಿರುವುದನ್ನು ಕಾಣಬಹುದು. ಕೇಸರೀಕರಣದ ವೇಗವನ್ನು ನೋಡುವಾಗ ಮಾಧ್ಯಮಗಳು ಸಂಪೂರ್ಣ ನಿಯಂತ್ರಣಕ್ಕೊಳಪಡುವ ದಿನಗಳು ದೂರವಿಲ್ಲವೆಂದೆ ಅನಿಸುತ್ತದೆ. ಹಿಟ್ಲರನ ಆಡಳಿತದಲ್ಲಿ ಜರ್ಮನಿಯಲ್ಲಿ ಆದದ್ದೂ ಇದೇ.


ಮೋದಿ ಸರ್ಕಾರ ಬಿಂಬಿಸಲೆತ್ನಿಸುತ್ತಿರುವಂತೆ ಸೆಪ್ಟಂಬರ್ 29ರಂದು ನಡೆದುದೆನ್ನಲಾದ ಸರ್ಜಿಕಲ್ ದಾಳಿ ಇದೇ ಮೊದಲ ಬಾರಿಗೆ ಆಗಿರುವುದಲ್ಲ. ಇಂತಹ ಅನೇಕ ದಾಳಿಗಳು ಈ ಹಿಂದೆಯೂ– ಅಂದರೆ 2014ರ ಮೇ ತಿಂಗಳಿಗೂ ಹಿಂದೆ – ನಡೆದಿವೆ. ಆದರೆ ಇಂತಹ ಗುಪ್ತ ಕಾರ್ಯಾಚರಣೆಗಳನ್ನು ರಹಸ್ಯವಾಗಿ ಇಡಲಾಗುತ್ತಿತ್ತು; ಅದನ್ನೆಲ್ಲ ಸಾರ್ವಜನಿಕವಾಗಿ ಬಹಿರಂಗಪಡಿಸಲಾಗುತ್ತಿರಲಿಲ್ಲ. ವಾಸ್ತವವಾಗಿ 1990ರ ದಶಕದಿಂದ ಪ್ರಾರಂಭವಾಗಿರುವ ಇಂತಹ ನಿರ್ದಿಷ್ಟ ದಾಳಿಗಳು 2003ರ ತನಕ ನಿರಂತರವಾಗಿ ನಡೆದಿವೆ; 2003ರಲ್ಲಾದ ಕದನವಿರಾಮದಿಂದಾಗಿ ಸ್ಥಗಿತಗೊಂಡ ಬಳಿಕ 2008ರಿಂದ ಪುನರಾರಂಭಗೊಂಡಿವೆ. ಆದರೆ ಈ ಬಾರಿಯ ದಾಳಿಗಳಿಗೆ ಭಾರಿ ಪ್ರಚಾರ ನೀಡುತ್ತಿರುವುದರ ಹಿಂದೆ ಬಹುಶಃ ಮೂರು ಉದ್ದೇಶಗಳಿರಬಹುದು. ಒಂದು ಮೋದಿಯ ಸ್ವಪ್ರತಿಷ್ಠೆಯನ್ನು ಉಳಿಸಿಕೊಳ್ಳುವುದು. ಎರಡು, ದೇಶಭಕ್ತರ ಪ್ರತೀಕಾರದ ಕೂಗನ್ನು ಮನ್ನಿಸುವುದು. ಮೂರು, ಜನರ ಗಮನವನ್ನು ಆಂತರಿಕ ಸಮಸ್ಯೆಗಳಿಂದ ಆಚೆ ಸೆಳೆಯುವುದು.

ಮೂಲಗಳ ಪ್ರಕಾರ ಪಾಕ್ ಆಕ್ರಮಿತ ಕಾಶ್ಮೀರದಲ್ಲಿ ನಿಯಂತ್ರಣ ರೇಖೆಗೆ ಸಮೀಪವಾಗಿ ಅಂದರೆ ಅರ್ಧದಿಂದ ಒಂದು ಕಿಮೀ ದೂರದಲ್ಲಿ ಸುಮಾರು 12 ಉಗ್ರರ ಕಟ್ಟೆಗಳಿವೆ. ಕಟ್ಟೆಗಳು ಎಂದರೆ ಸಣ್ಣಪುಟ್ಟ ಬಾಡಿಗೆ ಮನೆಗಳು. ಇವುಗಳಲ್ಲಿ ಒಬ್ಬ ಅಥವಾ ಇಬ್ಬರು ಉಗ್ರರು ಸದಾಕಾಲ ಇರುತ್ತಾರೆ. ಭಾರತಕ್ಕೆ ನುಸುಳಲಿರುವ ತಂಡವನ್ನು ದೂರದ ಶಿಬಿರಗಳಲ್ಲಿ ಅಣಿಗೊಳಿಸಿದ ನಂತರ ಅವರನ್ನೆಲ್ಲ ಮೊದಲು ಈ ಕಟ್ಟೆಗಳಿಗೆ ರವಾನಿಸಲಾಗುತ್ತದೆ. ಮುಂದೆ ಇಲ್ಲಿಂದ ಅವರನ್ನು ಭಾರತದೊಳಗೆ ಕಳುಹಿಸಲಾಗುತ್ತದೆ. ಭಾರತೀಯ ಸೇನೆಯ ಸೆಪ್ಟಂಬರ್ 29ರ ಕಾರ್ಯಾಚರಣೆ ನಡೆದಿರುವುದು ಇಂತಹ 7 ಅಥವಾ 8 ಕಟ್ಟೆಗಳ ಮೇಲೆ ಎನ್ನಲಾಗುತ್ತಿದೆ. ದಾಳಿಯಲ್ಲಿ 3 ಕಟ್ಟೆಗಳು ಸಂಪೂರ್ಣವಾಗಿ ಧ್ವಂಸಗೊಂಡಿವೆ ಎನ್ನಲಾಗಿದೆ. ಇಲ್ಲಿ ಗಮನಿಸಬೇಕಾದ ಅಂಶವೆಂದರೆ ಪಾಕಿಸ್ತಾನದಲ್ಲಿ ವಿಶೇಷ ತರಬೇತು ಪಡೆಯುತ್ತಿರುವ ದೊಡ್ಡ ಸಂಖ್ಯೆಯ ಉಗ್ರಗಾಮಿಗಳೆಲ್ಲಾ ಇರುವುದು ನಿಯಂತ್ರಣ ರೇಖೆಯಿಂದ ತುಂಬಾ ದೂರದಲ್ಲಿರುವ ತರಬೇತಿ ಶಿಬಿರಗಳಲ್ಲಿ; ಇಂತಹ ಕಟ್ಟೆಗಳಲ್ಲಿ ಅಲ್ಲ. ಹೀಗಾಗಿ ಭಾರತೀಯ ಸೇನೆಯ ತಥಾಕಥಿತ ದಾಳಿಯಲ್ಲಿ ಭಾರತದೊಳಕ್ಕೆ ನುಸುಳಲಿದ್ದ ಕೆಲವು ಉಗ್ರರು ಹತರಾಗಿರಬಹುದಾದರೂ ಇದರಿಂದಾಗಿ ಲಷ್ಕರ್ ಎ ತೋಯ್ಬಾ, ಜೈಶ್ ಎ ಮೊಹಮ್ಮದ್ ಇತ್ಯಾದಿಗಳ ಸಾಮರ್ಥ್ಯಕ್ಕೆ ಗಮನಾರ್ಹ ಧಕ್ಕೆಯಾಗಲಾರದು.

ಸೆಪ್ಟಂಬರ್ 18ರ ಉರಿ ದಾಳಿಯ ಬಳಿಕ 'ಈ ಹಲ್ಲಿಗೆ ಪ್ರತಿಯಾಗಿ ದವಡೆಯನ್ನೆ ಮುರಿಯಬೇಕು' ಎಂದು ಒಕ್ಕೊರಲಲ್ಲಿ ಬೊಬ್ಬಿರಿದ ದೇಶಭಕ್ತರೆಲ್ಲ ಪಾಕಿಸ್ತಾನಕ್ಕೆ ತಿರುಗೇಟು ನೀಡುವ ಬಗ್ಗೆ ಚರ್ಚೆ ನಡೆಸುತ್ತಿದ್ದರೆ ಅತ್ತ ಅಮೆರಿಕ ಸರ್ಕಾರ ಪಾಕಿಸ್ತಾನದೊಂದಿಗೆ ಸೇನಾ ಸಹಕಾರ ಬಲಪಡಿಸಲು ಮಾರ್ಗೋಪಾಯಗಳನ್ನು ಅರಸುತ್ತಿದೆ. ಸೆಪ್ಟಂಬರ್ 19ರಂದು ಅಮೆರಿಕದ ವಿದೇಶಾಂಗ ಕಾರ್ಯದರ್ಶಿ ಜಾನ್ ಕೆರಿ ಪಾಕಿಸ್ತಾನಕ್ಕೆ ತೆರಳಿ ಪ್ರಧಾನಿ ನವಾಜ್ ಷರೀಫ್ ಜೊತೆ ಮಾತುಕತೆ ನಡೆಸುತ್ತಾನೆ. ಸೆಪ್ಟಂಬರ್ 21ರಂದು ರಾವಲ್ಪಿಂಡಿಯಲ್ಲಿ ನಡೆದ 'ಅಮೆರಿಕ–ಪಾಕಿಸ್ತಾನ ರಕ್ಷಣಾ ಸಲಹೆ ಗುಂಪಿ'ನ ಸಭೆಯಲ್ಲಿ ಭಾಗವಹಿಸುತ್ತಾನೆ. ಸಭೆಯ ನಂತರ ನೀಡಲಾದ ಜಂಟಿ ಹೇಳಿಕೆಯಲ್ಲಿ ಉಭಯ ದೇಶಗಳ ದ್ವಿಪಕ್ಷೀಯ ಸಂಬಂಧಗಳಲ್ಲಿ ಭದ್ರತಾ ಸಹಭಾಗಿತ್ವ ಒಪ್ಪಂದದ್ದೆ ಪ್ರಧಾನ ಪಾತ್ರವೆಂದು ಹೇಳಲಾಗಿದೆ.

ಒಪ್ಪಂದದನ್ವಯ ಎರಡೂ ದೇಶಗಳು ತಮ್ಮ ನಡುವಿನ ಸದೃಢ ರಕ್ಷಣಾ ಸಂಬಂಧವನ್ನು ಭವಿಷ್ಯತ್ತಿನಲ್ಲೂ ಮುಂದುವರಿಸುವುದಕ್ಕೆ ಬದ್ಧವಾಗಿವೆ. ಇದೆಲ್ಲ ನೀಡುವ ಸಮಗ್ರ ಚಿತ್ರಣ ಏನೆಂದರೆ ಪಾಕಿಸ್ತಾನ ಜೊತೆಗಿನ ವಿಶಿಷ್ಟ ಮಿಲಿಟರಿ ಸಂಬಂಧಗಳಿಗೆ ಅಮೆರಿಕ ಈಗಲೂ ಬಹಳ ಮಹತ್ವ ನೀಡುತ್ತಿದೆ. ಅದು ತನ್ನ ಅಫಘಾನಿಸ್ತಾನದೊಳಗಿನ ಕಾರ್ಯಾಚರಣೆಗಳಿಗೆ ಇಂದಿಗೂ ಪೂರ್ತಿಯಾಗಿ ಪಾಕಿಸ್ತಾನದ ಮೇಲೆ ಹೊಂದಿಕೊಂಡಿದೆ. ಕೊನೆಯದಾಗಿ ಭಯೋತ್ಪಾದನಾ ವಿರೋಧಿ ಚಟುವಟಿಕೆಗಳು, ಪ್ರಾದೇಶಿಕ ಸ್ಥಿರತೆ ಮತ್ತು ಇತರ ಭದ್ರತಾ ಸಹಕಾರದ ಕ್ಷೇತ್ರಗಳು ತಮ್ಮೆರಡು ದೇಶಗಳ ಸಮಾನ ಗುರಿ ಎನ್ನುವ ಜಂಟಿ ಹೇಳಿಕೆ, "ಯಾವುದೇ ದೇಶದ ನೆಲವನ್ನು ಬಳಸಿ ಇತರ ದೇಶಗಳನ್ನು ಅಸ್ಥಿರಗೊಳಿಸುವುದು ಸಲ್ಲದು" ಎಂದೂ ಉಪದೇಶಿಸುತ್ತದೆ! ಇದೆಲ್ಲ ತೀರ ಹಾಸ್ಯಾಸ್ಪದವಾಗಿದೆ ಎಂದೆ ಹೇಳಬೇಕಾಗುತ್ತದೆ.

ಪಾಕಿಸ್ತಾನವನ್ನು ಅಂತಾರಾಷ್ಟ್ರೀಯವಾಗಿ ಪ್ರತ್ಯೇಕಗೊಳಿಸುವೆನೆಂದು ಮೋದಿ ಶಪಥ ಮಾಡಿದ ಹೊರತಾಗಿಯೂ



ಅಮೆರಿಕದ ಪೆಂಟಗನ್ ಪಾಕಿಸ್ತಾನದೊಂದಿಗಿನ
ವ್ಯವಹಾರಗಳನ್ನು ಎಂದಿನಂತೆ ಮುಂದುವರಿಸಿದೆ.
ಭಾರತ ಮತ್ತು ಅಮೆರಿಕ ನಡುವಿನ ನಿಕಟ ಸಹ
ಒಪ್ಪಂದ, ಪೆಂಟಗನ್‌ನ ಮುಖ್ಯಸ್ಥ ಆಷ್ಟನ್ ಕಾ
ಭಾರತದ ಬಗ್ಗೆ ಇರುವ ಸ್ನೇಹದ ಭಾವನೆ, ಸೇನಾ
ಚಲನವಲನಗಳ ಕುರಿತಂತೆ ಉಭಯ ದೇಶಗಳ
ಆಗಿರುವ ಲಾಜಿಸ್ಟಿಕ್ಸ್ ಒಪ್ಪಂದ ಮುಂತಾದವ
ಏನೂ ಬೆಲೆ ಇಲ್ಲ ಎಂದಲ್ಲವೆ?

ಸಾಲದುದಕ್ಕೆ ಬಲೂಚಿಸ್ತಾನದ ವ್ಯವಹಾ
ಭಾರತದ ಹಸ್ತಕ್ಷೇಪದ ವಿಚಾರವನ್ನು ವಿಶ್ವಸಂಸ್ಥೆಯ
ಮಂಡಳಿಯಲ್ಲಿ ಎತ್ತಲಾಗುವುದೆಂಬ ವರ್ತಮಾ
ಎಂದರೆ ಬಲೂಚಿಸ್ತಾನ ಕುರಿತ ಮೋದಿಯ ಮಾ
ಅಮೆರಿಕಕ್ಕೆ ರುಚಿಸಿಲ್ಲವೆಂದೆ ಅರ್ಥ. ಒಬಾಮನನ್ನು
ಎಂದು ಸಂಬೋಧಿಸುವ ಮೂಲಕ ಅಮೆರಿಕ
ನಿಕಟವಾಗಿರುವಂತೆ ತೋರ್ಪಡಿಸಿದ್ದು, ಮ
ಗಾರ್ಡನ್‌ನಲ್ಲಿ ನಡೆಸಿದ ಮನರಂಜನಾ ಪ
ಮುಂತಾದುವೆಲ್ಲ ದೊಡ್ಡ ಡ್ರಾಮಾ ಎಂದು
ಈಗಲಾದರೂ ಅರ್ಥವಾಗಬೇಕು.

ಇಷ್ಟೆಲ್ಲ ಆದ ಬಳಿಕ ಪ್ರಶ್ನೆ ಏನೆಂದರೆ ಸೆ
29ರ ತಥಾಕಥಿತ ನಿರ್ದಿಷ್ಟ ದಾಳಿಗಳ ನಂತರದಲ್ಲಿ
ಉಗ್ರರ ದಾಳಿಗಳು ಕಮ್ಮಿಯಾಗಲಿವೆಯೇ?
ತೋರುತ್ತದೆ. ಪಾಕಿಸ್ತಾನದಲ್ಲಿರುವ ಉಗ್ರಗಾಮಿ ಸಂಘ
ಉರಿ ಮಾದರಿಯ ಮತ್ತೊಂದು ದಾಳಿ ನಡೆಸ
ಭಾರತೀಯ ನಗರಗಳ ಮೇಲೆ ದಾಳಿ ಮಾಡಬ
ಅನ್ಯದೇಶಗಳಲ್ಲಿರುವ ಭಾರತೀಯ ಗುರಿಗಳ ಮೇ
ಮಾಡಬಹುದು. ಹಾಗಾದರೆ ನಿರ್ದಿಷ್ಟ ದಾ
ಇಷ್ಟೊಂದು ಪ್ರಚಾರ ಕೊಟ್ಟಿರುವುದರ
ಏನಿರಬಹುದು?

ಈಗಾಗಲೆ ಹೇಳಿರುವಂತೆ ಮೋದಿಯ ಐವತ್ತ
ಎದೆಯ ಪುನಃಶ್ಚೇತನ, ದೇಶಭಕ್ತರ ಮನಃತೃಪ್ತಿ
ಜನರ ಗಮನವನ್ನು ಸಾಮಾಜಿಕ, ಆರ್ಥಿಕ ರಂ
ಆಗಿರುವ ವೈಫಲ್ಯಗಳಿಂದ ಬೇರೆಡೆಗೆ ತಿರುಗಿಸು
ಇಟಲಿ, ಜರ್ಮನಿಗಳ ಫ್ಯಾಸಿಸ್ಟ್ ಪ್ರಭುತ್ವಗಳೂ ಹೆ
ಇದೇ ತಂತ್ರಗಾರಿಕೆ ಬಳಸಿದುದನ್ನು ನೆನಪಿಸಿಕೊಳ್ಳಬ
ವಾಸ್ತವದಲ್ಲಿ ನಿರ್ದಿಷ್ಟ ದಾಳಿ, ಸಿಂಧೂ ನದಿ
ಬಳಕೆಯ ಮರುಪರಿಶೀಲನೆ, ಪಾಕಿಸ್ತಾನದ 'ಅತ್ಯಧಿಕ
ಪಡೆದಿರುವ ರಾಷ್ಟ್ರ' ಸ್ಥಾನಮಾನದ ರದ್ದತಿ ಮ
ವಿಷಯಗಳನ್ನು ಉದ್ದೇಶಪೂರ್ವಕವಾಗಿ ಮಾಧ್ಯ
ಸೋರಿಕೆ ಮಾಡಿರುವುದರ ಹಿಂದೆ ದೇ
ಯುದ್ಧೋನ್ಮಾದದ ವಾತಾವರಣವನ್ನು ಸೃಷ್ಟಿಸುವ
ಇರುವಂತೆ ತೋರುತ್ತಿದೆ. ಗಮನಾರ್ಹವಾಗಿ ಈ
ಸರ್ಕಾರದ ಸೂಚನೆಯಂತೆ ಪಂಜಾಬ್
ಗಡಿರೇಖೆಯಿಂದ 10 ಕಿಮೀ ದೂರದೊಳಗಿನ
ಸುಮಾರು 15 ಲಕ್ಷ ಜನ ಗುಳೇ ಹೋಗಲಾರಂಭ
ಸದ್ಯೋಭವಿಷ್ಯದಲ್ಲಿ ಉಭಯ ದೇಶಗಳ ನ
ವಾತಾವರಣ ಇನ್ನಷ್ಟು ಬಿಗುವಾಗಲಿದ್ದು ಶಾಂತಿ, ಸ
ಮಾತುಕತೆಗಳು ಮರೀಚಿಕೆಯಾಗಲಿವೆ ಎಂದೆ ಆ

ಅಂತಿಮವಾಗಿ ಒಂದು ಮುಖ್ಯ ವಿಷಯ
ಒಂದು ಕಡೆ ಅಮೆರಿಕ, ಇಸ್ರೇಲ್‌ಗಳ ಶಸ್ತ್ರಾಸ್ತ್ರ ಉದ್ಯ
ನಿರಂತರ ಮಾರುಕಟ್ಟೆಯ ಅವಶ್ಯಕತೆ ಇರುವಾಗ ಇ
ಕಡೆ ಭಾರತ, ಪಾಕಿಸ್ತಾನದಂತಹ ಸಂಘರ್ಷಗಳು
ಉಗ್ರರ ದಾಳಿಗಳು ವಿಶ್ವಾದ್ಯಂತ ನಡೆಯುತ್ತಲೇ ಇ
ಒಂದಕ್ಕೊಂದು ಪೂರಕವಾದ ಬೆಳವಣಿಗೆಗ
ಆದುದರಿಂದಲೆ ಅಮೆರಿಕ ತನ್ನ 'ಭಯೋತ್ಪಾದನೆ
ಸಮರ'ವನ್ನು ಘೋಷಿಸಿದ ನಂತರ ವಿಶ್ವದಲ್ಲಿ ಉಗ್ರ
ಚಟುವಟಿಕೆಗಳು ಮೊದಲಿಗಿಂತಲೂ ಹೆಚ್ಚಾಗಿರು
ಕಾಕತಾಳೀಯ ಎನ್ನಲಾಗುವುದಿಲ್ಲ.

ಹಳದಿ ಕಣ್ಣೊಳಗೆ ಟಿಪ್ಪು



ಆಗ ಆತನ ಮಕ್ಕಳು ಬ್ರಿಟಿಷರ ವಶದಲ್ಲಿದ್ದರು. ಣದ ಅಧಿಕಾರಿ ವರ್ಗವು ರಾಜ್ಯದಲ್ಲಿ ಮದ್ಯಪಾನ ರಾಟವನ್ನು ಆರಂಭಿಸಿ ಅದರಿಂದ ಬರುವಂತಹ ಯದಿಂದ ಆತನ ಮಕ್ಕಳನ್ನು ಬ್ರಿಟಿಷರ ವಶದಿಂದ ಸಿಕೊಳ್ಳುವಂತೆ ಸಲಹೆ ನೀಡಿದರು. ಆದರೆ ಆತ "ನನ್ನ ಳು ಬ್ರಿಟಿಷರ ವಶದಲ್ಲೇ ಇದ್ದರೂ ಚಿಂತೆಯಿಲ್ಲ, ದ್ಯಪಾನ ನಿಷೇಧ ಕಾನೂನನ್ನು ಮಾತ್ರ ಪಡೆಯುವುದಿಲ್ಲ. ನನ್ನ ರಾಜ್ಯದಲ್ಲಿ ಪ್ರಜೆಗಳು ನಮತ್ತರಾಗಿ ಅರೆಪ್ರಜ್ಞಾ ವ್ಯವಸ್ಥೆಯಲ್ಲಿರುವುದು ನನಗೆ ವಿಲ್ಲ. ಅದು ನನಗೆ ಗೌರವ ತಂದುಕೊಡುವುದಿಲ್ಲ. ಪ್ರಜ್ಞಾ ವ್ಯವಸ್ಥೆಯಲ್ಲಿರುವ ಪ್ರಜೆಗಳನ್ನು ಆಳುವ ನಾನು ಗೆ ಶ್ರೇಷ್ಠ ದೊರೆಯಾಗುತ್ತೇನೆ?" ಎಂದನು.

ಈ ಮಾತನ್ನು ಹೇಳಿದ ಏಕೈಕ ದೊರೆ ಹಜರತ್ ಪ್ಪು ಸುಲ್ತಾನ್. ಮಲಬಾರ್ ಪ್ರದೇಶದ ಕೆಳವರ್ಗದ ಹಿಳೆಯರು ತಮ್ಮ ಎದೆ ಮುಚ್ಚಿಕೊಳ್ಳಬಾರದು ಎಂಬ ನೂನನ್ನು ರದ್ದು ಮಾಡಿ, ಅಲ್ಲಿನ ಮಹಿಳೆಯರನ್ನು ಜದ ಉಗ್ರ ಶೋಷಣೆಯಿಂದ ಮೇಲೆತ್ತಿ ಅವರಿಗೆ ರವ ನೀಡಿದವನು. ಇಂತಹ ಮಾನವತಾವಾದಿ ಇಂದು ಾಂಧರ ಕಣ್ಣಿನೊಳಗೆ ದ್ರೋಹಿಯಾಗಿ ಕಾಣುತ್ತಿರುವುದು ಕ್ಕೂ ವಿಷಾದವೇ ಸರಿ.

ಪ್ರಸ್ತುತ ಸಂದರ್ಭದಲ್ಲಿ ಟಿಪ್ಪು ಹಿಂದೂಗಳ ವಿರೋಧಿ ದು ಬಿಂಬಿಸಲಾಗುತ್ತಿದೆ. ಆದರೆ ಅದು ಅಕ್ಷರಶಃ ಸುಳ್ಳು. ದರೆ, ಟಿಪ್ಪು ಸಾಮಾಜಿಕ ಮೌಢ್ಯ ವೈದಿಕ ಕಟ್ಟಳೆಗಳ ೋಧಿ. ಇದಕ್ಕೆ ಪುರಸ್ಕಾರ ನೀಡುವ ಬ್ರಾಹ್ಮಣ ವ್ಯವಸ್ಥೆ ನನ್ನು ದ್ರೋಹಿ ಎಂದು ಬಿಂಬಿಸುತ್ತಿದೆ. ಟಿಪ್ಪು ಕೇರಳದ ಯರ್‌ಗಳು, ಮಂಗಳೂರಿನ ಕ್ರಿಶ್ಚಿಯನ್ನರನ್ನು, ಕೊಡಗಿನ ವರನ್ನು ಹಿಂಸಿಸಿದ್ದಾನೆ ಎಂದು ಹೇಳಲಾಗುತ್ತಿದೆ, ಅದು ಕೂಡ! ಆದರೆ ಅದಕ್ಕೆ ಕಾರಣವಿದೆ. ಈ ಮೂರು ಗಳೂ ಅಂದು ಬ್ರಿಟಿಷರಿಗೆ ಸಹಾಯ ಮಾಡುತ್ತಿದ್ದರು. ಲ್ಲದೆ ಅವರು ಬ್ರಿಟಿಷ್ ಸೈನ್ಯದಲ್ಲಿಯೂ ಸಕ್ರಿಯ ಕರಾಗಿದ್ದರು. ಕೆನರಾದ ಕ್ರಿಶ್ಚಿಯನ್ನರು 1783ರಲ್ಲಿ ರಂಭವಾದ ಮೈಸೂರು ಯುದ್ಧದಲ್ಲಿ ಬ್ರಿಟಿಷರಿಗೆ ಸಹಾಯ ಡುತ್ತಿದ್ದರು. ಅಲ್ಲದೆ ಅಂದಿನ ಮಂಗಳೂರಿನ ಕ್ರಿಶ್ಚಿಯನ್ನರು ಸೂರು ರಾಜ್ಯದಿಂದ ಹೊರಗಿನವರು. ಹಾಗಾಗಿ ಟಿಪ್ಪು ರ ಮೇಲೆ ದಾಳಿ ಮಾಡಿದ್ದ. ಒಂದು ಕಾಲದಲ್ಲಿ ಗ್ಲಾ ಮತ್ತು ಪಾಕಿಸ್ತಾನವೂ ಭಾರತವಾಗಿತ್ತು, ಈಗಲೂ ಅವರನ್ನು ಭಾರತೀಯರು ಎಂದು ಹೇಳಲು ಸಾಧ್ಯವೇ? ದೆ ಟಿಪ್ಪು ಹಿಂದೂ ಧರ್ಮದೊಳಗಿರುವ ಪರಿಶಿಷ್ಟ ಹಿಂದುಳಿದ ಯಾವ ವರ್ಗದ ಪಂಗಡ ಮತ್ತು ಹಿಂದುಳಿದ ಯಾವ ವರ್ಗದ ಲೆ ದಾಳಿ ಮಾಡಿದ್ದಾನೆ? ಇವರೆಲ್ಲ ಹಿಂದೂಗಳಲ್ಲವಾ? ಹ್ಮಣರು ತಮ್ಮ ಮೇಲೆ ದೌರ್ಜನ್ಯ ನಡೆದರೆ ಮಾತ್ರ ದೂ ಎಂಬ ಶಬ್ದವನ್ನು ಮುಂದಿಡುತ್ತಾರೆ. ಅಲ್ಲದಿದ್ದರೆ, ತರನ್ನು ಅವಮಾನಿಸಿ ಅವರ ಮೇಲೆ ದೌರ್ಜನ್ಯ ಮಾಡಿದ ಶ್ವಗಳನ್ನು ಏಕೆ ಇವರು ದ್ರೋಹಿಗಳೆಂದು ಗಣಿಸುವುದಿಲ್ಲ?

ಟಿಪ್ಪು ಕನ್ನಡ ವಿರೋಧಿ ಎಂದು ಕೆಲವು ವಾದಿಗಳು ದಾಖಲೆಗಳಿಲ್ಲದೆ ಕನ್ನಡಿಗರನ್ನು ಆತನ ದ್ಧ ಎತ್ತಿಕಟ್ಟುತ್ತಿದ್ದಾರೆ. ಪರ್ಷಿಯನ್ ಭಾಷೆಯನ್ನು ಕೃತ ಭಾಷೆಯೆಂದು ಘೋಷಿಸಿದವರಲ್ಲಿ ಟಿಪ್ಪು ದಲಿಗನಲ್ಲ, ಎಲ್ಲೆಲ್ಲಿ ಮುಸ್ಲಿಮರು ರಾಜ್ಯಗಳನ್ನು ಸಿದ್ದರೋ ಅಲ್ಲೆಲ್ಲಾ ಪರ್ಷಿಯನ್ ಅಧಿಕೃತ ಷೆಯಾಗಿತ್ತು, ಆ ಮೂಲಕ ರಾಜ್ಯರಾಜ್ಯಗಳ ನಡುವೆ ವಹಾರ ನಡೆಯುತ್ತಿತ್ತು, ಅಲ್ಲದೇ ಶೃಂಗೇರಿ ಮಠಕ್ಕೆ ದ ಪತ್ರಗಳೆಲ್ಲ ಕನ್ನಡದಲ್ಲಿರುವುದು ಟಿಪ್ಪುವಿನ ಕನ್ನಡ ಷದ ಕಳಂಕವನ್ನು ಅಳ್ಳಗಳೆಯುತ್ತದೆ. ಅಂದು ರಾಜ ಯೇ ಆಸ್ಥಾನ ಭಾಷೆಯಾಗುತ್ತಿತ್ತು, ಅದೇ ಸರ್ಕಾರದ ಷೆ ಆಗುತ್ತಿತ್ತು, ಅದೇ ರಾಜ್ಯದ ಭಾಷೆ ಆಗುತ್ತಿತ್ತು, ನ್ನು ಯಾರೂ ಪ್ರಶ್ನಿಸುವಂತಿರಲಿಲ್ಲ, ಅದ್ದರಿಂದಲೇ ಲ್ಲ ಹಿಂದುಗೆ ಉರ್ದು ವಿನಲ್ಲಿ, ಹಿಂದುಗೆ ಕನ್ನಡದಲ್ಲಿ, ದುಗೆ ಪರ್ಷಿಯನ್ ಭಾಷೆಯಲ್ಲಿ ಪತ್ರ ವ್ಯವಹಾರ ಡಿರುವುದು.

ಹಾಗೆ ನೋಡಿದರೆ ಕೃಷ್ಣದೇವರಾಯನ ಮನೆ ಮಾತು ತೆಲುಗು ಆಗಿತ್ತಂತೆ, ಆಚಾರ್ಯ ಪುರುಷ ಪಂಜೆ ಮಂಗೇಶರಾಯರ ಮನೆ ಮಾತು ಕೊಂಕಣಿ ಆಗಿತ್ತಂತೆ, ಕವಿ ಗೋವಿಂದ ಪೈ, ಬೆನಗಲ್ ರಾಮರಾಯ, ಮಾಸ್ತಿ ಹೀಗೆ ಇವರೆಲ್ಲರ ಮನೆ ಮಾತು ಕನ್ನಡೇತರ ಭಾಷೆಗಳಂತೆ. ಹಾಗಾದರೆ ಇವರನ್ನೆಲ್ಲ ಕನ್ನಡ ದ್ರೋಹಿಗಳು ಎನ್ನಲು ಆದೀತೇ? ಟಿಪ್ಪು ಸುಲ್ತಾನನಿಗೆ ಬ್ರಿಟಿಷರನ್ನು ದೇಶದಿಂದ ಹೊರಗೆ ಓಡಿಸುವುದಷ್ಟೇ ಗುರಿಯಾಗಿತ್ತೇ ಹೊರತು ಅವನ ದೃಷ್ಟಿಯಲ್ಲಿ ಭಾಷೆ, ಧರ್ಮ, ಜಾತಿ, ಮತ-ಭೇದ ಇರಲಿಲ್ಲ. ಧರ್ಮದ ವಿಷಯದಲ್ಲಂತೂ ಈ ಸುಲ್ತಾನನ ವಂಶದಲ್ಲಿಯೇ ಸ್ವ-ಪರಗಳ ತಾರತಮ್ಯ ಇರಲಿಲ್ಲ. ಹೇಗೆಂದರೆ, ಆತನ ವೈರಿಗಳು ಹಿಂದೂಗಳು ಮಾತ್ರವಲ್ಲದೇ, ಸ್ವ-ಧರ್ಮೀಯರೇ ಆಗಿರಲಿ ಅವರನ್ನು ಸಹ ಆತ ಕ್ರೂರವಾಗಿಯೇ ಶಿಕ್ಷೆಗೊಳಪಡಿಸಿದ್ದ.

ಟಿಪ್ಪುವನ್ನು ಕೇವಲ ಶೇ. 3ರಷ್ಟಿರುವ ಬ್ರಾಹ್ಮಣರು ದ್ವೇಷಿಸಿದರೆ ಆತನನ್ನು ಈ ದೇಶದಲ್ಲಿ ದ್ರೋಹಿಯಾಗಿ ಬಿಂಬಿಸಲು ಸಾಧ್ಯವಿಲ್ಲ. ಹಾಗಾಗಿ ಹಲವಾರು ಷಡ್ಯಂತ್ರಗಳನ್ನು ನಡೆಸಿ ಟಿಪ್ಪು ಸುಲ್ತಾನನ ವಿರುದ್ಧ ಕರ್ನಾಟಕದ ಜನತೆ, ಕನ್ನಡಪರ ಸಂಘಟನೆಗಳು ಹಾಗೂ ಹಿಂದೂ ಧರ್ಮದೊಳಗಿನ ಬಹುಸಂಖ್ಯೆಯಲ್ಲಿರುವ ಹಿಂದುಳಿದ ಮತ್ತು ಕೆಳವರ್ಗದ ಜನರನ್ನು ಎತ್ತಿಕಟ್ಟಿ ಹಿಂದೂ ದ್ರೋಹಿ, ಕನ್ನಡ ದ್ರೋಹಿ ಎಂದು ಭಾಷೆಗೂ ಧರ್ಮಕ್ಕೂ ಆತನನ್ನು ತಳುಕು ಹಾಕುವ ಕುತಂತ್ರ ಮಾಡುತ್ತಿದ್ದಾರೆ. ಏಕೆಂದರೆ ಆತನ ಕೃಷಿ ಸುಧಾರಣೆಗಳನ್ನು ಮೆಚ್ಚಿ ಈ ರಾಜ್ಯದ ರೈತರು, ಆತನ ಸಾಮಾಜಿಕ ಸುಧಾರಣೆಗಳಿಂದ ಮುಕ್ತಿ ಪಡೆದ ದಲಿತರು ಟಿಪ್ಪು ಸುಲ್ತಾನ ಎಂಬ ಮುಸ್ಲಿಂ ದೊರೆಯ



ಆರಾಧಕರಾಗಿಬಿಟ್ಟರೆ ಹಿಂದೂತ್ವಕ್ಕೆ ಹಿಂದೂ ಸಂಪ್ರದಾಯವಾದಿಗಳಿಗೆ ಶ್ರೇಷ್ಠತೆಯ ದರ್ಜೆ ಕ್ಷೀಣವಾಗುತ್ತದೆ ಎಂಬ ಕಾರಣಕ್ಕೆ ಸಂಘಪರಿವಾರ ಈ ಪಿತೂರಿ ಮಾಡುತ್ತಿದೆ.


ಟಿಪ್ಪು ಸುಲ್ತಾನನು ಹಿಂದೂಗಳನ್ನು ಮತಾಂತರ ಮಾಡಿದನು ಎಂದು ಆತನನ್ನು ಹಿಂದೂ ವಿರೋಧಿ ಎಂದು ಪರಿಗಣಿಸಲು ಸಾಧ್ಯವಿಲ್ಲ. ಅಂದಿನ ಎಲ್ಲಾ ರಾಜರೂ ತಮ್ಮ ಸೆರೆಗೆ ಸಿಕ್ಕ ಎಲ್ಲರನ್ನೂ ಸಹ ಮತಾಂತರ ಮಾಡುತ್ತಿದ್ದರು. ಅಲ್ಲದೆ ಟಿಪ್ಪು ಮತಾಂತರದ ಶಿಕ್ಷೆಯನ್ನು ಜಾರಿ ಮಾಡಿದ್ದು ಕೇವಲ ತನ್ನ ಶತ್ರು ರಾಷ್ಟ್ರಗಳಲ್ಲಿ ಮಾತ್ರ. ಇದು ಧಾರ್ಮಿಕ ಕಾರಣವಲ್ಲ, ರಾಜಕೀಯ ಕಾರಣವೆನ್ನುವುದನ್ನು ನಾವು ಅರ್ಥಮಾಡಿಕೊಳ್ಳಬೇಕು. 'ಅಂದಿನ ಕಾಲದಲ್ಲಿ ತಮ್ಮ ಶತ್ರುಗಳಿಗೆ ಗೆದ್ದ ರಾಜ-ನವಾಬರು ಕ್ರೂರ ಶಿಕ್ಷೆಗಳನ್ನು ನೀಡುತ್ತಿದ್ದರು ಮತ್ತು ಅಂತಹ ಶಿಕ್ಷೆಗಳಲ್ಲಿ ಮತಾಂತರವೂ ಒಂದು ಬಗೆಯ ಶಿಕ್ಷೆಯಾಗಿದ್ದಿತು' ಎಂದು ಇತಿಹಾಸಕಾರರೇ ಹೇಳಿದ್ದಾರೆ.

ನಿಮಗೆ ಒಂದು ಘಟನೆಯನ್ನು ಹೇಳುವುದಾದರೆ; ಟಿಪ್ಪುವಿನ ಮರಣಾನಂತರ ಐದು ವರ್ಷ ವಯಸ್ಸಿನ ಒಡೆಯರ್ ಬಾಲಕ ಸಿಂಹಾಸನವನ್ನೇರುತ್ತಾರೆ. ಅದರ ಮಾರನೇ ದಿನವೇ ಟಿಪ್ಪುವಿನ ಆಸ್ಥಾನದಲ್ಲಿ ಇದ್ದ ಪೂರ್ಣಯ್ಯನೆಂಬ ಹಿಂದೂ ಬ್ರಾಹ್ಮಣ ದಿವಾನನಾಗುತ್ತಾನೆ. ಒಮ್ಮೆ ವೆಂಕಟಾದ್ರಿ ನಾಯಕನೆಂಬ ಪಾಳೇಗಾರನನ್ನು ಬಂಧಿಸಿದಾಗ ಕರ್ನಲ್ ವೆಲ್ಲೆಸ್ಲಿಯು ಅವನನ್ನು ಯುದ್ಧ ಕೈದಿಯೆಂದು ಪರಿಗಣಿಸುವಂತೆ ಸಲಹೆ ನೀಡುತ್ತಾನೆ. ಆದರೆ ಇತರರಿಗೆ ಎಚ್ಚರ ನೀಡಬೇಕೆಂಬ ದೃಷ್ಟಿಯಿಂದ ಪೂರ್ಣಯ್ಯ ಅವನನ್ನು ಗಲ್ಲಿಗೇರಿಸಿದ. ಹಾಗಾದರೆ ಹಿಂದೂ ವೆಂಕಟಾದ್ರಿ ನಾಯಕನೆಂಬ ಪಾಳೇಗಾರನನ್ನು ಗಲ್ಲಿಗೇರಿಸಿದ ಪೂರ್ಣಯ್ಯ ಯಾರು? ಅಲ್ಲದೆ ದಿವಾನಗಿರಿಯನ್ನು ವಂಶಪಾರಂಪರ್ಯವಾಗಿ ಮುಂದುವರೆಸಬೇಕೆಂಬ ದುರಾಸೆಯನ್ನು ಸಹ ಪೂರ್ಣಯ್ಯ ಹೊಂದಿದ್ದನು. ಇವನ ಆ ನಿಲುವಿಗೆ ಬ್ರಿಟಿಷರ ಬೆಂಬಲವಿರಲಿಲ್ಲ.

ಅಂದು ಶ್ರೀವೈಷ್ಣವ ಬ್ರಾಹ್ಮಣರು ಸುತ್ತ-ಮುತ್ತಲಿನ ರೈತಾಪಿಯಿಂದ 60 ಸಾವಿರ ಪಗೋಡಗಳಷ್ಟು ಆದಾಯವನ್ನು ವಸೂಲಿ ಮಾಡುತ್ತಿದ್ದರು. ಆದರೆ ಟಿಪ್ಪು ಅದನ್ನು ಸಾವಿರ ಪಗೋಡಗಳಿಗೆ ಇಳಿಸಿದನು. ಹಾಗೆಯೇ ಒಡೆಯರ ಕಾಲದಲ್ಲಿ ನಂಜನಗೂಡಿನ ಕೇವಲ 300 ಬ್ರಾಹ್ಮಣ ಕುಟುಂಬಗಳು 14 ಸಾವಿರ ಪಗೋಡಗಳಷ್ಟು ಆದಾಯವನ್ನು ರೈತರಿಂದ ವಸೂಲಿ ಮಾಡುತ್ತಿದ್ದರು. ಆದರೆ ಟಿಪ್ಪುವಿನ ಕಾಲದಲ್ಲಿ ಅದನ್ನು ಕ್ರಮೇಣ 100 ಪಗೋಡಗಳಿಗೆ ಇಳಿಸಲಾಯಿತು. ಅಲ್ಲದೆ ಟಿಪ್ಪುವಿನ ಅಧಿಕಾರಾವಧಿಯಲ್ಲಿ ಗುಪ್ತವಾಗಿ ಕಂದಾಯ ವ್ಯವಹಾರಗಳನ್ನು ನೋಡುತ್ತಿದ್ದ ಬ್ರಾಹ್ಮಣರು ಎಲ್ಲಾ ತಾಲ್ಲೂಕುಗಳನ್ನು ಸುಲಿಗೆ ಮಾಡಿ ಅರ್ಧ ಆದಾಯ ತಾವಿಟ್ಟುಕೊಂಡು ಉಳಿದರ್ಧವನ್ನು ಅಧಿಕಾರಿಗಳಿಗೆ ತಲುಪಿಸುತ್ತಿದ್ದರು. ಇಂತಹ ಅನೇಕ ದ್ರೋಹ ಬಗೆದ ಹಿಂದೂ ಬ್ರಾಹ್ಮಣರು ಟಿಪ್ಪುವನ್ನು ಹೇಗೆ ದ್ರೋಹಿ ಎನ್ನುತ್ತಾರೆ?

ಟಿಪ್ಪು ಒಬ್ಬ ಏಕ ಪತ್ನಿ ವ್ರತಸ್ಥ ಮಹಿಳೆಯರನ್ನು ಅಪಾರ ಗೌರವದಿಂದ ಕಾಣುತ್ತಿದ್ದ, ಅಲ್ಲದೇ ಮಾನವೀಯ ಮೌಲ್ಯಗಳನ್ನು ಹೊಂದಿರುವ ಸುಸಂಸ್ಕೃತ ವ್ಯಕ್ತಿ. ಏಕೆಂದರೆ, ಯಾರು ಸತ್ತರೇನು ನನ್ನ ರಾಜ್ಯ ಮತ್ತು ಅಧಿಕಾರ ಉಳಿದರಷ್ಟೇ ಸಾಕು ಎಂಬುವವರ ನಡುವೆ, ಈತ ತನ್ನ ಸೈನ್ಯದಲ್ಲಿದ್ದ ಸೈನಿಕರು ಒಂದು ವೇಳೆ ಯುದ್ಧ ಮಾಡುವ ಸಂದರ್ಭದಲ್ಲಿ ಮಡಿದರೆ, ಅವನ ಕುಟುಂಬದ ಒಬ್ಬ ಸದಸ್ಯರಿಗೆ ಅವನ ಸೈನ್ಯದಲ್ಲಿ ಅನುಕಂಪದ ಆಧಾರದ ಮೇಲೆ ನೌಕರಿಗೆ ಅವಕಾಶ ಮಾಡಿಕೊಡುತ್ತಿದ್ದನು. ಅಲ್ಲದೇ ಆತನ ಕುಟುಂಬಕ್ಕೆ ಜೀವನ ನಿರ್ವಹಣೆಗಾಗಿ ಕೃಷಿಭೂಮಿಯನ್ನು ಸಹ ನೀಡುತ್ತಿದ್ದನು. ಇಂತಹ ವ್ಯಕ್ತಿಯನ್ನು ಜಾತಿ, ಧರ್ಮ, ಭಾಷೆಗಳ ನಡುವೆ ನಿಲ್ಲಿಸಿ ಅವಮಾನಿಸುವುದು ನಮ್ಮ ವ್ಯಕ್ತಿತ್ವಕ್ಕೆ ನಾವು ಮಾಡಿಕೊಂಡ ಅಪಮಾನವಲ್ಲದೇ ಬೇರೇನು ಅಲ್ಲ.

ನಿಜವಾಗಿಯೂ ಭಾರತದಲ್ಲಿ ಇತಿಹಾಸದುದ್ದಕ್ಕೂ ನಡೆದಿರುವ ಪ್ರಮುಖ ಸಂಘರ್ಷಗಳೆಂದರೆ ಬ್ರಾಹ್ಮಣ-ಮುಸ್ಲಿಮರ, ಬ್ರಾಹ್ಮಣ-ದಲಿತರ, ಬ್ರಾಹ್ಮಣ-ಹಿಂದುಳಿದವರ ನಡುವಿನ ತಿಕ್ಕಾಟ. ಈ ತಿಕ್ಕಾಟವನ್ನು ಕಾಲಕಾಲಕ್ಕೆ ಈ ಬ್ರಾಹ್ಮಣ ವರ್ಗ ಧರ್ಮದ ಹೆಸರಿನಲ್ಲಿ, ಜಾತಿಯ ಹೆಸರಿನಲ್ಲಿ, ರಾಷ್ಟ್ರೀಯತೆಯ ಹೆಸರಿನಲ್ಲಿ ಬಿಂಬಿಸಿ ತಮ್ಮ ಬೇಳೆ ಬೇಯಿಸಿಕೊಳ್ಳುತ್ತಿದ್ದಾರೆ. ಏಕೆಂದರೆ, ಇದೇ ಬ್ರಾಹ್ಮಣ ವರ್ಗ ತಮಗೆ ದಕ್ಷಿಣೆ ನೀಡದ, ತಮ್ಮ ದೇವಾಲಯಗಳಿಗೆ, ತಮ್ಮ ಪೌರೋಹಿತ್ಯಕ್ಕೆ ಹೆಚ್ಚಿನ ಪ್ರಾಶಸ್ತ್ಯ ನೀಡದ ಅರಸರ ವಿರುದ್ಧ ಹೋರಾಟ ಮಾಡಿದ್ದಾರೆ. ಆದರೆ, ಹಿಂದುಳಿದವರಿಗೆ ಸೈನ್ಯದಲ್ಲಿ ಅವಕಾಶ ನೀಡದ ರಾಜರ ವಿರುದ್ಧ ದಲಿತರಿಗೆ ಊರೊಳಗೆ ಪ್ರವೇಶ ನೀಡದ ಅರಸರ ವಿರುದ್ಧ ಎಂದೂ ಬಾಯಿ ಬಿಟ್ಟಿಲ್ಲ, ಅಲ್ಲದೆ ಪ್ರತಿ ಗ್ರಾಮಗಳಲ್ಲಿ ರೈತರನ್ನು ಕಂದಾಯದ ವಿಚಾರದಲ್ಲಿ ಹಿಂಡಿ ಹಿಪ್ಪೆಮಾಡುತ್ತಿದ್ದ ಶ್ಯಾನುಭೋಗರ,



ಪಾಳೇಗಾರರ ವಿರುದ್ಧ ಇವರು ಇತಿಹಾಸದಲ್ಲಿ ಎಲ್ಲೂ ಸಮರ ಸಾರಿಲ್ಲ, ದೀನ-ದಲಿತರಿಂದ ಬಿಟ್ಟಿ ಚಾಕರಿ (ದುಡಿಮೆ) ಮಾಡಿಸಿಕೊಳ್ಳುತ್ತಿದ್ದ ಜಮೀನ್ದಾರರ ವಿರುದ್ಧ ಪ್ರತಿಭಟಿಸಿಲ್ಲ. ಹಾಗಾಗಿ, ಇಲ್ಲೇ ತಿಳಿಯುತ್ತದೆ ಇವರು ಯಾರ ಪರವಾಗಿ ಕೆಲಸ ಮಾಡುತ್ತಿದ್ದಾರೆ ಎಂಬುದು. ಏಕೆಂದರೆ, ಬ್ರಾಹ್ಮಣರ, ಸಂಘಪರಿವಾರದವರ ಚಳವಳಿ ಅದು ಜನರ ಅನ್ಯಾಯದ ವಿರುದ್ಧವಾಗಿ ನಡೆದದ್ದಲ್ಲ, ಅದು ಅವರ ಅನುಕೂಲಕ್ಕಾಗಿ ನಡೆದ ಚಳವಳಿ.

ಇಂದಿಗೂ ಸಹ ಸಹೋದರರಂತೆ ಬದುಕುತ್ತಿರುವ ಹಿಂದೂ-ಮುಸ್ಲಿಮರ ನಡುವೆ ಸಂಘಪರಿವಾರ ಹಾಗೂ ಮೂಲಭೂತವಾದಿಗಳು ಕಾಲದಿಂದಲೂ ಅರ್ಥವಿಲ್ಲದ ದ್ವಂದ್ವಗಳನ್ನು ಸೃಷ್ಟಿಮಾಡುತ್ತಾ, ಅದರ ಮೂಲಕ ಪರಸ್ಪರ ದ್ವೇಷ ಬೆಳೆಸಿ ತಮ್ಮ ಸಂಘಟನೆಗಳನ್ನು (ಕೋಮುವಾದ) ಗಟ್ಟಿಮಾಡುತ್ತಲೇ ಬಂದಿದ್ದಾರೆ. ಈ ಘರ್ಷಣೆಯು ಶಮನವಾಗಿ ನಾವು ಮತ್ತೆ ಐಕ್ಯತೆಯಿಂದ ಬದುಕಬೇಕಾದರೆ ನೈಜ ಇತಿಹಾಸವನ್ನೇ ಓದಬೇಕಾಗಿದೆ. ಆ ಮೂಲಕ ಮೂರನೆಯವರ ಮಾತು ಕೇಳಿ ತಳ-ಬುಡ ತಿಳಿಯದೆ, ನಮಗೆ ಸಹಾಯ ಮಾಡಿದವರ, ನಮಗಾಗಿ ದುಡಿದ ವ್ಯಕ್ತಿಗಳ ವಿರುದ್ಧ ನಾವೇ ಹೋರಾಟ ಮಾಡಿ, ಅವರ ಗೌರವಕ್ಕೆ ಧಕ್ಕೆ ತರುವಂತಹ ಕೆಲಸ ಮಾಡುವುದನ್ನು ನಿಲ್ಲಿಸಬೇಕಿದೆ.

ಕೊನೆಯದಾಗಿ ಬ್ರಿಟಿಷರು ಹೇಳಿದಂತೆ ಹೇಳುವುದಾದರೆ; ಟಿಪ್ಪು ಸತ್ತ 3ನೇ ದಿನಕ್ಕೆ ಶ್ರೀರಂಗಪಟ್ಟಣದಲ್ಲಿ ಧಾರಾಕಾರ ಮಳೆಯಂತೆ; ಕೋಟೆಯೊಳಗಿನ ರಕ್ತದೋಕುಳಿಯನ್ನು ತೊಳೆದುಹಾಕುವ ರೀತಿಯಲ್ಲಿ ಮುಂಗಾರು ಧಾರಾಕಾರವಾಗಿ ಸುರಿಯಿತಂತೆ, 'ಅಂದು ದೈವವೇ ಶೋಕಿಸಿತು!' ಎಂದಿದ್ದಾರೆ. ಒಂದುವೇಳೆ ಈ ಕೋಮುವಾದಿಗಳಿಗೆ ಈ ಪಾಯಿಂಟ್ ಸಿಕ್ಕಿದ್ದರೆ, 'ನೋಡಿ ಟಿಪ್ಪು ದೇಶದ್ರೋಹಿ ಅದಕ್ಕೆ ಅವನ ರಕ್ತ ಪವಿತ್ರ ಭೂಮಿಯ ಮೇಲೆ ಹೆಚ್ಚು ದಿನ ಇರಬಾರದೆಂದು ಮಳೆ ಕೊಚ್ಚಿಕೊಂಡು ಹೋಗಿ ಶ್ರೀರಂಗಪಟ್ಟಣವನ್ನು ಶುದ್ಧೀಕರಿಸಿದೆ' ಎಂದು ಹೇಳುತ್ತಿದ್ದರೇನೊ ಎನಿಸುತ್ತದೆ. ಹಳದಿ ಕಣ್ಣಿಗೆ ಕಂಡಿದ್ದೆಲ್ಲ ಹಳದಿಯಲ್ಲವೇ?!

■ ಮಹೇಶ ಬಿ ಇರಸವಾಡಿ

---

10 ⏮

ಇಷ್ಟಾದ ನಂತರವೂ ರೈ ಹಠಮಾರಿ ಮಕ್ಕಳಿಗೆ ಚಾಕಲೇಟ್ ಕೊಟ್ಟಂತೆ ಮತ್ತೆ ಚಾನಲ್ಲಿಗೆ ಫೋನ್ ಮಾಡಿ "ಆಯ್ತು ಬಿಡ್ರೀ... ನಂದೇ ತಪ್ಪಾಯ್ತು ಕ್ಷಮೆ ಕೇಳ್ತೀನಿ..." ಎಂದು ದೊಡ್ಡಸ್ತಿಕೆ ಮೆರೆದಿದ್ದಾರೆ. ಇದು ಬೆಂಕಿ ಹಚ್ಚಬೇಕೆಂದಿದ್ದ ಚಾನಲ್‌ನ ಲೆಕ್ಕಾಚಾರವನ್ನೇ ತಲೆಕೆಳಗಾಗಿಸಿದೆ.

ಒಂದು ಚಾನಲ್ ಏನೆಲ್ಲಾ ಅಧಿಕಪ್ರಸಂಗಿತನ, ಚೇಷ್ಟೆ, ಹುಚ್ಚಾಟ ಮಾಡಬಹುದೆಂಬುದಕ್ಕೆ ಇದೊಂದು ಸ್ಯಾಂಪಲ್ಲಷ್ಟೆ. ಅಷ್ಟಕ್ಕೂ ಜನಶ್ರೀಯಂಥ ಚಾನಲ್ಲೊಂದಕ್ಕೆ ನಮ್ಮವನೇ ಆದ ನಟನೊಬ್ಬನ ವೃತ್ತಿಬದುಕಿನ ಸಮಾಧಿ ಮೇಲೆ ಕೂತೇ ಉಣ್ಣಬೇಕಾದ ದುರ್ಗತಿ ಬಂದಿದ್ದಾದರೂ ಏಕೆಂಬುದಕ್ಕೆ ಒಂದಲ್ಲ ನೂರು ಕಾರಣಗಳಿವೆ. ಪ್ರಕಾಶ್ ರೈ ಇಲ್ಲಿಂದಲೇ ಮೇಲೆದ್ದು ರಾಷ್ಟ್ರ ಮಟ್ಟಕ್ಕೆ ಹಬ್ಬಿದ ಅಪರೂಪದ ಪ್ರತಿಭೆ. ಸೀಮಿತ ಕನ್ನಡ ಚಿತ್ರರಂಗದಿಂದ ಆತ ಪಡೆದದ್ದು ಆತನ ಪ್ರತಿಭೆಗೆ ಇಲ್ಲಿ ಸಿಕ್ಕ ಬೆಲೆ ಅಷ್ಟರಲ್ಲೇ ಇದೆ. ತಮಿಳು ನಿರ್ದೇಶಕ ಬಾಲಚಂದರ್ ಆತನ ಪ್ರತಿಭೆ ಗುರುತಿಸದೇ ಹೋಗಿದ್ದರೆ ಇವತ್ತು ಕಾವೇರಿಗೆ ಜೈ ಕೂಗುವುದೇನು ಗಾಂಧಿನಗರದ ಫುಟ್‌ಪಾತಿನಲ್ಲೇ ಇಸ್ತ್ರಿಕೊಂಡಿರಬೇಕಿತ್ತು. ಆಗ ಯಾವ ಚಾನಲ್ ತಾನೇ ಕಾವೇರಿ ವಿವಾದದ ಪ್ರಶ್ನೆ ಕೇಳುತ್ತಿತ್ತು?

ನಮ್ಮವನೊಬ್ಬ ಎಲ್ಲೋ ಮಿಂಚುತ್ತಿದ್ದರೆ ಅದಕ್ಕೂ ಕಲ್ಲು ಹಾಕಿ ಆತನ ವೃತ್ತಿಬದುಕಿಗೆ ಕೊಳ್ಳಿಯಿಡುವ ಚಾನಲ್ ದಾರ್ಷ್ಟ್ಯವನ್ನು ಮಹಾನ್ ಕನ್ನಡ ನಿಷ್ಠೆ ಎಂದುಕೊಳ್ಳುವುದಾದರೆ, ಇದೇ ಚಾನಲ್ ಅದೆಷ್ಟು ಮಂದಿ ಬಿಜೆಪಿ ಸಂಸದರನ್ನು ಹುಡುಕಿ ಕಾವೇರಿ ದ್ರೋಹದ ಪ್ರಶ್ನೆ ಕೇಳಿದೆ? ಕಾವೇರಿ ಅನ್ಯಾಯದ ಕುರಿತಂತೆ ಸದರಿ ಚಾನಲ್ ತನ್ನ ಮಿತಿಯಲ್ಲಿ ಏನೆಲ್ಲಾ ಹೋರಾಟ ನಡೆದಿದೆ? ಸಿನಿಮಾ ಒಂದರ ಪ್ರಮೋಷನ್‌ನ ನೆಪದಲ್ಲಿ ಕಾವೇರಿ ಕುರಿತು 'ನೀನು ನಿನ್ನ ಕರ್ನಾಟಕ ನಿಷ್ಠೆಗೆ ನಮ್ಮಿಂದ ಸರ್ಟಿಫಿಕೇಟ್ ಪಡೆಯಲೇಬೇಕು' ಎಂದು ಚಟಾಯಿಸಲು ಇದಕ್ಕೆ ಅಧಿಕಾರ ಕೊಟ್ಟವರ್ಯಾರು? ನಾಳೆ ಇದೇ ನೆಪದಲ್ಲಿ ತಮಿಳುನಾಡಿನ ಜನ ರೈ ವಿರುದ್ಧ ಬಹಿಷ್ಕಾರ ಹಾಕಿದರೆಂದರೆ ಅದರ ನಷ್ಟ ಪರಿಹಾರಕ್ಕೆ ಈ ಚಾನಲ್ ಸಿದ್ಧವಿದೆಯೇ? ಹಾಗೆಂದು ಗ್ಯಾರಂಟಿ ಕೊಟ್ಟ ಮೇಲೆ ತಾನೇ ಇಂಥ ಕ್ಯಾತೆಗಿಳಿಯಬೇಕು?

ಸುದ್ದಿಗಾಗಿ ಬರಗೆಟ್ಟ ಚಾನಲ್‌ಗಳು ಸೃಷ್ಟಿಸುವ ನ್ಯೂಸೆನ್ಸ್ ಅಂದರೆ ಇದೇ ತಾನೆ?

■ ರಾ. ಸೋಮನಾಥ್

ನೆಲದ ಸಂಸ್ಕೃತಿಯಾದ ಭೂತಾರಾಧನೆಯನ್ನು ಭ್ರಷ್ಟಗೊಳಿಸಕೂಡದ

ಇದೊಂದು ತಮಾಷೆ ಕಥೆ. ಭೂತಾರಾಧನೆಗೆ ಸಂಬಂಧಿಸಿದ ಒಂದು ವ್ಯಾಟ್ಸ್‌ಆಪ್ ಗ್ರೂಪ್‌ಗೆ ಆತ್ಮೀಯರೊಬ್ಬರು ನನ್ನನ್ನು ಸೇರಿಸಿದ್ದರು. ದಕ್ಷಿಣ ಕನ್ನಡದ ಜನರೇ ಹೆಚ್ಚು ಇರುವ ಗುಂಪು ಅದು. ಈ ಗ್ರಾಮೀಣ ದೈವಾರಾಧನಾ ಸಂಸ್ಕೃತಿ ಯಾವತ್ತೂ ನನ್ನ ಆಸಕ್ತಿಯ ವಿಚಾರವಾಗಿದೆ. ಹಾಗೆಯೇ ಆ ಗುಂಪಿನ ಸದಸ್ಯನಾಗುವುದರಲ್ಲಿ ನನಗೆ ಸಂತೋಷವಿತ್ತು. ಆ ವ್ಯಾಟ್ಸ್‌ಆಪ್ ಗ್ರೂಪ್‌ನ ಒಟ್ಟು ಆಶಯಕ್ಕೆ ನನ್ನ ತಕರಾರು ಏನೂ ಇಲ್ಲ. ಹಲವು ಸದಸ್ಯರು ಸಭ್ಯರು ಮತ್ತು ಮೂಲ ಆಶಯಕ್ಕೆ ಬದ್ಧರಾಗಿದ್ದಾರೆ ಎಂದೇ ನನಗೆ ಅನ್ನಿಸಿತ್ತು. ಈಗಲೂ ಅದೇ ಅಭಿಪ್ರಾಯವಿದೆ.

ಆ ಗುಂಪಿನ ಕೆಲವರು ಹಿಂದೂತ್ವವನ್ನು ಪ್ರತಿಪಾದಿಸುವ ಮತ್ತು ಬಿಜೆಪಿ ಉದ್ದೇಶಗಳನ್ನು ಪ್ರಚಾರ ಮಾಡುವ ಮೆಸ್ಸೇಜ್‌ಗಳನ್ನು ಕಳುಹಿಸುತ್ತಿರುವುದು ಕೆಲವು ದಿನಗಳೊಳಗೆ ನನ್ನ ಗಮನಕ್ಕೆ ಬಂತು. ಗ್ರೂಪ್ ಎಡ್ಮಿನ್ ಈ ಬಗ್ಗೆ ಆಗಾಗ ಆಕ್ಷೇಪಗಳನ್ನು ವ್ಯಕ್ತಪಡಿಸುತ್ತಿದ್ದರೂ ಅವರುಗಳು ಇದು ತಮ್ಮ ಹಕ್ಕು ಎಂಬಂತೆ ನಿರ್ಲಕ್ಷ್ಯ ಧೋರಣೆ ತಾಳಿದ್ದುದು ಕಾಣುತ್ತಿತ್ತು. ನಾನು ಈ ವಿಚಾರದಲ್ಲಿ ಯಾವುದೇ ಅಭಿಪ್ರಾಯ ತಿಳಿಸದೆ ಸುಮ್ಮನಿದ್ದೆ. ಅಂತೂ ಕೊನೆಗೊಂದು ದಿನ ಮೌನ ಮುರಿಯಬೇಕಾಯಿತು.

ಒಬ್ಬ ಸದಸ್ಯ "ಶಂಖದ ರಂಧ್ರವನ್ನು ನಮ್ಮ ಕಿವಿಯ ಸಮೀಪವಿಟ್ಟು ಕೇಳಿದರೆ, ಆದರಿಂದ ಗುಂಯ್.. ಎಂಬ ಶಬ್ದ ಕೇಳಿಸುವುದಿಲ್ಲವೇ..?? ಇದನ್ನೇ ಸಂಶೋಧಕರು, ನ್ಯಾಚುರಲ್ ವೈಬ್ರೇಶನ್ ಅಥವಾ ಭೂಮಿಯ ಕಾಸ್ಮಿಕ್ ಎನರ್ಜಿ ಎಂದು ತಿಳಿಸಿದ್ದಾರೆ.. ಇವು ಯಾವಾಗಲೂ ಶಂಖದಲ್ಲಿ ಪ್ರವಹಿಸುತ್ತಿರುತ್ತವೆಂದು ಅಭಿಪ್ರಾಯಪಟ್ಟಿದ್ದಾರೆ.. ಶಂಖನಾದದಿಂದ ಬರುವ ಕಂಪನ ಭೂಮಿಯಲ್ಲಿರುವ ಅನೇಕ ಕೆಟ್ಟ ಶಕ್ತಿಗಳನ್ನು ನಾಶಪಡಿಸುತ್ತದೆ.. ಪರಿಸರ ಮಾಲಿನ್ಯದಿಂದ ಒಜೋನ್ ಪದರಗಳಲ್ಲಿ ರಂಧ್ರಗಳುಂಟಾಗುವುದು ಸಹಜ... ಶಂಖನಾದದಿಂದ ತಕ್ಕಮಟ್ಟಿಗೆ ಒಜೋನ್ ಪದರಗಳಲ್ಲಿ ರಂಧ್ರಗಳುಂಟಾಗದಂತೆ ತಡೆಯಬಹುದೆಂದು ವಿಜ್ಞಾನಿಗಳು ತಿಳಿಸಿದ್ದಾರೆ.. ಹಾಗೇ ಶಂಖನಾದವನ್ನು ಕೇಳಿದಾಗ ನಮ್ಮ ದೇಹದಲ್ಲಿ ಸಕಾರಾತ್ಮಕ ಶಕ್ತಿಗಳ (**Positive Psychological Vibrations**) ಸಂಚಾರವಾಗುತ್ತದೆ.. ಇದರಿಂದ ಧೈರ್ಯ, ನಿರ್ಣಯ, ನಂಬಿಕೆ, ಆತ್ಮವಿಶ್ವಾಸ ಮುಂತಾದ ಗುಣಗಳು ಜಾಗೃತವಾಗುತ್ತವೆ.. ಶಂಖವನ್ನು ನಿಯಮಿತವಾಗಿ ಊದುವುದರಿಂದ ಶ್ವಾಸಕೋಶಗಳು ಬಲಿಷ್ಟಗೊಳ್ಳುತ್ತವೆ.. ಶ್ವಾಸಸಂಬಂಧಿ ಕಾಯಿಲೆಗಳು ಕಡಿಮೆಯಾಗುತ್ತವೆಂದು ಸಂಶೋಧನೆಗಳಿಂದ ತಿಳಿದು ಬಂದಿದೆ.. ನಮ್ಮ ಸನಾತನ ಸಂಸ್ಕೃತಿಯಲ್ಲಿ ಶಂಖಕ್ಕೆ ಪೂಜ್ಯಸ್ಥಾನವನ್ನು ನೀಡಲಾಗಿದೆ.. ಧಾರ್ಮಿಕ ಕಾರ್ಯಕ್ರಮಗಳನ್ನು ಶಂಖನಾದದ ಮೂಲಕವೇ ಪ್ರಾರಂಭಿಸಲಾಗುತ್ತದೆ.. ಜಗತ್ತಿನ ಪರಿಪಾಲಕನಾದ ಮಹಾವಿಷ್ಣುವಿನ ಕೈಯ್ಯಲ್ಲೂ ಶಂಖವನ್ನು ಕಾಣಬಹುದು.. ಮಹಾಭಾರತ ಯುದ್ಧದಲ್ಲೂ ಯುದ್ಧ ಪ್ರಾರಂಭವಾಗುವಾಗ ಶಂಖನಾದ ಮೊಳಗುತ್ತಿತ್ತು.. ವಿಷ್ಣುವಿನ ಶಂಖದ ಹೆಸರು ಪಾಂಚಜನ್ಯ ಅರ್ಜುನನ ಶಂಖದ ಹೆಸರು ದೇವದತ್ತ ಯುಧಿಷ್ಠಿರನ ಶಂಖದ ಹೆಸರು ಅನಂತವಿಜಯ, ನಕುಲನ ಸುಘೋಷ, ಸಹದೇವನ ಮಣಿಪುಷ್ಪಕ ಶಂಖಗಳನ್ನು ಮಹಾಭಾರತದಲ್ಲಿ ಉಲ್ಲೇಖಿಸಲಾಗಿದೆ.. ಶಂಖಗಳಲ್ಲೂ ಅನೇಕ ವಿಧಗಳಿವೆ.. ಶಂಖಗಳ ಆಕೃತಿಗೆ ಅನುಗುಣವಾಗಿ ಈ ರೀತಿ ವಿಂಗಡಿಸಲಾಗಿದೆ.. ದಕ್ಷಿಣಾವರ್ತಿ ಶಂಖ, ವಾಮವರ್ತಿ ಶಂಖ, ಗೌಮುಖಿ ಶಂಖ, ಗಣೇಶ ಶಂಖ, ಕಾವುರಿ ಶಂಖ, ಮೋತಿ ಶಂಖ, ಹೀರಾಶಂಖ ಮುಂತಾದವುಗಳಾಗಿವೆ.. ಮತ್ತೇಕೆ ತಡ...?? ಶಂಖನಾದದ ಮಹತ್ವವನ್ನು ಅರಿತಿದ್ದಾಯ್ತು. ಬನ್ನಿ.. ಈ ಭೂಮಿಯಲ್ಲಿ ಶಂಖನಾದವನ್ನು ಮೊಳಗಿಸೋಣ.." ಎಂಬ ಮೆಸ್ಸೇಜ್ ಕಳುಹಿಸಿದ.

ನಾನು ತಾಳ್ಮೆ ಕಳೆದುಕೊಂಡೆನೇನೋ, 'ಶಂಖನಾದದಿಂದ ಎಲ್ಲ ಕೆಟ್ಟ ಶಕ್ತಿಗಳು ನಾಶವಾಗುವುದಾದರೆ ಇನ್ನೂ ಬ್ರಾಹ್ಮಣಿಕೆ ಉಳಿದಿದೆಯಲ್ಲ' ಎಂಬ ಪ್ರತಿಕ್ರಿಯೆ ನೀಡಿದೆ. ಎಲ್ಲಿತ್ತೋ ಪ್ಯಾಂಟುಗಳ ಸಿಟ್ಟು. ಎಲ್ಲರೂ ಒಟ್ಟು ಸೇರಿ ನನ್ನ ಮೇಲೆ ಹರಿಹಾಯತೊಡಗಿದರು, ಜೊತೆಗೆ ದೇಶಪ್ರೇಮದ ಉಚಿತ ಬೋಧನೆ ನೀಡಲಾರಂಭಿಸಿದರು. ಆಗ ನಾನು ಕುವೆಂಪು ಕಾವ್ಯದ ಮೊರೆಹೊಗಬೇಕಾಯಿತು.


'ನೂರು ದೇವರನೆಲ್ಲ ನೂಕಾಚೆ ದೂರ,
ಭಾರತಾಂಬೆಯೇ ದೇವಿ ನಮಗಿಂದು ಪೂಜಿಸುವ
ಬಾರಾ ಬಾರಾ॥
ಶತಮಾನಗಳು ಬರಿಯ ಜಡ ಶಿಲೆಯ ಪೂಜಿಸಾಯ್ತು
ಹಾವುಗಳಿಗೆ ಹಾಲೆರೆದು ಪೋಷಿಸಾಯ್ತು
ಬಿಸಿಲು ಮಳೆ ಗಾಳಿ ಬೆಂಕಿಯನೆಲ್ಲ ಬೇಡಿಯಾಯ್ತು
ದಾಸರನು ಪೂಜಿಸಿಯೇ ದಾಸ್ಯವಾಯ್ತು,
ಭಾರತಾಂಬೆಯೇ
ಗುಡಿಯೊಳಗೆ ಕಣ್‌ಮುಚ್ಚಿ ಬೆಚ್ಚಗಿರುವರನೆಲ್ಲ
ಭಕ್ತ ರಕ್ತವ ಹೀರಿ ಕೊಬ್ಬಿಹರನೆಲ್ಲ
ಘಂಟೆ ಜಾಗಟೆಗಳಿನ್ ಬಡಿದು ಕುತ್ತಿಗೆ ಹಿಡಿದು



ಕಡಲಡಿಗೆ ತಳ್ಳಿರೈ ಶಂಖದಿನ್ ನುಡಿದು,
ಭಾರತಾಂಬೆಯೇ
ಸತ್ತ ಕಲ್ಗಳ ಮುಂದೆ ಅತ್ತು ಕರೆದುದು ಸಾಕು
ಜೀವದಾತೆಯನಿಂದು ಕೂಗಬೇಕು
ಶಿಲೆಯ ಮೂರ್ತಿಗೆ ನೇಯ್ದ ಕಲೆಯ ಹೊದಿಕೆಯನು
ಒಯ್ದು
ಚಳಿಯು ಮಳೆಯಲಿ ನೆನೆವ ತಾಯ್ಗೆ ಹಾಕು,
ಭಾರತಾಂಬೆಯೇ"

ಮತ್ತೆ ನಿರರ್ಗಳ ವಾಗ್ದಾಳಿ. ಕುವೆಂಪು ಸಾಹಿತ್ಯದ ಬಳಕೆಯ ಅಗತ್ಯದ ಬಗ್ಗೆ ಅಗ್ಗದ ಮಾತುಗಳು, ಅವೆಲ್ಲ ಈಗ ಔಟ್ ಡೇಟೆಡ್ ಎಂಬ ಹೇಳಿಕೆ, ಇತರ ಧರ್ಮಗಳ ಬಗ್ಗೆ ಟೀಕೆ: ಕೆಲವರದ್ದು ವ್ಯಂಗ್ಯ ಕೆಲವರದ್ದು ಹತಾಶೆ, ಇನ್ನು ಕೆಲವರದ್ದು ಬೆದರಿಕೆಯ ತಂತ್ರ. ಅಲ್ಲೊಬ್ಬ ಇಲ್ಲೊಬ್ಬರದ್ದು ರಾಜಿ ಪ್ರಸ್ತಾಪ. ಒಂದಿಷ್ಟು ದಿನ ಇವರ ಕಸರತ್ತುಗಳನ್ನು ಗಮನಿಸಿ ಕೊನೆಗೊಂದು ಮೆಸ್ಸೇಜ್ ಪೋಸ್ಟ್ ಮಾಡಿ ಸುಮ್ಮನಾದೆ. ಅಲ್ಲಿಗೆ ಯಾಕೋ ವಿಷಯವೂ ಸ್ತಬ್ಧವಾಯಿತು.

ನಿರಂತರವಾಗಿ ಅಪ್ಪಟ ಸುಳ್ಳುಗಳನ್ನು ಹೇಳುತ್ತಾ, ಮೌಢ್ಯವನ್ನು ಪ್ರತಿಪಾದಿಸುತ್ತಾ ಹಿಂದೂ ಧರ್ಮವನ್ನು ತಿಳಿದವರ ಮುಂದೆ, ಇತರ ಧರ್ಮದ ಜನರ ಮುಂದೆ ಅಪಹಾಸ್ಯದ ಸರಕನ್ನಾಗಿಸಿ ತಮ್ಮ ಮುಖಕ್ಕೆ ತಾವೇ



ಉಗಿದುಕೊಳ್ಳುವ ಕೆಲಸದಲ್ಲಿ ತೊಡಗಿಕೊಂಡಿರುವ ಹಿಂದೂತ್ವದ ಪ್ರಯೋಗಶಾಲೆಯ ಜನ ಗಮನಿಸಲಿ ಎಂದು ನನ್ನ ಆ ಕಿರುಲೇಖನವನ್ನು ಇಲ್ಲಿ ಪ್ರಕಟಣೆಗೆ ನೀಡಿದ್ದೇನೆ.

"ಬ್ರಾಹ್ಮಣಿಕೆಯ ವಿಚಾರದಲ್ಲಿ ಈ ಗ್ರೂಪ್‌ನ ವ್ಯಾಪ್ತಿಗೆ ಮೀರಿ ನಾನು ಪ್ರತಿಕ್ರಿಯೆ ನೀಡಿದ್ದೇನೆ ಎಂಬುದು ನಾಲ್ಕಾರು ಮಂದಿಯ ಅನ್ನಿಸಿಕೆ. ಕೆಲವರು ತಮ್ಮ ಪ್ರಶ್ನೆಗಳಿಗೆ ನಾನು ಉತ್ತರಿಸಬೇಕೆಂದು ಒತ್ತಾಯಿಸಿದ್ದಾರೆ. ಒಬ್ಬರಂತೂ ನನ್ನನ್ನು ಹಿಂದೂ ಧರ್ಮದಿಂದ ಹೊರಹಾಕಲು ಸನ್ನದ್ಧರಾಗಿದ್ದಾರೆ! ಇನ್ನೊಬ್ಬರದ್ದು ಸಣ್ಣನೆಯ ಬೆದರಿಕೆ ಸಂದೇಶ; ತನ್ಮೂಲಕ ತಮ್ಮೊಳಗೆ ಅಂತರ್ಗತವಾಗಿರುವ ಕಟುಕತನದ ರಕ್ತಪಿಪಾಸು ಹಲ್ಲುಗಳನ್ನು ಪ್ರದರ್ಶಿಸಿದ್ದಾರೆ ಪಾಪ. ಅಂತೆಯೇ ನನ್ನ ಕೆಲವು ಅಭಿಪ್ರಾಯವನ್ನು ದಾಖಲಿಸಲು ಬಯಸುತ್ತೇನೆ.

ಈ ಗ್ರೂಪ್ ಭೂತಾರಾಧನೆಯ ವಿಚಾರಕ್ಕೆ ಮಾತ್ರ ಸೀಮಿತವಾಗಿರುತ್ತದೆ ಎಂದು ಭಾವಿಸಿದ್ದೆ. ಇದೊಂದು ತಪ್ಪು ತಿಳಿವಳಿಕೆ ಎಂಬುದು ಈಗ ಹೆಚ್ಚು ಸ್ಪಷ್ಟವಾಗಿದೆ. ಇಲ್ಲಿನ ಕೆಲವು ಸದಸ್ಯರು ಪೂರ್ವನಿರ್ಧಾರದ ಮನಃಸ್ಥಿತಿಯ ಭಾರದಲ್ಲಿ ತತ್ತರಿಸುತ್ತಿರುವುದನ್ನು, ರಾಜಕೀಯ ಪಕ್ಷವೊಂದರ ವಕ್ತಾರರಂತೆ ವರ್ತಿಸುತ್ತಿರುವುದನ್ನು ಈ ಹಿಂದೆಯೂ ಗಮನಿಸಿದ್ದೆ.

ಭೂತಾರಾಧನೆ ಈ ನೆಲದ ಅದ್ಭುತ ಸಂಸ್ಕೃತಿ. ಈ ಮಣ್ಣಿನಲ್ಲಿ ಒಂದೊಮ್ಮೆ ಬದುಕಿದ್ದ ತುಳು, ಮಲಯಾಳಂ ಹಾಗೂ ಕನ್ನಡ ಮನೆಮಾತಿನ ವಿವಿಧ ಜಾತಿಗಳಿಗೆ ಸೇರಿದ ನಮ್ಮ ಪೂರ್ವಿಕರು ದೈವತ್ವಕ್ಕೆ ಏರಿ ಅಂದಿನ ಕಾಲಘಟ್ಟದಿಂದ ಇಂದಿನವರೆಗೂ ಆರಾಧಿಸಲ್ಪಡುತ್ತಿದ್ದಾರೆ. ಗ್ರಾಮೀಣ ದೈವಾರಾಧನೆಯ ಪರಂಪರೆ ಇತರ ಪ್ರದೇಶಗಳಿಗೆ ಹೊಸದೇನೂ ಅಲ್ಲದಿದ್ದರೂ, ಜನಪದ ನಾಯಕರ ಆರಾಧನೆಯ ಈ ಅಚ್ಚರಿಯ ಸ್ವರೂಪ ಇಡೀ ಸಮಾಜದ ರೀತಿರಿವಾಜುಗಳನ್ನು ನಿರ್ವಹಿಸುವ ರೀತಿ ಅನನ್ಯವಾದುದಾಗಿದೆ. ವರ್ತುಲಾಕಾರದ ಕಾಲಚಕ್ರದ ಹೊರಳುವಿಕೆಯ ಪರಿಕಲ್ಪನೆಯ ಹಿನ್ನೆಲೆಯಲ್ಲಿ, ಕಳೆದುಹೋದ ವರ್ಷದ ಘಟನೆಗಳ ವಿಮರ್ಶೆ ಮತ್ತು ಮುಂಬರುವ ವರ್ಷದ ನಡವಳಿಕೆಗಳ ನಿಯಂತ್ರಣ ಹೀಗೆ ಎರಡು ಬಗೆಯ ಕ್ರಿಯೆಗಳು ನೇಮ/ಕೋಲ/ಜಾಲಾಟ/ಕಳಿಯಾಟ/ದೈವಂಕಟ್ಟು ಸಮಯದಲ್ಲಿ ತಪ್ಪದೆ ನಡೆಯುತ್ತದೆ. ನ್ಯಾಯದಾನವನ್ನು ಮಾಡುವ ನ್ಯಾಯಾಧೀಶನಾಗಿಯೂ, ಆರೋಗ್ಯವನ್ನು ದಯಪಾಲಿಸುವ ವೈದ್ಯಾಧಿಕಾರಿಯಾಗಿಯೂ ದೈವ ನಮ್ಮ ಸಮಾಜದಲ್ಲಿ ಪ್ರಭಾವಶಾಲಿ ಜವಾಬ್ದಾರಿಯನ್ನು ನಿರ್ವಹಿಸುತ್ತದೆ. ಅದಮ್ಯ ನಂಬಿಕೆಯ ಹಿನ್ನೆಲೆಯಲ್ಲಿ ಈ ಪ್ರಕ್ರಿಯೆಗಳು ನಡೆಯುತ್ತವೆ.

ಸಮಾಜಶಾಸ್ತ್ರೀಯ ಅಧ್ಯಯನಗಳು ಅದಷ್ಟಕ್ಕೇ ಅಂತ್ಯಗೊಳ್ಳುವುದಿಲ್ಲ.

ಭೂತಾರಾಧನೆಯ ಮೂಲವನ್ನು ತಮಿಳು ಸಂಗಂ-ಚೇರ ಕಾಲದಲ್ಲಿ ಹುಡುಕುವ ಪ್ರಯತ್ನವನ್ನು ನಮ್ಮ ಕೆಲವು ವಿದ್ವಾಂಸರು ಮಾಡಿದ್ದಾರೆ; ತನ್ಮೂಲಕ ಇಲ್ಲಿನ ನಲಿಕೆ ಮುಂತಾದ ಕಲಾವಿದ ಸಮುದಾಯಗಳ ಪ್ರಸರಣವನ್ನು ವಿಶ್ಲೇಷಿಸುವ ಪ್ರಯತ್ನವನ್ನು ನಡೆಸಿದ್ದಾರೆ. ಭೂತಾರಾಧನೆ ಈ ನೆಲದ ಮೂಲವನ್ನೇ ಹೊಂದಿದೆ ಎಂಬ ಸ್ಥಳೀಯ ಉಗಮದ ವಾದ ಅತ್ಯಂತ ಪ್ರಬಲವಾಗಿದೆ. ದೈವವಾಗಿ ನೆಲೆಗೊಂಡಿರುವ ಜನಪದ ನಾಯಕರು ಇಲ್ಲಿಯವರೇ ಎಂಬುದು ಈ ವಾದಕ್ಕೆ ಪುಷ್ಟಿ ನೀಡುತ್ತದೆ.

ಭೂತಾರಾಧನೆ ಪರಂಪರೆಯಲ್ಲಿ ಬಹುತೇಕ ಪ್ರತಿಯೊಂದು ದೈವದ ಕಥೆಯೂ ಅವೈದಿಕ ಮೂಲವನ್ನು ಪ್ರತಿಪಾದಿಸುತ್ತದೆ. ವೈದಿಕರ ಆಗಮನಕ್ಕೆ ಮೊದಲೇ ಈ ಸಂಸ್ಕೃತಿ ಇಲ್ಲಿ ದಟ್ಟವಾಗಿ ಬೇರೂರಿತ್ತು ಎಂಬುದು ಸಹ ಒಂದು ಗಟ್ಟಿಯಾದ ತರ್ಕ. ಈ ವಾದ ಸತ್ಯವಿರಲಿ ಅಥವಾ ತಪ್ಪೇ ಇರಲಿ, ಭೂತಾರಾಧನೆಯ ಅವೈದಿಕ ನೆಲೆಗಳನ್ನು ನಾವು ಎಲ್ಲೆಡೆ ನೋಡಬಹುದು. ಧರ್ಮ, ಜಾತಿ, ಜಮೀನ್ದಾರಶಾಹಿ, ಜೀತಪದ್ಧತಿ, ಪ್ರಭುತ್ವ, ಪುರುಷ ಪ್ರಧಾನತೆ ಈ ಎಲ್ಲ ವಿಚಾರಗಳಲ್ಲಿ ನಡೆದಿರುವ ಸಂಘರ್ಷದ ದಟ್ಟ ನೆರಳುಗಳನ್ನು ಇಂದು ಬಹಳಷ್ಟು ಬದಲಾವಣೆ ಕಂಡಿರುವ ದೈವಾರಾಧನೆಯಲ್ಲಿ ಸಹ ಗಮನಿಸಬಹುದು.

ನಾಗಾರಾಧನೆಯ ಕ್ಷೇತ್ರವಾದ ಸುಬ್ರಹ್ಮಣ್ಯದ ಧ್ವಜಸ್ತಂಭವನ್ನು ಜೈನ ಮೂಲದವರೆನ್ನಲಾದ ಕಿನ್ನಿಮಾಣಿ-ಪೂಮಾಣಿ (ಉಳ್ಳಾಕುಲು) ಜೋಡಿದೈವಗಳು ಬಾಣ ಬಿಟ್ಟು ತುಂಡರಿಸುತ್ತಾರೆ. ಜೋಗಿ ಪುರುಷ ಕಂದ್ರಪ್ಪಾಡಿಯ ಬಸದಿಯನ್ನು ಕೆಡವಿ, ನಾಗಾರಾಧಕರ ಶಂಖಪಾಲ ದೇವಸ್ಥಾನವನ್ನು ಮೈಲಿಗೆಗೊಳಿಸಿ (!!!), ಸ್ಥಳೀಯ ಜನಸಾಮಾನ್ಯರ ಆರಾಧ್ಯದೈವವಾದ ರಾಜನ್ ದೈವವನ್ನು ಅಲ್ಲಿ ನೆಲೆಗೊಳಿಸಿ, ಆ ಭಾಗದಲ್ಲಿ ಜೈನ ರಾಜರ ಆಳ್ವಿಕೆಯನ್ನು ಕೊನೆಗೊಳಿಸಿದ ಘಟನೆ 15-16ನೇ ಶತಮಾನದ ಸಮಯದಲ್ಲಿ ನಡೆದಿದೆ. ಈ ಜೋಗಿ ಪುರುಷ ಈಗ ಸುಳ್ಯ ಮಡಿಕೇರಿ ಭಾಗದಲ್ಲಿ ಕಾರಣಿಕೆಯ ಪುರುಷ ದೈವ. ಕಾರ್ಕಳದ ಭೈರವರಸನ ಅನ್ಯಾಯದ ವಿರುದ್ಧ ಸಿಡಿದೆದ್ದು, ಅರಮನೆಯನ್ನು ಸುಟ್ಟುಹಾಕಿ, ಪ್ರಭುತ್ವವನ್ನು ಧಿಕ್ಕರಿಸಿದ ಶಿಲ್ಪಿ ಸಮುದಾಯದ ಕಲ್ಕುರ್ಟಿ-ಕಲ್ಲುಡರ ಕಥೆ ನಮ್ಮ ಮುಂದಿದೆ. ಮಾತೃಪ್ರಧಾನ ವ್ಯವಸ್ಥೆಯಿಂದ ದೂರ ಸರಿದ ಸಮಾಜ ಪುರುಷಪ್ರಧಾನತೆಯ ಕಡೆ ವಾಲಿಕೊಂಡ ಕಾಲಘಟ್ಟದಲ್ಲಿ ಗಂಡಸರ ಸಾಮಾಜಿಕ ಪ್ರಾಬಲ್ಯತೆಯನ್ನು ಪ್ರತಿರೋಧಿಸಿದ ಹೆಣ್ಣು ಸಿರಿ ಇಂದಿಗೂ ತುಳುನಾಡಿನ ನೈತಿಕತೆಯ, ಸ್ತ್ರೀ ಸಮುದಾಯದ ಅಂತಃಸತ್ವದ ಪ್ರತೀಕವಾಗಿ ಸಮಾಜದಲ್ಲಿ ಸ್ಥಾಯಿಯಾಗಿದ್ದಾಳೆ. ಜಮೀನ್ದಾರಶಾಹಿಯ ಸೊಕ್ಕನ್ನು ಮುರಿಯುತ್ತಾ ಜನರ ನಂಬಿಕೆಯ ಸತ್ಯವನ್ನು ನೆಲೆಗೊಳಿಸುತ್ತಾ ಸಾಗಿದ ಕೋಟಿ-ಚೆನ್ನಯರು ಇಂದು ವಿಸ್ತೃತವಾಗಿ ಪೂಜಿಸಲ್ಪಡುತ್ತಿದ್ದಾರೆ; ಬೈದರ್ಕಳ ನೇಮ ಎಲ್ಲೆಡೆ ನಡೆಯುತ್ತಿದೆ. ಇಂತಹ ಕೋಟಿ-ಚೆನ್ನಯರನ್ನು ದಲಿತ ಸಮುದಾಯಕ್ಕೆ ಸೇರಿದ ಮೊಗೇರ್ಕಳ ದೈವಗಳು ಸೋಲಿಸುತ್ತಾರೆ! ಅರಿಕ್ಕಾಡಿಯ ಆಲಿಭೂತ ಹಿಂದೆ ದಿವಿ ದ್ವೀಪದ ಒಬ್ಬ ಮುಸ್ಲಿಮ್ ವ್ಯಕ್ತಿ. ತೀಯ ಸಮುದಾಯದ ಆರಾಧ್ಯ ದೈವ ವಯನಾಟು ಕುಲವನ್‌ನ ದೈವಂಕಟ್ಟು ಆರಂಭಗೊಂಡಾಗ, ಮುಸಲ್ಮಾನನೊಬ್ಬ ಅದರಲ್ಲಿ ಭಾಗಿಯಾಗುವ ಸಂದ... ಪುನರಭಿನಯ ನಡೆಯುತ್ತದೆ. ಪಾಲೆ/ಅಜಿಲ ಸಮುದ... ಪುರಾಣದಲ್ಲಿ ಶಿವನಿಗೆ ಗಣಪತಿ ಮತ್ತು ಷಣ್ಮುಖ... ಮಕ್ಕಳೇ ಇಲ್ಲ; ಶಿವನಿಗಿರುವುದು ಗುಳಿಗ, ... ಮೊದಲಾದ ಸಂತತಿ ಮಾತ್ರ. ಸ್ವಾತಂತ್ರ್ಯಪೂರ್ವದ ... ಕಟ್ಟುಪಾಡಿನ ಕೇರಳದ ಮಂಞಾನಡ, ... ಅರ್ಚಕನೊಬ್ಬನನ್ನು ಅಪಹಾಸ್ಯ ಮಾಡುವ ಧಾ... ಪ್ರಹಸನ 'ಪುರೋಟು, ಬೇಟಿ ಚೇಗವ ಮತ್ತು ಬ್ರಾ... ಎಂಬ ಹೆಸರಲ್ಲಿ ಇಂದಿಗೂ ನಡೆಯುತ್ತಿದೆ. ಭೂತಾರಾಧನೆಯು ಸಮಾಜದ ಒಳಿತು-ಕೆಡು... ನಡುವಿನ ಸಂಘರ್ಷದ ಪ್ರತೀಕವಾಗಿ ಗೋಚರಿಸು... ಬಲುಮುಖ್ಯ ವಿಷಯವಾಗಿದೆ. ಇದು ... ಸಾಂಸ್ಕೃತಿಕ-ಸಾಮಾಜಿಕ-ರಾಜಕೀಯ ಇತಿಹಾಸವನ್ನು ... ವಿಮರ್ಶೆಗೆ ಒಡ್ಡಲು ಪ್ರಮುಖ ಆಕರವಾಗಿದೆ.

ಇನ್ನು ಭೂತಾರಾಧನೆ ಇಂದು ನಡೆಯುವ ರೀ... ಬಹಳಷ್ಟು ವ್ಯತ್ಯಯ ಉಂಟಾಗಿವೆ. ಬದಲಾವಣೆ ... ನಿಯಮ; ಹಾಗಿದ್ದೂ ನಮ್ಮ ಕಣ್ಣ ಮುಂ... ಸೌಂದರ್ಯಪ್ರಜ್ಞೆ ನಷ್ಟಗೊಳ್ಳುವ, ಭ್ರಷ್ಟಗೊಳ್ಳುವ ... ನಡೆಯುತ್ತಿರುವುದು ಸಹನೀಯವಲ್ಲ. ಯಕ್ಷ... ವೇಷಭೂಷಣಗಳು ಇಲ್ಲಿ ಪ್ರವೇಶಿಸಿವೆ, ಸಿನಿಮಾ ... ನೃತ್ಯ ಹಾಗೂ ಸಂಭಾಷಣೆಗಳ ಪ್ರಭಾವ ದಟ್ಟವಾಗಿ ಕಾ... ಹಿಂದೆ ಇದ್ದ ವಾದ್ಯ ಪರಿಕರಗಳು ಕಾಣೆಯಾ... ದೈವವನ್ನು ಕುಣಿಸುವ ಜನಪದ ಮಟ್ಟಿನ ... ಇಂದಿಲ್ಲವಾಗುತ್ತಿದೆ. ಹಿಂದೆ ತೆಂಗಿನ ಎಳೆ ... ಅಲಂಕಾರವನ್ನು ಕಟ್ಟಿಕೊಳ್ಳುವ ಮೊದಲು ಒಳಉಡ... ಕೆಂಪು ಬಟ್ಟೆಯನ್ನು ಮಾತ್ರ ಉಪಯೋಗಿಸು... ಭುಜಕೀರ್ತಿಯಂತೂ ಕಂಡಿತ ಇರಲಿಲ್ಲ. ತೆಂಗಿನ ಗರಿ... ಮಾಡುವ ವಿನ್ಯಾಸ, ಅಡಿಕೆ, ಅಡಿಕೆ ಹಿಂಗಾರ ... ಕೇಪುಳ ಹೂವಿನ ಬಳಕೆ ಅತ್ಯಂತ ಸುಂದರವಾಗಿರ... ಅರ್ಥಪೂರ್ಣವಾಗಿರುತ್ತಿತ್ತು. ಈಗ ಆ ಎಲ್ಲ ಅಲ... ಇದ್ದರೂ, ಅದರ ಮೇಲೆ ಅತಿಯಾಗಿ ಮಲ್ಲಿಗೆ ಸೇ... ಹೂವಿನ ಮಾಲೆಗಳನ್ನು ಹಾಕಿ ಮೂಲದ ವಿನ್ಯಾಸ... ಮುಚ್ಚಲಾಗುತ್ತಿದೆ. ಅಣಿಗಳಿಗೂ ಇದೇ ಗತಿ. ಇ... ಯಾವ ಸಾರ್ಥಕ್ಯ ದೊರೆಯುತ್ತಿದೆ ಎಂ... ಅರ್ಥವಾಗುತ್ತಿಲ್ಲ. ತೆಂಗಿನ ಗರಿ, ಅಡಿಕೆ ಹಾಳೆ, ... ಅಡಿಕೆ ಹಿಂಗಾರ, ಕೇಪುಳ ಹೂವು, ಅರ್ದಾಳ, ... ಕಾಡಿಗೆ ಹೀಗೆ ತಮ್ಮ ಸುತ್ತಲೂ ಸುಲಭವಾಗಿ ... ಸಾಧನಗಳಿಂದ ನರ್ತನ ಕಲಾವಿದರು ... ವೇಷವಿನ್ಯಾಸಗಳನ್ನು ಸಿದ್ಧಪಡಿಸುತ್ತಿದ್ದರು, ಈಗಲೂ ಬ... ಹಾಗೇ ಮಾಡುತ್ತಾರೆ; ಈ ಅಲಂಕಾರಕ್ಕೆ ಪೂರ... ಗಗ್ಗರ, ತಲೆಪಟ್ಟಿ, ಕೆಬಿನ ಮುಂತಾದ ಕೆಲವು ಆಭರ... ಮತ್ತು ಲೋಹದ ಕಡ್ತಲೆ, ಸುರಿಗೆ ಮುಂತಾದ ಆ... ಮಾತ್ರ. ಆದರೆ ಇದೆಲ್ಲದರ ಮೇಲೆ ರೆಡಿಮೇಡ್ ಹಾರ... ಹೂಮಾಲೆಗಳನ್ನು, ಚೌರಿಗಳನ್ನು ಧರಿಸುವುದರಿಂದ ... ಅಲಂಕಾರಕ್ಕೆ ಧಕ್ಕೆಯಾಗುತ್ತಿದೆ. ಅಷ್ಟೇನೂ ವಿದ್ಯಾವಂ... ಕಲಾವಿದ ಸಮುದಾಯಕ್ಕೆ ಇವೆಲ್ಲವನ್ನು ವಿವ... ಅಗತ್ಯವಿದೆ. ಮುಂದಿನ ತಲೆಮಾರಿಗೆ ಇಂತಹ ಕಲಾ... ವೊಂದನ್ನು ಬಳುವಳಿಯಾಗಿ ನೀಡಿದ ತಮ್ಮ ಹಿರಿಯ... ಗೌರವಿಸುವುದೆಂದರೆ, ಅಮೋಘವಾದ ಸೌಂದರ್ಯ ... ಅತ್ಯಂತ ಅಚ್ಚುಕಟ್ಟಾದ 'ಮಾದರಿ'ಯನ್ನು ... ಮುಂದೆಯೂ ಮುಂದುವರಿಸುವುದು ಎನ್ನುವ ... ಅವರದ್ದಾಗಬೇಕಿದೆ. ಈ ಅಪೂರ್ವವಾದ ಕಲಾ... ಅವರ ಹಿರಿಯರ ಸಾಧನೆಯೇ ಮಾರ್ಗದರ್ಶಿಯಾಗ... ಅದೊಂದು ಘನತೆಯ ವಿಷಯ ಎಂಬ 'ಸ್ವಂತಿ... ಪ್ರಜ್ಞೆ ಹೆಚ್ಚು ಬೆಳೆಯಬೇಕಿದೆ. ದೈವನೃತ್ಯಕ್ಕೆ ವಾದ್ಯ ಸು... ವಾಲಗದವರೂ ಈ ರೀತಿಯ ತಿಳಿವಳಿಕೆಯನ್ನು ಬೆಳೆ... ಬೇಕಾಗಿದೆ. ಭೂತಾರಾಧನೆಯ ವೇಷಭೂಷಣ... ಗಮನಿಸಲು ಡಾ.ಕೆ.ಚಿನ್ನಪ್ಪ ಗೌಡರ ಭೂತಾರಾ... ಗ್ರಂಥಗಳನ್ನು ನೋಡಿ; ಅಲ್ಲಿರುವ ದೈವಗಳ ಚಿತ್ರ... ಇಂದಿನ ದೈವಗಳ ಅಲಂಕಾರಕ್ಕೆ ತುಲನೆ ಮಾಡಿ. ... ತಿಳಿಯುತ್ತದೆ.

ಈ ಮೇಲೆ ಹೇಳಿದ ವಿಚಾರಗಳೆಲ್ಲ ಈ ... ಗುಂಪಿನಲ್ಲಿ ಚರ್ಚೆಯ, ವಿಶ್ಲೇಷಣೆಯ ಮತ್ತು ಆಗಬಹು... ಮೊದಲಿಗೆ ನಾನು ಗ್ರಹಿಸಿದ್ದೆ. ಇದು ಮತಪ್ರಚಾರದ ... ಎಂದು ಗೊತ್ತಿರಲಿಲ್ಲ. ಹಾಗೆಂದೇ ನಾನು ದೈವಾರಾ... ಹೊರತಾದ ವೈದಿಕ ವಿಚಾರಗಳ ಮೆಸ್ಸೇಜ್‌ಗಳು ... ಬರತೊಡಗಿದ್ದರಿಂದ ಪ್ರತಿಕ್ರಿಯೆ ನೀಡ... ಭೂತಾರಾಧನೆಯಂತಹ ಅತ್ಯಂತ ಘನತೆಯ ಪರಂಪ... ವೈದಿಕ ಮತದ ಅಧೀನವಾದ ಉಪವಿಭಾಗ ... ಗ್ರಹಿಸಲು ನಾನು ಯಾವತ್ತೂ ಸಿದ್ಧವಿಲ್ಲ... ದೈವಾರಾಧನೆಯನ್ನು ಇಲ್ಲಿಯ ಜನಸಮುದಾ... ಸ್ವಂತದ್ದಾದ ಮತ್ತು ಸಂಪೂರ್ಣವಾಗಿ ಸ್ವತಂತ್ರವಾ... ಪರಿಪೂರ್ಣವಾದ ಧಾರ್ಮಿಕ ವ್ಯವಸ್ಥೆ ಎಂದೇ ತಿಳಿದ... ಇದರ ಪಾವಿತ್ರ್ಯವನ್ನು ಧರ್ಮಜಾಗೃತಿಯ ಹೆ...

▶▶| 1

ಪರಾವಲಂಬಿ ದೇವತೆಗಳು ಮತ್ತು ರಾಕ್ಷಸ ಯೋಗಿಗಳು



ಯೋಗೇಶ್ ಮಾಸ್ಟರ್

ಪುರಾಣದ ಹೂರಣ


ಧ್ಯಾನ ಎಂದರೇನು?

ಯೋಗ ಮತ್ತು ತಂತ್ರ ಈ ಎರಡರಲ್ಲೂ ಧ್ಯಾನವೇ ಪ್ರಧಾನ. ಆದರೆ, ಧ್ಯಾನ ಎಂದರೆ ಖಂಡಿತವಾಗಿ ಒಂದೇ ಕಡೆ ಏಕಾಗ್ರತೆಯಿಂದ ತಟಸ್ಥವಾಗಿ ಕೂರುವುದೋ ಅಥವಾ ಯಾವುದಾದರೂ ದೇವರನ್ನು ಧ್ಯಾನಿಸುತ್ತಾ ಕುಳಿತುಕೊಳ್ಳುವುದೋ ಅಲ್ಲ. ಯಾವುದೋ ದೇವತೆಯ ಗುಣ ಮತ್ತು ರೂಪಗಳನ್ನು ಕೊಂಡಾಡುತ್ತಾ ಕೂರುವುದೋ ಅಥವಾ ನೆನೆಸಿಕೊಂಡಿರುವುದೋ ಧ್ಯಾನ ಎಂದಿಗೂ ಅಲ್ಲ. ಆ ದೇವರನ್ನು ಧ್ಯಾನಿಸು ಎಂದರೆ ತನ್ನ ಮೆಚ್ಚಿನ ದೇವತಾ ಸ್ವರೂಪದ ಕಡೆಗೆ ಗಮನ ಕೊಡುವುದು ಎಂದು ಅರ್ಥವೇ ಹೊರತು, ಈ ಗಮನಿಸುವಿಕೆಗೂ ಧ್ಯಾನಕ್ಕೂ ಏನೂ ಸಂಬಂಧವಿಲ್ಲ.

ಧ್ಯಾನವೆಂದರೆ ಸುಮ್ಮನೆಯೇ ಇರುವುದು. ಮನಸ್ಸಿನ ಯಾವುದೇ ಆಲೋಚನೆ, ಚಿಂತನೆ ಅಥವಾ ಚಿಂತೆಗಳು, ಆಸೆ ಭಯಗಳು ಕೋಪತಾಪಗಳು; ಹೀಗೆ ಯಾವುದರದೇ ಪ್ರಭಾವವಿಲ್ಲದೇ ಇರುವಿಕೆಯಲ್ಲಿ ಬರಿದೇ ಇರುವುದು. ಈ ಸ್ಥಿತಿಯು ಇರುವಿಕೆಯೋ, ಇಲ್ಲದಿರುವಿಕೆಯೋ ಅದೂ ತಿಳಿಯದು.

ಪೌರಾಣಿಕ ಕಥೆಗಳೆಲ್ಲದರಲ್ಲೂ ಹಿರಣ್ಯಕಶಿಪು,





ಮಹಿಷಾಸುರ, ಭಸ್ಮಾಸುರ, ತಾರಕಾಸುರರೇ ಮೊದಲಾಗಿ ಬಹಳಷ್ಟು ಮಂದಿ ಅಸುರರು ತಪಸ್ಸು ಮಾಡುವುದರ ಬಗ್ಗೆ ಉಲ್ಲೇಖಗಳು ಬರುತ್ತವೆ. ಆಗ ಅವರು ಬ್ರಹ್ಮನನ್ನು ಕುರಿತು ತಪಸ್ಸು ಮಾಡುತ್ತಾರೆ, ಕೆಲವೊಮ್ಮೆ ಶಿವನನ್ನು ಮಾಡಿದರೂ, ಹೆಚ್ಚಿನ ಸಮಯ ಬ್ರಹ್ಮನೇ ಬಳಕೆಯಲ್ಲಿರುವುದು. ಆಗ ಬ್ರಹ್ಮ ಬಂದು ಕೇಳಿದ ವರದಲ್ಲಿ ಏನೋ ಒಂದಿಷ್ಟು ಕೊಸರಾಡಿ, ಅದಕ್ಕೊಂದು ಅಡ್ಡಬಾಯಿ ಹಾಕಿ ಅದನೆಗೆ ಕಂಡೀಶನ್ ಮೇಲೆ ಎಂತದ್ದೋ ಗ್ರಾಂಟ್ ಮಾಡಿ ಹೋಗುವ ಕಥೆಗಳನ್ನು ನೋಡುತ್ತೇವೆ.

ತಮ್ಮ ದೇವತೆಯ ವಿಜಯದ ಕಥೆಯನ್ನು ಬರೆದುಕೊಳ್ಳುವ ಧಾವಂತದಲ್ಲಿರುವ ವೈದಿಕ ಪುರಾಣಿಕರಿಗೆ ಇಷ್ಟೇ ಹೇಳಲು ಸಾಧ್ಯ. ಆದರೆ ವಿಷಯವೇನೆಂದರೆ, ಈ ನಾಡಿನ ಪ್ರಾಚೀನ ಅರಣ್ಯಕರೂ ಮತ್ತು ಉದಾರ ವಿಚಾರಿ ಆರ್ಯರೂ ಆಧ್ಯಾತ್ಮದ ಮತ್ತು ಧ್ಯಾನದ ವಿಷಯಗಳ ಕೊಟ್ಟು ಕೊಳುವಿಕೆಗಳಲ್ಲಿ ಸಾಧಿಸಿದರು. ಅದು ಬಹಳಷ್ಟು ಉಪನಿಷತ್ತಿನ ಋಷಿಗಳಿಗೆ ಕಾರಣವಾಯಿತು. ಉಪನಿಷತ್ತಿನ ಋಷಿಗಳ ಕ್ರಾಂತಿಕಾರಕ ನಿಲುವುಗಳು, ವೈದಿಕತೆಯ ನಿರಾಕರಣೆ ಮತ್ತು ಇಂದ್ರನೇ ಮೊದಲಾದ ವೈದಿಕ ದೇವರುಗಳ ಬಗ್ಗೆ ತಿರಸ್ಕಾರ- ಇವುಗಳಿಗೆಲ್ಲಾ ಕಾರಣ ಆ ಋಷಿಗಳ ಮೂಲ ಆರ್ಯದಲ್ಲದ್ದೇ ಇರುವುದು. ಅರಣ್ಯಕರ ಮೂಲವನ್ನೇ ಹೊಂದಿರುವುದು.

ಅರಣ್ಯಕರ ಹಳೆಯ ಮಾಂತ್ರಿಕತೆಯ ಆಚರಣೆಯು ವೈದಿಕರ ಸಾತ್ವಿಕ ಭಾಗದ ಪ್ರಭಾವಕ್ಕೇನೋ ಒಳಗಾಯಿತು. ಎಷ್ಟೋ ಬಾರಿ ಯಜ್ಞವನ್ನೂ ಒಳಗೊಂಡಂತೆ ಅನೇಕ ಅಗ್ನಿಹೋತ್ರದ ರೂಢಿಯನ್ನು ಉಳಿಸಿಕೊಂಡಿತು. ಆದರೆ ಆರ್ಯರ ಅಥವಾ ವೈದಿಕ ಅವೈಚಾರಿಕ ಮತ್ತು ಕುಟಿಲತೆಗಳನ್ನು ಬಲವಾಗಿ ವಿರೋಧಿಸಿತು. ರಾಜಕೀಯ ಮತ್ತು ಸಾಂಸ್ಕೃತಿಕ ರಾಜಕಾರಣಗಳಿಂದ ದೂರವಿದ್ದು ಅರಣ್ಯಗಳಲ್ಲೇ ತಮ್ಮ ಬಿಡಾರವನ್ನು ಮುಂದುವರಿಸುತ್ತಾಯಿತು. ಆ ಅರಣ್ಯದಲ್ಲಿದ್ದು ತಮ್ಮ ಆಧ್ಯಾತ್ಮಿಕ ಸಾಧನೆ ಅಥವಾ ನೈಸರ್ಗಿಕ ಜೀವನವನ್ನು ನಡೆಸುತ್ತಿದ್ದ ಋಷಿಗಳು ಯಾರನ್ನೂ ಆರಾಧಿಸುತ್ತಿರಲಿಲ್ಲ, ಇನ್ನು ರಾಕ್ಷಸರು ತಪಸ್ಸು ಮಾಡುವಾಗಂತೂ ಬ್ರಹ್ಮನನ್ನೇನೂ ಕುರಿತು ಧ್ಯಾನಿಸುತ್ತಿರಲಿಲ್ಲ.


ಅದರಲ್ಲೂ ಸರಸಿಜೋದ್ಭವ ಸರಸ್ವತಿಯ ಪ್ರಿಯಕರ ಬ್ರಹ್ಮನಂತೂ ಅಲ್ಲವೇ ಅಲ್ಲ.

ನಿರಾಕಾರ, ನಿರ್ಗುಣ ಬ್ರಹ್ಮನ್

ಉಪನಿಷತ್ತಿನ ಋಷಿಗಳು ಬ್ರಹ್ಮನ್ ಎನ್ನುತ್ತಿದ್ದದ್ದು ನಿಸರ್ಗದ ಮೂಲಶಕ್ತಿಯನ್ನು. ಅದನ್ನೇನೂ ಅವರು ದೇವರು ಎನ್ನುತ್ತಿರಲಿಲ್ಲ ಮತ್ತು ಆಚರಣೆಗಳ ಮೂಲಕ ಆರಾಧನೆ ಏನೂ ಮಾಡುತ್ತಿರಲಿಲ್ಲ. ಬ್ರಹ್ಮನ್ ಎಂಬುವುದಕ್ಕೆ ಲಿಂಗವಿಲ್ಲ ಮತ್ತು ರೂಪವಿಲ್ಲ. ಇಸ್ಲಾಂ ಪರಿಕಲ್ಪನೆಯ ಅಲ್ಲಾಹ್‌ನಂತೆ ನಿರಾಕಾರ ಮತ್ತು ನಿರ್ಲಿಂಗಿ. ಇಲ್ಲಿ ಮತ್ತೊಂದು ಸ್ವಾರಸ್ಯಕರ ಸಂಗತಿಯೆಂದರೆ, ತಪಸ್ಸು ಮಾಡಿ ವರವನ್ನು ಪಡೆಯುವುದು, ದೇವರು ಅದನ್ನು ಕೊಡುವುದೂ ಎಲ್ಲ ಆಗುವುದು. ಅಂದರೆ ರಾಕ್ಷಸರು ಯಾರನ್ನೋ ಕುರಿತು ತಪಸ್ಸು ಮಾಡುವುದು, ಅದಕ್ಕೆ ಮೆಚ್ಚಿ ಅದಿನ್ಯಾವುದೋ ದೇವರು ಪ್ರತ್ಯಕ್ಷವಾಗುವುದು, ಇವರು ವರವನ್ನು ಕೇಳುವುದು, ಅವರು ವರವನ್ನು ಕೊಡುವುದು ಅಲ್ಲ. ಅದು ಸಂಕಲ್ಪ ಸಿದ್ಧಿಯಾಗುವುದು. ವೈದಿಕರ ಪುರಾಣಿಕರಿಗೆ ಆ ಪ್ರಕ್ರಿಯೆ ಅರ್ಥವಾಗದಿದ್ದ ಕಾರಣಕ್ಕೋ ಅಥವಾ ತಮ್ಮ ವೈದಿಕ ಮತ್ತು ಪೌರಾಣಿಕ ಪರಿಕಲ್ಪನೆಯ ದೇವತೆಗಳಿಗೆ ಮಹತ್ವ ನೀಡಲೋ ಅಥವಾ ಇನ್ನೂ ಒಂದು ಹೆಜ್ಜೆ ಮುಂದೆ ಅಂದರೆ, ಅಸುರರಿಗೂ ನಾವು ಧಾರಾಳತೆಯನ್ನು, ಔದಾರ್ಯವನ್ನು ತೋರುತ್ತಿದ್ದೆವು ಎಂದೋ; ಒಟ್ಟಾರೆ ನಿಜವಾದ ವಿಷಯ ಬಿಟ್ಟು ಇನ್ನು ಬೇರೆಯೇ ಇನ್ನೇನೋ ಆಗಿರುವಂತದ್ದಾಗಿತ್ತು.

ಬ್ರಹ್ಮ ಎಂದರೆ ಸೃಷ್ಟಿಯ ಅಧಿಪತಿ ಎಂದು ಪುರಾಣಗಳು ಹೇಳಿದರೆ, ನಿಜವಾದ ವಿಷಯದಲ್ಲಿ ಸೃಷ್ಟಿಯಂತಹ ನೈಸರ್ಗಿಕ ವಿಷಯಗಳಿಗೆ ಯಾರೂ ಅಧಿಪತಿಗಳಿಲ್ಲ. ಬ್ರಹ್ಮನ್ ಎಂಬುವುದೊಂದು ಪರಿಕಲ್ಪನೆ. ಅದರನ್ನು ಋಷಿಗಳು ಬಳಸಿದರು. ಈ ಬ್ರಹ್ಮನ್ ಯಾವುದರ ಅಧಿಪತಿಯಲ್ಲ. ಅವನಿಗೆ ಹೊಲಿಸಿಕೊಟ್ಟಿರುವಂತಹ ಉಡುಗೆ ತೊಡುಗೆಗಳಿಲ್ಲ, ಆಭರಣಗಳಿಲ್ಲ, ಅವನಿಗೆ ಸಂಗಾತಿ ಇಲ್ಲ, ವಾಹನವಿಲ್ಲ. ಅವನು ಎನ್ನುವುದೂ ತಪ್ಪು, ಅದಕ್ಕೆ ಲಿಂಗವಿಲ್ಲ, ರೂಪವಿಲ್ಲ, ಮನಸಿಲ್ಲ, ಬುದ್ಧಿಯಿಲ್ಲ, ಆಸೆಯಿಲ್ಲ, ಭಯವಿಲ್ಲ, ಆಶಯಗಳಿಲ್ಲ, ಗುಣವಿಲ್ಲ, ರುಚಿಯಿಲ್ಲ, ಅಭಿರುಚಿಯಿಲ್ಲ; ಏನೂ ಇಲ್ಲ. ಆದರೆ ಅದೊಂದು ಮೂಲ ಸಾಮಗ್ರಿ, ಅರ್ಥ ಮಾಡಿಕೊಳ್ಳಲು ಹೇಳಬೇಕೆಂದರೆ ಮೂಲಶಕ್ತಿ ಎಂದು ಅಂದುಕೊಳ್ಳಬಹುದು, ಅಡ್ಡಿಯಿಲ್ಲ. ತಿಳಿಯುವಿಕೆ ಮತ್ತು ತಿಳಿಸುವಿಕೆಯಲ್ಲಿ ಏನಾದರೊಂದು ಹೆಸರು ಬೇಕಲ್ಲ. ಆ ಅಗೋಚರ ಮೂಲಸಾಮಗ್ರಿಗೆ ಅಥವಾ 'ಅದಕ್ಕೆ' ಮಾಡುವ, ಮಾಡದೇ ಇರುವ ಶಕ್ತಿ ಉಂಟು. ಹಾಗೆಯೇ ಉಂಟು ಮಾಡುವ, ನಾಶ ಮಾಡುವಂತಹ ಎಲ್ಲಾ ಕೆಲಸಗಳಿಗೂ ಬಳಕೆ ಮಾಡಲು ಸಾಧ್ಯವಾಗುತ್ತದೆ.





ಸಂಕಲ್ಪವೇ ಪರಮೇಶ್ವರ

ನಿಸರ್ಗದ ಆ ಒಂದು ಶಕ್ತಿಗೆ, ನಿಸರ್ಗದ ಭಾಗವೇ ಆಗಿದ್ದು ಅದೇ ಶಕ್ತಿಯ ಮತ್ತೊಂದು ಬಗೆಯ ರೂಪವಾಗಿರುವ ವ್ಯಕ್ತಿಯು ತಾನು ಆಶಿಸುವಂತಹ ವಿಷಯವನ್ನು, ಬಯಕೆಯನ್ನು ಆ ನಿಸರ್ಗದ ಮೂಲಗುಣವಾದ ಸೃಷ್ಟಿಯ ಶಕ್ತಿಗೆ ದಾಟಿಸುವುದು. ಅದು ಸಂಕಲ್ಪ. ಆಗ ಅದು ನೆರವೇರುತ್ತದೆ.

ಸರಳವಾಗಿ ಹೇಳುವ ಪ್ರಯತ್ನ ಮಾಡುವುದಾದರೆ, ನಿಸರ್ಗದ ಸೃಷ್ಟಿಯ ಅನೈಚ್ಛಿಕ ಶಕ್ತಿಯ ಸಾಧ್ಯತೆಗೆ ವ್ಯಕ್ತಿಯು ತನ್ನ ಐಚ್ಛಿಕ ಶಕ್ತಿಯನ್ನು ಸೇರಿಸಿ ಸಂಕಲ್ಪವನ್ನು ಸಿದ್ಧಿಸಿಕೊಳ್ಳುವುದು. ಐಚ್ಛಿಕ ಎಂದರೇನೇ ಉದ್ದೇಶಪೂರ್ವಕವಾಗಿ ಏನನ್ನೋ ಆಶಿಸುವುದು. ಇದನ್ನೇ ರಾಕ್ಷಸರು ಮಾಡುತ್ತಿದ್ದದ್ದು, ಇದು ತಂತ್ರ.

ಆರ್ಯರಿಗಿಂತ ಅರಣ್ಯಕರು ತಂತ್ರದಲ್ಲಿ ಬಹಳ ಮುಂದಿದ್ದರು. ಇದನ್ನು ಗುರುತಿಸಿದ ಆರ್ಯರನೇಕರು ಗೌರವದಿಂದಲೇ ಇದನ್ನು ತಮ್ಮಲ್ಲೂ ಅಭ್ಯಾಸಕ್ಕೆ ತಂದುಕೊಂಡು ತಮ್ಮದಾಗಿಸಿಕೊಂಡರು. ರಾಕ್ಷಸರು ಮತ್ತು ಆರ್ಯರ ವೈಚಾರಿಕ ಮತ್ತು ಆಧ್ಯಾತ್ಮಿಕ ಸಮಾಗಮದ ಫಲವೇ ಉಪನಿಷತ್ತಿನ ಋಷಿಗಳು.

ಕಶ್ಯಪ ಎಂಬ ಋಷಿಯನ್ನು ಕಶ್ಯಪ ಬ್ರಹ್ಮ ಎಂದು ಕರೆಯಲು ಕಾರಣ ಈ ಸಂಕಲ್ಪ ಸಿದ್ಧಿಯನ್ನು ಮಾಡುವ ಬಗೆಯನ್ನು ಸಿದ್ಧಿಸಿಕೊಂಡವನಾಗಿದ್ದರು. ಈ ಕಶ್ಯಪ ಬ್ರಹ್ಮನ ಮಗ ಹಿರಣ್ಯಾಕ್ಷ ಮತ್ತು ಹಿರಣ್ಯಕಶಿಪು. ಹಿರಣ್ಯಾಕ್ಷ ಮತ್ತು ಹಿರಣ್ಯಕಶಿಪು ತಂದೆಯಂತೆ ಬರಿಯ ತಾತ್ವಿಕ ಮತ್ತು ಆಧ್ಯಾತ್ಮಿಕ ಚಿಂತನೆಗಳಿಗಷ್ಟೇ ತಮ್ಮ ತಂತ್ರವನ್ನು ಉಪಯೋಗಿಸಿ ಸುಮ್ಮನಾಗದೇ ರಾಜಕೀಯ ಮತ್ತು ಸಾಮಾಜಿಕ ಕ್ಷೇತ್ರಗಳಿಗೂ ತಮ್ಮ ವ್ಯಾಪ್ತಿಯನ್ನು ಹಿಗ್ಗಿಸಿಕೊಂಡರು. ಆಗ ನಡೆದ ಸಂಘರ್ಷದ ಕಥೆಯೇ ವೈದಿಕರ ನೃಸಿಂಹಾವತಾರ.

ಭಕ್ತ ಪ್ರಹ್ಲಾದನ ಕಥೆ ಅರಣ್ಯಕರ ತಲ್ಲಣಗಳ ಕಥೆ. ಸಾಮಾನ್ಯವಾಗಿ ಪ್ರಹ್ಲಾದನೆಂಬೋ ವಿಷ್ಣುಭಕ್ತನು, ವಿಭೀಷಣನೆಂಬೋ ರಾಮಭಕ್ತನು ವೈದಿಕರಿಗೆ, ಮತ್ತವರ ಮಾತನ್ನು ಕೇಳುವ ಸಾಮಾನ್ಯರಿಗೆ ಮಹಾಭಕ್ತರಾಗುತ್ತಾರೆಯೇ ಹೊರತು, ವಿಷಯದ ಆಳಕ್ಕೆ ಹೋಗಿ, ರಾಜಕೀಯ ಮತ್ತು ಸಾಂಸ್ಕೃತಿಕ ಅಧ್ಯಯನ ಮಾಡುವವರಿಗೆ ಅವರು ಸ್ವಯವಂಚಕರಾಗಿ ಕಾಣುತ್ತಾರೆ.

ವೈದಿಕರ ಕುಟಿಲ ಕಾರ್ಯತಂತ್ರಕ್ಕೆ ಬಲಿಯಾಗಿ ಅವರ ಪರವಾಗಿ ಕೆಲಸ ಮಾಡುತ್ತಾ ಅರಣ್ಯಕರ ವಿರುದ್ಧವಾದ ಮನಸ್ಥಿತಿಯನ್ನು ಹೊಂದಿರುವವರಾಗಿ ಕಾಣುವವರು ಭಕ್ತರಾಗಿ ಬಿಂಬಿತರಾಗುತ್ತಾರೆ. ಯಾರು ತಮ್ಮ ಹೋರಾಟವನ್ನು ಮುಂದುವರಿಸುತ್ತಾರೋ ಅವರು ದುಷ್ಟರಾಗಿ ಕಾಣುತ್ತಾರೆ.

ಇರಲಿ, ರಾಕ್ಷಸರ ತಪಸ್ಸಿನ ವಿಷಯಕ್ಕೆ ಮರಳೋಣ. ಅವರ ತಪಸ್ಸೆನ್ನುವುದು ಸೃಷ್ಟಿಯು ಅನೈಚ್ಛಿಕವಾಗಿ ಸಾಧ್ಯಗೊಳಿಸುವಂತಹ ಶಕ್ತಿಗೆ ತಮ್ಮ ಐಚ್ಛಿಕ ಆಶಯವನ್ನು ಸೇರಿಸಿ ಸಂಕಲ್ಪಿಸುವಂತಹ ಪ್ರಕ್ರಿಯೆಯೇ ಆಗಿದೆ. ಇದು ಬಹಳ ಸೂಕ್ಷ್ಮವಾದದ್ದು ಹಾಗೂ ಸುಲಭಕ್ಕೆ ಸ್ಥೂಲ ನೋಟಕ್ಕೆ ಸಿಗದದ್ದು. ಅನಾರ್ಯ ರಾಕ್ಷಸರು ಯೋಗಿಗಳು. ಯೋಗವೆಂದರೆ ಸೇರಿಸುವುದು, ಕೂಡಿಸುವುದು. ರಾಕ್ಷಸರಿಗೆ ಕೂಡಿಸುವ ಕ್ರಿಯೆ ತಿಳಿದಿತ್ತು, ಆರ್ಯ ದೇವತೆಗಳು ಭೋಗಿಗಳು ಹಾಗೂ ಪರಾವಲಂಬಿಗಳು. ಯಾರೋ ಇವರಿಗೆ ಯಜ್ಞದಲ್ಲಿ ಹವಿಸ್ಸನ್ನು ನೀಡುವ ಮೂಲಕ ಶಕ್ತಿಯನ್ನು ನೀಡಲು ಕಾಯುತ್ತಿದ್ದರು. ದೇವತೆಗಳಿಗೆ ರಾಕ್ಷಸರ ಈ ಸೂಕ್ಷ್ಮ ಬಗೆಯ ತಂತ್ರವೇ ತಿಳಿದಿರಲಿಲ್ಲ, ಹಾಗಾಗಿ ಅವರು ಅದನ್ನು ತಮ್ಮ ಕೃತಿಗಳಲ್ಲಿ ಬ್ರಹ್ಮ ಎಂಬುವ ಸೃಷ್ಟಿಯ ಅಧಿಪತಿ ಅವರ ತಪಸ್ಸಿಗೆ ಮೆಚ್ಚಿ ಪ್ರತ್ಯಕ್ಷನಾಗುತ್ತಾನೆ. ವರ ಕೊಡುತ್ತಾನೆ; ಇತ್ಯಾದಿಗಳನ್ನು ಬರೆಯುತ್ತಾರೆ.


ಆದರೆ ಇದನ್ನು ರೂಪಕವಾಗಿಯೂ ಕೂಡ ನೋಡಲು ಸಾಧ್ಯವಿದೆ. ಆದರೆ ಇದು ವಿಷಯವನ್ನು ಸರಿಯಾಗಿ ತಿಳಿಸದೇ ದಾರಿ ತಪ್ಪಿಸುವ ರೂಪಕವಾಗಿರುವುದರಿಂದ ಬಳಸುವ ಮುನ್ನ ಎಚ್ಚರಿಕೆಯಿಂದ ಇರಬೇಕು.

ಅಲ್ಲಿ ಕೊಡುವವರೂ ಇಲ್ಲ, ಪಡೆಯುವವರೂ ಇಲ್ಲ. ಸಂಕಲ್ಪಿಸುವುದು. ಅದು ಸಿದ್ಧಿಸುವುದು. ಅಷ್ಟೇ. ಅದನ್ನೇ ರೂಢಿ ಮಾತಿನಲ್ಲಿ ಹೇಳುವರು. ಸಂಕಲ್ಪೋ ಪರಮೇಶ್ವರಃ ಎಂದು. ಸಂಕಲ್ಪವನ್ನೇ ಪರಮೇಶ್ವರ ಅಂದರೆ ಅತ್ಯುನ್ನತ, ಭೌತಿಕಕ್ಕೆ ಅತೀತವಾದ, ನಶ್ವರವಲ್ಲದ ಈಶ್ವರ ಎಂದು ಕರೆಯಲು ಸಾಧ್ಯವಾಗಿದ್ದು ತಂತ್ರ ಸಾಧಕರಿಗೆ. ಆದರೆ ವೈದಿಕತೆಯ ಪ್ರಭಾವದಲ್ಲಿ ಸಾಮಾನ್ಯರು ಇನ್ನೂ ಭಿಕ್ಷುಕ ಮತ್ತು ದಾನಿಯ ರೀತಿಯಲ್ಲಿ ತಮ್ಮನ್ನೂ ಮತ್ತು ಭಗವಂತನನ್ನೂ ಕಂಡುಕೊಂಡು ಪರಾವಲಂಬಿಗಳಾಗಿಯೇ ವರ ಶಾಪಗಳ ಆಸೆ ಮತ್ತು ಭಯಗಳಲ್ಲಿ ಬದುಕುತ್ತಿದ್ದಾರೆ. ಇಂತಹ ಪರಾವಲಂಬನದ ಭಕ್ತಿಯಿಂದಾಗಿ ನಿಸರ್ಗದ ಅಥವಾ ಸೃಷ್ಟಿಯ ಮುಕ್ತ ಅನುಗ್ರಹವನ್ನು ತಮ್ಮಿಚ್ಛೆಯಂತೆ ಸ್ವತಂತ್ರವಾಗಿ ತೆಗೆದುಕೊಳ್ಳುವಂತಹ ಸಾಧ್ಯತೆಯ ಯುಕ್ತಿ ಇದೆ ಎನ್ನುವುದರ ವಿಚಾರದಿಂದಲೇ ಅವರು ವಂಚಿತರಾಗಿದ್ದಾರೆ. ಇದು ಅವರಿಗೆ ತಿಳಿದುಬಿಟ್ಟರೆ ದೇವರ ಮತ್ತು ಭಕ್ತರ ಮಧ್ಯವರ್ತಿಗಳಾಗಿ ಕೆಲಸ ಮಾಡುವ ಅರ್ಚಕ ಮತ್ತು ಪುರೋಹಿತ ವರ್ಗದ ವ್ಯಾಪಾರ ವಹಿವಾಟಿಗೆ ಹೊಡೆತ ಬೀಳುವುದರಿಂದ ಅದನ್ನು ತಿಳಿಗೊಡುವುದೂ ಇಲ್ಲ. ಅದೆಲ್ಲಾ ಮಹಾನ್ ಯೋಗಿಗಳಿಗೆ, ಹುಟ್ಟಿನಿಂದಲೇ ವಿಶೇಷ ಜನ್ಮ ಪಡೆದಂತವರಿಗೆ ಎಂದು ತಿಪ್ಪೆ ಸಾರಿಸಿಕೊಂಡಿರುತ್ತಾರೆ. ಆದರೆ ವಿಷಯವೇನೆಂದರೆ ರಾಕ್ಷಸರಿಗೆ ಚೆನ್ನಾಗಿ ಗೊತ್ತಿತ್ತು ಸೃಷ್ಟಿಯಲ್ಲಿ ಯಾರೂ ಅಧಿಪತಿಗಳಿಲ್ಲ, ನಿಸರ್ಗಕ್ಕೆ ಯಾವುದೇ ಪಕ್ಷಪಾತವಿಲ್ಲ, ಸಾಮರ್ಥ್ಯ ಇರುವವರು ಆ ಶಕ್ತಿಯನ್ನು, ಅನುಗ್ರಹಗಳನ್ನು ಪಡೆಯಬಲ್ಲವರು ಎಂದು. ಹಾಗಾಗಿಯೇ ಭೋಗಿಗಳಾಗಿದ್ದು, ಪರಾವಲಂಬಿಗಳಾದ ದೇವತೆಗಳಿಗೆ ಇವರನ್ನು ಕಂಡರೆ ಅಸೂಯೆ. ತಾವೇತಾವಾಗಿ ಶಕ್ತಿ ಸಂಚಯ ಮತ್ತು ಸಂವರ್ಧನೆ ಮಾಡಿಕೊಳ್ಳುವ ಇವರ ತಪಸ್ಸನ್ನು ಕೆಡಿಸಲು ನಾನಾಬಗೆಯಲ್ಲಿ ಕುಯುಕ್ತಿಗಳನ್ನು ಮಾಡುತ್ತಿದ್ದರು. ಕೆಲವೊಮ್ಮೆ ಯಶಸ್ವಿಯಾಗುತ್ತಿದ್ದರು, ಕೆಲವೊಮ್ಮೆ ವಿಫಲರಾಗುತ್ತಿದ್ದರು. ಆದರೆ ಯಾವುದೇ ಪೌರಾಣಿಕ ಕಥೆಗಳಲ್ಲಿ ಗಮನಿಸಿದರೆ ದೇವತೆಗಳು ರಾಕ್ಷಸರ ತಪಸ್ಸಿಗೆ ಭಂಗ ತಂದೇ ತೀರುತ್ತಾರೆ. ಈ ರಾಕ್ಷಸರಿಗೆ ತಂತ್ರ ಗೊತ್ತು. ಕುತಂತ್ರ ತಿಳಿಯದು. ಯುಕ್ತಿ ಗೊತ್ತು. ಕುಯುಕ್ತಿ ಗೊತ್ತಿಲ್ಲ.

ಅರಣ್ಯಕರ ಮೂಲದ ಉಪನಿಷತ್ತಿನ ಋಷಿಗಳು ತತ್ವಜ್ಞಾನಿಗಳಾಗಿ ಹೊಮ್ಮಿದರೆ, ರಾಕ್ಷಸರು ತಂತ್ರ ಬಲ್ಲ ಯೋಗಿಗಳಾಗಿ ಹೊರಹೊಮ್ಮುತ್ತಾರೆ.

ರಕ್ತಬೀಜಾಸುರನೆಂಬ ರಾಕ್ಷಸ ದೇವಿಯ ಮೇಲೆ ಯುದ್ಧಕ್ಕೆ ಹೋಗುತ್ತಾರೆ. ಅವನ ರಕ್ತ ನೆಲಕ್ಕೆ ಬಿದ್ದರೆ ಸಾವಿರಾರು ರಾಕ್ಷಸರು ಹುಟ್ಟಿಬರುತ್ತಾರೆ. ಹಾಗಾಗಿ ದೇವಿಯು ನಾಲಿಗೆಯನ್ನು ವಿಶಾಲವಾಗಿ ಚಾಚಿ ಅವನ ರಕ್ತವೇ ಕೆಳಕ್ಕೆ ಬೀಳದಂತೆ ಕಡಿದು ತಿಂದು ಸಂಹರಿಸುತ್ತಾಳೆ. ಹೀಗೊಂದು ಕಥೆ. ತಂತ್ರ ಸಾಧನೆಗಳು ಪುರಾಣಗಳಲ್ಲಿ ನುಸುಳಿರುವ ವಿಶೇಷತೆ ಇಲ್ಲಿದೆ. ತಂತ್ರ ಸಾಧನೆಯ ಒಂದು ರೂಪಕ ರಕ್ತಬೀಜಾಸುರ ಇದಕ್ಕೊಂದು ಬಹುಮುಖ್ಯವಾದ ಉದಾಹರಣೆ. ಸೃಷ್ಟಿಮೂಲದ ಸ್ತ್ರೀಭಾಗವಾದ ರಕ್ತವೂ, ಪುರುಷ ಭಾಗದ ಬೀಜವೂ ರಕ್ತಬೀಜಾಸುರನಾದ ಕಥೆ ಕುತೂಹಲಕರವಾದದ್ದು. ಅದನ್ನು ಮುಂದೆ ನೋಡುವ. ■

ಚಲೋ ಉಡುಪಿ ಚೆಲುವಾದ ನೀಲಿ ಉಡುಪಿಯಾಗಲಿ




ದಲಿತ ದಮನಿತರ ಸ್ವಾಭಿಮಾನಿ ಸಂಘರ್ಷ ಜಾಥಾದ ಬೃಹತ್ ಸಮಾವೇಶ ಅಕ್ಟೋಬರ್ ಒಂಬತ್ತಕ್ಕೆ ಉಡುಪಿಯಲ್ಲಿ ಜರುಗಲಿದ್ದು ಅದಕ್ಕೆ ಕರ್ನಾಟಕದೆಲ್ಲೆಡೆ 'ಚಲೋ ಉಡುಪಿ' ಎಂಬ ಘೋಷವಾಕ್ಯ ಬಳಸಲಾಗುತ್ತಿದೆ. ದಲಿತ ದಮನಿತರ ಸ್ವಾಭಿಮಾನದ ಸಂಕೇತವಾಗಿ ಈ ಜಾಥಾದಲ್ಲಿ ನೀಲಿ ಬಣ್ಣದ ಪತಾಕೆ ಎಲ್ಲೆಡೆ ಹಾರಾಡಲಿದೆ. ಆದರೆ ಕೆಲವೆಡೆ ಇದಕ್ಕೆ "ನೀಲಿ ಪರ್ಯಾಯ" ಎಂಬ ಉಪಮೆ ಬಳಸಲಾಗುತ್ತಿದೆ. ಆದರೆ ಉಡುಪಿಯ ಪರ್ಯಾಯ ಎಂದಕೂಡಲೇ ನಮಗೆ ಜ್ಞಾಪಕ ಬರುವುದು ಉಡುಪಿ ಕೃಷ್ಣ ಮಠದ ಹಲವಾರು ಕೆಟ್ಟ ವಿಷಯಗಳೇ!

ಜಾತಿವಾದ, ಮನುವಾದ, ಪಂಕ್ತಿ ಭೇದ, ಹಣದ ಲೋಭ, ಪಟ್ಟಭದ್ರತೆಯ ಸ್ವಾರ್ಥ, ನಾಗಾರ್ಜುನದಿಂದ ಸೂಟ್ ಕೇಸ್ ಸೇವೆ, ಭ್ರಷ್ಟ ರಾಜಕಾರಣಿಗಳ ಒಡನಾಟ, ಶತಭ್ರಷ್ಟ ಸರಕಾರಿ ಅಧಿಕಾರಿಗಳ ಶಿಫಾರಸು, ದಲಿತ ಕೇರಿಗೆ ಹೋಗುವ ನಾಟಕ, ದಲಿತ ಕೇರಿಯ ಗುಡಿಗೆ ಕೈಮುಗಿಯದೇ ಪ್ರಸಾದ ಸ್ವೀಕರಿಸದೇ ದೈವಕ್ಕೆ ಅವಮಾನ ಮಾಡಿದ್ದು, ರಾಷ್ಟ್ರಗೀತೆ ನುಡಿಸುವಾಗ ಕುಳಿತೇ ಇರುವ ನೀಚತನ, ಹಿರಿಯರನ್ನು ಸನ್ಮಾನಿಸುವಾಗಲೂ ಅವರನ್ನು ನಿಲ್ಲಿಸಿ ತಾವು ಕುಳಿತೇ ಇರುವ ಕೆಟ್ಟ ಪರಿಪಾಠ, ಹುಸಿ ಮತಾಂತರದ ಬೊಬ್ಬೆ, ಗೋರಕ್ಷಣೆಯ ಹೆಸರಲ್ಲಿ ನಾಟಕ, ರಾಮಮಂದಿರ ಕರಸೇವೆ ಹೆಸರಲ್ಲಿ ಕೋಮು ಗಲಭೆಗೆ ಪ್ರಚೋದನೆ, ಬಾಬ್ರಿಯ ಗುಮ್ಮಟದ ಮೇಲೇರಿ 'ಕುಡ್ವೇವ್ ಕುಡ್ವೇವ್' ಎಂಬ ಅರಚಾಟ, ಇವೆಲ್ಲಾ ಋಣಾತ್ಮಕ ಸಂಗತಿಗಳು ಪರ್ಯಾಯ ಎಂಬ ಪದದಿಂದಾಗಿ ಕೂಡಲೇ ಜನರ ನೆನಪಿಗೆ ಬರುತ್ತವೆ. ಹಾಗಾಗಿ ಪರ್ಯಾಯ ಎಂಬ ಋಣಾತ್ಮಕ ವಿಷಯಗಳನ್ನು ಪ್ರತಿನಿಧಿಸುವ ಶಬ್ದ ದಮನಿತರ 'ಚಲೋ ಉಡುಪಿ' ಜಾಥಾಕ್ಕೆ ಉಪಮೆ ಆಗಿ ಬಳಸುವುದು ಬೇಡ. ಬೇಕಾದರೆ ನೀಲಿ ಪರ್ಯಾಯ ಎಂಬ ಪದದ ಬದಲು "ನೀಲಿ ಕ್ರಾಂತಿ ಅಥವಾ ನೀಲಿ ಶಕ್ತಿ" ಎಂಬ ಶಬ್ದ ಬಳಸಬಹುದು. ಪರ್ಯಾಯ ಇದು ಉಡುಪಿ ಮಠದ ವೈದಿಕ ಸ್ವಾಮೀಜಿಗಳು ಪೂಜೆಗೆ ಕೂರುವ ಕ್ಷುಲ್ಲಕ ಮಣೆ ಬದಲಾವಣೆಯ ಹೆಸರು ಅಷ್ಟೇ.

ಉಡುಪಿ ದೇವಳದಲ್ಲಿ ಶೂದ್ರನಾದ ಕೃಷ್ಣನನ್ನೇ ತಮ್ಮ ಕಪಿಮುಷ್ಟಿಯಲ್ಲಿ ಇಟ್ಟುಕೊಂಡು ಶೂದ್ರ ದೇವರ ಮುಖಾಂತರ ಶೂದ್ರ ಜಾತಿಯವರನ್ನೇ ಶೋಷಿಸುವ ಕರಾಳ ಪದ್ಧತಿಯನ್ನು ಪರ್ಯಾಯ ಸಂಕೇತಿಸುತ್ತದೆ. ಸ್ವತಃ ಮಧ್ವಾಚಾರ್ಯರು ತನ್ನ ಹುಟ್ಟಿಸಿದ ತಾಯಿ ಸಹಿತ ಸಕಲ ಸ್ತ್ರೀಯರನ್ನು ಮತ್ತು ಶೂದ್ರರನ್ನು 'ನಿತ್ಯ ನಾರಕಿ'ಗಳೆಂದು ಕರೆದು ಘೋರವಾಗಿ ಅವಮಾನಿಸಿದನ್ನು ಹಾಗೂ ಸಂತ ಕನಕದಾಸರು ಕೆಳಜಾತಿಯವರು ಎಂಬ ಒಂದೇ ಕಾರಣಕ್ಕೆ ಅವರನ್ನು ದೇವಸ್ಥಾನದಿಂದ ಹೊರ ನೂಕಿದನ್ನೂ ಈ ಪರ್ಯಾಯ ಪ್ರತಿನಿಧಿಸುತ್ತದೆ.

ಜೈನ ಬಸದಿಯನ್ನು ಹಾಗೂ ಶೈವ ದೇವಸ್ಥಾನವನ್ನು ಕಬಳಿಸಿ ಅಲ್ಲಿ ತಮ್ಮ ವೈಷ್ಣವ ದೇವಸ್ಥಾನವನ್ನು ಬಲಾತ್ಕಾರದಿಂದ ಸ್ಥಾಪಿಸಿದ್ದನ್ನು ಹಾಗೂ ಸುಬ್ರಮಣ್ಯ ಮೂರ್ತಿಯನ್ನು ಕೃಷ್ಣನ ಮೂರ್ತಿಯಾಗಿ ಪರಿವರ್ತಿಸಿ ದೇವರನ್ನೇ ಮತಾಂತರಿಸಿದ್ದನ್ನೂ ಪರ್ಯಾಯ ಪದ ಜ್ಞಾಪಿಸುತ್ತದೆ. ನೀರಾ ರಾಡಿಯಾಳಂತಹ ಭ್ರಷ್ಟ ರಾಡಿ ಹಾಗೂ ಉಮಾಭಾರತಿಯಂತಹ ಕೂಗುಮಾರಿಯನ್ನು ಪರ್ಯಾಯ ಪದ ನೆನಪಿಸುತ್ತದೆ. ಯಡ್ಡಿ-ಚಡ್ಡಿ ಆಚಾರ್ಯರ ಕೊಳಕು ಆಟ ಹಾಗೂ ಕೃಷ್ಣ ದೇವಸ್ಥಾನದ ಖಾಸಗೀಕರಣದ ಘೋರ ಷಡ್ಯಂತ್ರವನ್ನು ಪರ್ಯಾಯ ಎಂಬ ಪದ ಪ್ರತಿನಿಧಿಸುತ್ತದೆ. ದಮನಿತ ಮೊಗವೀರರಿಂದ ವೈದಿಕರು ಪಲ್ಲಕ್ಕಿ ಹೊರಿಸುವ ಹೀನ ಗುಲಾಮೀ ಪದ್ಧತಿಯನ್ನು ಪರ್ಯಾಯ ಸಂಕೇತಿಸುತ್ತದೆ. ಹೊರೆ ಕಾಣಿಕೆಯ ನೆಪದಲ್ಲಿ ಮೇಲ್ಜಾತಿಯವರ ಹಣದ ಪ್ರದರ್ಶನದ ವೇದಿಕೆಯಾಗಿದೆ



ಈ ಪರ್ಯಾಯ.

ನೀಲಿ ಬಣ್ಣ ಪ್ರಾಮಾಣಿಕತೆ ಹಾಗೂ ಶ್ರಮವನ್ನು ಪ್ರತಿನಿಧಿಸುತ್ತದೆ. ಅದಕ್ಕಾಗಿಯೇ ಕಾರ್ಮಿಕರಿಗೆ 'ಬ್ಲೂ-ಕಾಲರ್' (ನೀಲಿ ಕಾಲರ್‌ನವರು) ಎಂದು ಜಗತ್ತಿನೆಲ್ಲೆಡೆ ಕರೆಯಲಾಗುತ್ತದೆ. ಶುಭ್ರ ಆಕಾಶದ ಬಣ್ಣ ಹಿತಕರ ನೀಲಿ. ಸಮುದ್ರದ ನೀರಿನ ಬಣ್ಣ ನೀಲಿ. ತಮಗೆ ಬದುಕು ನೀಡುವ ಈ ಸಮುದ್ರದ ನೀಲಿ ಬಣ್ಣ ಮೀನುಗಾರರಿಗೂ ಅತೀ ಪ್ರಿಯ ಬಣ್ಣ. ಹಾಗಾಗಿ ನೀಲಿ ಧ್ವಜ ಹಾಗೂ ನೀಲಿ ಬಂಟಿಂಗ್ಸ್‌ಗಳು ಅ.9 ಕ್ಕೆ ಉಡುಪಿಯಲ್ಲೆಲ್ಲಾ ರಾರಾಜಿಸಲಿ. ದಮನಿತರ ಶೋಷಿತರ ಸ್ವಾಭಿಮಾನದ ಚೆಲುಮೆಯಾಗಲಿ. ಚಲೋ ಉಡುಪಿ ಚೆಲುವಾದ ನೀಲಿ ಉಡುಪಿಯಾಗಲಿ. ಈ ಸಮಾವೇಶ ಭೀಮಾಕಾರವಾಗಿ ಬೆಳೆದು ಬುದ್ಧನ ಪಾದಕ್ಕೆ ಅರ್ಪಣೆಯಾಗಲಿ.

-ಕ್ಷಿತಿಜ್ ಕೆ ಹೆಗಡೆ, ಮಂಗಳೂರು

ಜನರು ಕಲ್ಲಡ್ಕನ ನಿಜರೂಪ ಅರಿಯಬೇಕಿದೆ

ಕೇರಳದಲ್ಲಿ ಆದ ಬಿಜೆಪಿ ಕಾರ್ಯಕಾರಿಣಿ ಸಭೆಯಲ್ಲಿ ಪ್ರಧಾನಿ ಮೋದಿ ಸಾಮರಸ್ಯ ಮಂತ್ರ ಜಪಿಸುತ್ತಾ ಮುಸ್ಲಿಮರನ್ನು ದ್ವೇಷಿಸಬೇಡಿ ಎಂದು ಬಿಜೆಪಿಯವರಿಗೆ ಹಾಗೂ ಸಂಘಪರಿವಾರಕ್ಕೆ ಪ್ರಚಂಡ ಕಿವಿಮಾತು ಹೇಳಿದ್ದಾರೆ. ಅದೇದಿನ ನಮ್ಮ ಕರಾವಳಿಯ ಸುಳ್ಯದಲ್ಲಿ ಹಿಂದೂತ್ವ ಸಂಘಟನೆಗಳು ಆಯೋಜಿಸಿದ್ದ ಮತಾಂತರ ವಿರೋಧಿ ಸಭೆಯಲ್ಲಿ ಮಾತನಾಡುತ್ತಾ ಕಲ್ಲಡ್ಕ ಡಾನ್ ಮೋದಿಯ ಸಾಮರಸ್ಯ ಮಂತ್ರಕ್ಕೆ ವಿರುದ್ಧವಾದ ಮಂತ್ರವನ್ನೇ ಪಠಿಸಿದ್ದಾನೆ. ಮೊನ್ನೆ ಕಲ್ಲಡ್ಕ ಹೇಳಿದ್ದೇನೆಂದರೆ: "ಮುಸ್ಲಿಮರೊಟ್ಟಿಗೆ ಯಾವುದೇ ಹಿಂದೂ ಎಂತಹದ್ದೇ ವ್ಯಾಪಾರ ಅಥವಾ ವೈಯಕ್ತಿಕ ಸಂಬಂಧವನ್ನೇ ಇಟ್ಟುಕೊಳ್ಳಬಾರದು. ಹಿಂದೂಗಳೆಲ್ಲಾ ಕೂಡಿ ಉಚ್ಚೆ ಹೊಯ್ದರೆ ಸುಳ್ಯದ ಬ್ಯಾರಿಗಳೆಲ್ಲಾ ಮುಳುಗಿ ಹೋಗುತ್ತಾರೆ (ಜಗ್ಗೇಶ್ ಉವಾಚ). ಮುಸ್ಲಿಮರನ್ನು ಸಂಪೂರ್ಣವಾಗಿ ಬಹಿಷ್ಕರಿಸಬೇಕು."


ಹೀಗೆ ಒಂದು ಗಂಟೆ ಕಾಲ ಕಲ್ಲಡ್ಕ ಡಾನ್ ಹಿಂದೂಗಳ ತಲೆಯಲ್ಲಿ ವಿಷ ತುಂಬುತ್ತಲೇ ಇದ್ದ. ಆದರೆ ಅಲ್ಲಿದ್ದ ಪೊಲೀಸರು ಕೋಮು ಪ್ರಚೋದನೆಗಾಗಿ ಅವನ ವಿರುದ್ಧ ಯಾವುದೇ ಕೇಸ್ ದಾಖಲಿಸಲಿಲ್ಲ. ಕೇರಳದಲ್ಲಿ ಅಥವಾ ಪಶ್ಚಿಮ ಬಂಗಾಳದಲ್ಲಿ ಅವನು ಹೀಗೆ ಭಾಷಣ ಮಾಡಿದ್ದರೆ ತಕ್ಷಣ ಅವನ ಬಂಧನವಾಗುತ್ತಿತ್ತು. ಆದರೆ ಕರ್ನಾಟಕದಲ್ಲಿ ಯಾರು ಎಷ್ಟೇ ಕೋಮು ಪ್ರಚೋದಕ ಭಾಷಣ ಮಾಡಿದರೂ ನಮ್ಮ ಪೊಲೀಸರು ಕ್ರಮ ಕೈಗೊಳ್ಳುವುದಿಲ್ಲ ಎಂಬುದೇ ದೊಡ್ಡ ದುರಂತ.

ಇನ್ನು ಮೋದಿ ಕೇರಳದಲ್ಲಿ ಹೇಳಿದಂತೆ ಹಿಂದೂಗಳು ಮುಸ್ಲಿಮರನ್ನು ದ್ವೇಷಿಸದೇ ಪ್ರೀತಿಸಿದರೆ ಕಲ್ಲಡ್ಕ ಗ್ಯಾಂಗ್ ಅದನ್ನು ಲವ್ ಜಿಹಾದ್ ಎಂದು ಹೇಳಿ ಪ್ರೀತಿಸುವವರನ್ನು ಬಡಿಯಬಹುದು. ಆಗ ಮೋದಿಯ ಮಾತಿಗೆ ಬೆಲೆ ಎಲ್ಲಿ ಉಳಿಯಿತು. ಸುಳ್ಯದಲ್ಲಿಯ ಅರೆ-ಭಾಷೆ ಗೌಡರ ಪಡ್ಡೆ ಹುಡುಗರು ಮಾತ್ರ ಈಗ ಕಲ್ಲಡ್ಕನ ಪ್ರಚೋದಕ ಭಾಷಣಕ್ಕೆ ಚಪ್ಪಾಳೆ ತಟ್ಟುವುದು. ಬಿಲ್ಲವ-ಬಂಟರು ಆತನ ನಿಜ ಬಣ್ಣ ಅರಿತಿದ್ದಾರೆ.

ಹಿಂದಿನ ಬಿಜೆಪಿ ಸರಕಾರದಲ್ಲಿ ಹಾಲಾಡಿ ಶ್ರೀನಿವಾಸ ಶೆಟ್ಟಿಗೆ ಕಲ್ಲಡ್ಕ ಡಾನ್ ಮಂತ್ರಿಪದವಿ ತಪ್ಪಿಸಿದ ನಂತರ ಹಾಲಾಡಿಯ ಬೆಂಬಲಿಗರು ಕಲ್ಲಡ್ಕಗೆ ಸರಿಯಾಗಿ ಇಕ್ಕಿದ್ದರು. ನಂತರ ಕಳೆದ ಲೋಕಸಭಾ ಚುನಾವಣೆಯಲ್ಲಿ ನಳಿನ್ ಕಟೀಲನ ಟಿಕೆಟ್ ತಪ್ಪಿಸಿ ಒಬ್ಬ ಕಂತ್ರಿ ಜೈನ ವಕೀಲನಿಗೆ ಮಂಗಳೂರು ಕ್ಷೇತ್ರದ ಟಿಕೆಟ್ ಕೊಡಿಸಲು ಕಲ್ಲಡ್ಕ ಪ್ರಯತ್ನಿಸಿದಾಗ ನಳಿನ್ ಕಟೀಲನೂ ಕಲ್ಲಡ್ಕನಿಗೆ ತಿರುಗಿ ಇಕ್ಕಿದ್ದನು. ತನ್ನದೇ ಸಂಘ ಪರಿವಾರದ ಹಾಲಾಡಿ ಮತ್ತು ಕಟೀಲ ಈ ಇಬ್ಬರು ಬಂಟರಿಂದ ಇಕ್ಕಿಸಿಕೊಂಡ ನಂತರ ಕಲ್ಲಡ್ಕನ ಮುಸ್ಲಿಂ ದ್ವೇಷ ಕಡಿಮೆಯಾಗಿತ್ತು ಎಂದು ಜನರು ಭಾವಿಸಿದ್ದರು. ಯಾಕೆಂದರೆ ಇದೇ ಕಲ್ಲಡ್ಕ ಡಾನ್ ಆಗ ಬಂಟರ ಬಗ್ಗೆ ಹೇಳಿದ್ದೇನೆಂದರೆ: "ಬ್ಯಾರಿಗಳನ್ನು ನಾಲ್ಕು ಹೆಜ್ಜೆಗಾದರೂ ನಂಬಬಹುದು ಆದರೆ ಈ ಬಂಟರನ್ನು ಒಂದು ಹೆಜ್ಜೆಗೂ ನಂಬಬಾರದು. ನನ್ನಿಂದಲೇ ಮೇಲೆ ಬಂದ ಈ ಬಂಟರು ಈಗ ನನಗೇ ಉಲ್ಟಾ ಹೊಡೆಯುತ್ತಿದ್ದಾರೆ. ಈ ಬಂಟರ ಸಂಗ ಅಭಿಮಾನ ಭಂಗ."

ಸುಳ್ಯದ ಅರೆಭಾಷೆ ಗೌಡರೂ ಈಗ ಕಲ್ಲಡ್ಕನ ನಿಜರೂಪ ಕ್ರಮೇಣ ಅರಿಯುತ್ತಿರುವುದರಿಂದ ಒಂದು ದಿನ ಅವರೂ ತಿರುಗಿ ಬಿದ್ದಾಗ ಕಲ್ಲಡ್ಕ ಡಾನ್ ಅರೆಭಾಷೆ ಗೌಡರಿಗೂ "ಈ ಅರೆ-ಮಂಡೆ ಗೌಡರಿಗಿಂತ ಬ್ಯಾರಿಗಳೇ ವಾಸಿ" ಎಂದು ಹೇಳದೇ ಬಿಡಲಾರ. ಅಂತಹ ಕೊಳಕು ಮಂಡಲ ಹಾವು ಆತ.

ಸಂಘಿಗಳ ಚಿತಾವಣೆ ಮಾತುಕೇಳಿ ಸುಳ್ಯದ ಜನಾರ್ದನ ಗೌಡ ಎಂಬವನು "ನನ್ನ ಮಗ ದೀಕ್ಷಿತ್ ಗೌಡ ಮನೆಯಲ್ಲಿ ನಮಾಜು ಮಾಡುವುದನ್ನು ಕಂಡು ನಾನು ಹೊಡೆದಿದ್ದರಿಂದ ಅವನು ಮನೆ ಬಿಟ್ಟು ಕೇರಳಕ್ಕೆ ಓಡಿಹೋಗಿ ಮುಸ್ಲಿಮನಾಗಿ ಮತಾಂತರ ಆಗಿದ್ದಾನೆ" ಎಂದು ಪೊಲೀಸರಿಗೆ ದೂರು ಕೊಟ್ಟಿದ್ದನು. ತನ್ನ ಮಗ ದೀಕ್ಷಿತ್ ಬೆಂಗಳೂರಿನಲ್ಲಿದ್ದಾನೆ ಹಾಗೂ ದಿನಾಲೂ ಅವನು ತನ್ನ ತಾಯಿಯೊಂದಿಗೆ ಫೋನಿನಲ್ಲಿ ಮಾತನಾಡುತ್ತಾನೆ ಎಂದು ಜನಾರ್ದನ ಗೌಡನಿಗೆ ಗೊತ್ತಿದ್ದರೂ ಅವನು ತನ್ನ ಹೆಂಡತಿಯ ಮಾತು ಕೇಳದೇ ಸುಳ್ಳು ಪೊಲೀಸ್ ಕಂಪ್ಲೇಂಟ್ ಕೊಟ್ಟಿದ್ದ. ಕೊನೆಗೆ ದೀಕ್ಷಿತ್ ಗೌಡ ತನ್ನ ತಾಯಿಯ ಸಲಹೆಯಂತೆ ಬೆಂಗಳೂರಿನಿಂದ ಸುಳ್ಯಕ್ಕೆ ಬಂದು ತಾನು ಎಂದೂ ಮನೆಯಲ್ಲಿ ನಮಾಜು ಮಾಡಿಲ್ಲ ಹಾಗೂ ಮತಾಂತರ ಆಗಿಲ್ಲ ಎಂದು ಪೊಲೀಸರಿಗೆ ಹೇಳಿಕೆ ಕೊಟ್ಟ ಮೇಲೆ ಪ್ರಕರಣವನ್ನು ಪೊಲೀಸರು ಮುಚ್ಚಿದರು. ನಿಜವಾಗಿ ಈ ಜನಾರ್ದನ ಗೌಡ ತನ್ನ ಮಗನ ವಿರುದ್ಧ ಕೊಟ್ಟ ಸುಳ್ಳು ದೂರಿನ ಆಧಾರದ



ಮೇಲೆಯೇ ಕಲ್ಲಡ್ಕ ಡಾನ್ ಸುಳ್ಯದಲ್ಲಿ ಸಭೆ ನಡೆಸಿ ಮುಸ್ಲಿಮರ ವಿರುದ್ಧ ಅಂತಹ ಪ್ರಚೋದಾತ್ಮಕ ಭಾಷಣ ಮಾಡಿದ್ದು. ಹಾಗಾಗಿ ಪೊಲೀಸರು ಈ ಪ್ರಕರಣ ಮುಚ್ಚದೇ ಜನಾರ್ದನ ಗೌಡನ ವಿರುದ್ಧ ಅವನ ಸುಳ್ಳು ದೂರಿನಿಂದಾಗಿ ಸಮಾಜದ ಶಾಂತಿ ಕೆಡುವಂತಾಗಿತ್ತು ಎಂಬ ಆರೋಪ ಹೊರಿಸಿ ಅವನನ್ನು ಕೋರ್ಟಿಗೆ ಎಳೆಯಬೇಕಿತ್ತು. ಕಾರಣ ಅವನ ದೂರಿನ ಹಿಂದೆ ಕೋಮು ಗಲಭೆ ಹಬ್ಬಿಸುವ ಭಯಂಕರ ಸಂಘಿ ಷಡ್ಯಂತ್ರ ಇದ್ದಿದ್ದು ಸ್ಪಷ್ಟ. ಹಾಗಿರುವಾಗ ಅವನನ್ನು ಸುಲಭವಾಗಿ ಪೊಲೀಸರು ಬಿಟ್ಟು ಬಿಟ್ಟಿದ್ದು ತಪ್ಪು. ಕುತಂತ್ರಿಗಳ ಕೈಯಲ್ಲಿ ತಾವು ದಾಳವಾಗುವುದಲ್ಲದೇ ಪೊಲೀಸರನ್ನೂ ದಾಳವಾಗಿಸುವ ಇಂತಹ ಗೌಡರಿಗೆ ಇದೊಂದು ಪಾಠವಾಗಬೇಕಿತ್ತು.

-ಆರ್.ಬಿ.ಶೆಣಾವ, ಮಂಗಳೂರು

ಧರೆ ಹೊತ್ತಿ ಉರಿದೊಡೆ ನಿಲಲಾಗದಯ್ಯ?

ನಾಗರಿಕ-ಅನಾಗರಿಕ, ಕಲ್ಚರ್ಡ್-ಅನ್ ಕಲ್ಚರ್ಡ್ ಎನ್ನುವುದೆಲ್ಲ ಬಾಯಿ ಮಾತಿನ ಅನುಕೂಲಕ್ಕಾಗಿ ನಾವೇ



ಸೃಷ್ಟಿಸಿಕೊಂಡಂತಹ ಪದಗಳೇ ವಿನಃ ಅನೇಕಬಾರಿ ಅ… ಅಥವ ಅನ್ ಕಲ್ಚರ್ಡ್ ಎಂದು ಬೊಟ್ಟು ಮಾಡಲ್ಪಡು… ನ್ಯಾಯಯುತವಾಗಿ ಹೆಚ್ಚು ಸಹಬಾಳ್ವೆ… ಬದುಕಿರುತ್ತಾರೆಯೇ ವಿನಹ ಕಲ್ಚರ್ಡ್ ಮಂದಿ… ಲೇಬಲ್ಲಿಗಷ್ಟೇ ಸೀಮಿತಗೊಳಿಸಿ ಬಹ… ಮುಖವಾಡದೊಳಗೇ ನಾಟಕೀಯವಾಗಿ ಬದುಕು… ಸಂದರ್ಭವೇ ಹೆಚ್ಚು.

ಪ್ರಾಣಿಗಳಂತೆಯೋ ಅಲೆಮಾರಿಯಂತ… ಬದುಕುತ್ತಿದ್ದ ಮಾನವ ಕ್ರಮೇಣ ಎಲ್ಲೋ ಒಂದೆಡೆ… ಸಾಮುದಾಯಿಕವಾಗಿ ಸ್ಥಿರ ಬದುಕನ್ನು ಕಟ್ಟಿಕೊಂಡ… ಪ್ರಾಣಿಗಳ ಬದುಕಿಗೆ ಹೊರತಾದ ರೀತಿಯಲ್ಲಿ ಬ… ತನ್ನದೇ ಆದಂತಹ ಕೆಲ ಕಟ್ಟುಪಾಡುಗಳನ್ನು ರಚಿಸಿ… (ಉದಾ: ನಾಯಕನೊಬ್ಬನ ಯಜಮಾನಿಕೆ, ಸಾಂ… ತಪ್ಪುಒಪ್ಪುಗಳ ತೀರ್ಮಾನದ ಹಕ್ಕು ಇತ್ಯಾದಿ). ಹೀಗೆ… 'ನಾಗರಿಕ' ಬದುಕನ್ನು ಕಟ್ಟಿಕೊಂಡನಾದರೂ… ಉಲ್ಲೇಖಿಸಲ್ಪಡುವ ಮುಂದುವರಿದ ನಾಗರಿಕತೆ ಎಷ್ಟ… ಬಂದು ನಿಂತಿದೆಯೆಂದರೆ ಇವೆಲ್ಲಕ್ಕಿಂತ ಆ ಪ್ರಾಣಿ ಜೀ… ವಾಸಿ ಎನ್ನುವಷ್ಟರ ಮಟ್ಟಿಗೆ.

ಆಧುನಿಕ ನಾಗರಿಕ ಜೀವನದಲ್ಲಿ ಮಾನವ ಬ… ಮತ್ತಷ್ಟು 'ಮಾನವೀಯ'ವಾಗಿಸಿದ್ದು ಮುಖ್ಯವಾಗಿ… ವಿಚಾರಗಳು. ಒಂದು ವಿದ್ಯೆಯಾದರೆ ಮತ್ತೆ… ನ್ಯಾಯದಾನದ ವ್ಯವಸ್ಥೆ (ಅಧ್ಯಾತ್ಮ ಹಾಗು ಸ… ಧಾರ್ಮಿಕತೆ ಹೊಟ್ಟೆ ತುಂಬಿದವರ ವಿಚಾರಕ್ಕೆ ಸ… ಪಟ್ಟಂತದ್ದೇ ಹೊರತು ಸಾರ್ವತ್ರಿಕ ಅವಶ್ಯಕತೆಯ… ಕೆಲವು ಅಪವಾದಗಳ ಹೊರತಾಗಿಯೂ ಅನ್ಯಾಯ… ಯಾವನೇ ಒಬ್ಬ ಪ್ರಜೆ ಈ ನಾಗರಿಕ ಜಗತ್ತಿನಲ್ಲಿ… ಎದುರಿಸುವಂತಹ ನೈತಿಕ ಧೈರ್ಯವನ್ನು ಈ ನ್ಯಾಯ… ವ್ಯವಸ್ಥೆ ಹಾಗು ಕಾನೂನುಗಳು ನಮಗೆ ನೀಡಿರುವ… ನಮ್ಮಯ ಬದುಕು ಇನ್ನಷ್ಟು ಸಹ್ಯವೆನಿಸಿದ… ಹೌದಾದರೂ ನ್ಯಾಯಾಂಗ ಹಾಗು ಕಾನೂನಿನ… ನಂಬಿಕೆಯನ್ನು ಕಳಕೊಳ್ಳುವಂತಹ ಪ್ರಸಂಗಗಳು ಮ… ಮೇಲೆ ಜರುಗುತ್ತಾ ಹೋದಲ್ಲಿ ಜನಸಾಮಾನ್ಯನ… ನೆಲವೇ ನಡುಗಿದ ಅನುಭವವಾಗದಿರದೇ? ಕಾ… ಹಾಗು ನ್ಯಾಯದಾನದ ವ್ಯಾಖ್ಯಾನವೇ ಹಳಿತಪ್ಪ… ಇವತ್ತಿನ ಸಂದರ್ಭದಲ್ಲಿ ಅಣ್ಣ ಬಸವಣ್ಣನವರ ವಚನ… ನೆನಪಿಗೆ ಬರುತ್ತದೆ.

ಒಲೆ ಹತ್ತಿ ಉರಿದೊಡೆ ನಿಲಬಹುದಲ್ಲದೆ…
ಹೊತ್ತಿ ಉರಿದೊಡೆ ನಿಲಲುಬಾರದು

ಏರಿ ನೀರುಣ್ಬೊಡೆ ಬೇಲಿ ಕೆಯ್ಯ ಮೇವೊಡ…
ತನ್ನ ಮನೆಯಲ್ಲಿ ಕಳುವೊಡೆ

ತಾಯ ಮೊಲೆವಾಲು ನಂಜಾಗಿ ಕೊಲುವೊಡೆ …
ದೂರುವೆ ಕೂಡಲ ಸಂಗಮದೇವಾ?

ಧಾರ್ಮಿಕತೆಯ ಸೋಗಿನಲ್ಲಿ ಅನೇಕ ವಿವಾಹಿತ… ಅವಿವಾಹಿತ ಹೆಣ್ಣುಗಳ ಸೆರಗಿಗೆ ಕೈಹಾಕಿದ್ದ ದಿ… ಸ್ವಾಮಿಯೊಬ್ಬರ ಮೇಲೆ ಧೈರ್ಯ ತೋರಿ ಕೇಸು… ಮಹಿಳೆಗೆ ನ್ಯಾಯ ಇಂದಿಗೂ ಮರೀಚಿಕೆಯಾ… ಅಣಕಿಸುತ್ತಿದೆ. ಸರ್ವಸಂಗ ಪರಿತ್ಯಾಗಿಯೆನಿಸಿದ್ದ ಸ್ವಾ… ಶುದ್ಧತೆಯ ನಾಟಕ ಸುಳ್ಳೆಂಬುದು ಬಯಲಾಯಿತಾ… ಮಹಿಳೆಗೆ ಸಿಗಬೇಕಿದ್ದ ನ್ಯಾಯ ಇನ್ನೂ ಸಿಗದೇ ಕಳಂ… ಮೂಲೆ ಸೇರಬೇಕಿದ್ದ ಸ್ವಾಮಿ ಈಗ ದೇಶಾದ್ಯಂತ ಗ… ಹೆಸರಲಿ ದಿಗ್ವಿಜಯಕ್ಕೆ ಹೊರಟಿದ್ದಾನಂತೆ. ಇದು ಕ… ಜಗತ್ತಿನ ಅಣಕವಲ್ಲದೇ ಮತ್ತೇನು?


ಸೌಜನ್ಯಾ ಎಂಬ ಲೋಕದ ಯಾವ ನಾ… ಸಲ್ಲದಂತಿರುವ ಅಮಾಯಕ ಹೆಣ್ಣೊಬ್ಬಳು ಕೊ… ಹೆಣವಾದಾಗ ಇಡೀ ಪರಿಸರವೇ ಬೆಚ್ಚಿಬಿದ್ದಿತ್ತು. ಈ ಕ… ಜನಸಾಗರವೇ ಬೀದಿಗಿಳಿಯಿತಾದರೂ ಇದೀಗ ಸ… ಕುರಿತ ತೀರ್ಪು ಹೊರಬಿದ್ದು ಆ ಸಾಗರವನ್ನೇ …



ಅನಾಮತ್ತಾಗಿ ಆಪೋಷನ ತೆಗೆದುಕೊಂಡು ಎಲ್ಲರನ್ನು ಆಣಕಿಸುತ್ತಿದೆ.

ಕಟೀಲು ದೇವಿಯ ಕುರಿತಾಗಿ ಮುಸಲ್ಮಾನನೊಬ್ಬ ಫೇಸ್ಬುಕ್ಕಿನಲ್ಲಿ ಅವಹೇಳನಕಾರಿಯಾಗಿ ಬರೆದುದ್ದನ್ನು ವಿರೋಧಿಸಿ ಕರಾವಳಿಯಲ್ಲಿ ಮೇಲಿಂದ ಮೇಲೆ ಗಲಾಟೆ ರ್‍ಯಾಲಿಗಳು ನಡೆಯುತ್ತಿದೆ. ಹೌದು, ಅವಹೇಳನಕಾರಿಯಾಗಿ ವಿನಾಕಾರಣ ಬರೆದದ್ದು ಆತನ ತಪ್ಪು ಖಂಡಿತಾ ಹೌದು. ಆದರೆ ಇದೇ ಸಂದರ್ಭದಲ್ಲಿ ಘಟಿಸಿರುವ ಭಾಸ್ಕರ ಶೆಟ್ಟಿ ಕೊಲೆ ಪ್ರಕರಣ, ವಿದ್ಯಾರ್ಥಿನಿಯರ ಟಾಯ್ಲೆಟ್ಟಿನಲ್ಲಿ ಕ್ಯಾಮರಾ ಇಟ್ಟ ಪ್ರಕರಣ, ಪ್ರವೀಣ್ ಪೂಜಾರಿಯ ಕೊಲೆ ಪ್ರಕರಣ, ಬಾಳಿಗಾ ಹತ್ಯೆಯ ಆರೋಪಿಯ ಜಾಮೀನು ಬಿಡುಗಡೆ, ಒಂದು ವರ್ಷ ಕಳೆದರೂ ಇನ್ನೂ ಪ್ರಗತಿ ಕಾಣದ ಕಲ್ಬುರ್ಗಿ ಹತ್ಯೆ ಪ್ರಕರಣ, ದೇಶದ ಕಾನೂನಿಗೂ ಅತೀತರಂತೆ ವರ್ತಿಸುವ ಗೋರಾಕ್ಷಸರ ಅತಿರೇಕದ ದುಂಡಾವರ್ತಿ ಇತ್ಯಾದಿಗಳನ್ನು ಮುಂದಿಟ್ಟುಕೊಂಡು ಇದೇ ರೀತಿಯ ಒಂದೂ ರ್‍ಯಾಲಿ ಕರಾವಳಿಯಲ್ಲಿ ನಡೆಯುತ್ತಿಲ್ಲವೇಕೇ?

ಒಂದುವೇಳೆ ಲೇಡಿಸ್ ಟಾಯ್ಲೆಟ್ಟಿನಲ್ಲಿ ಕ್ಯಾಮರಾ ಇಟ್ಟಾತ ಮುಸಲ್ಮಾನನಾಗಿದ್ದಿದ್ದರೆ ಇಡೀ ಕರಾವಳಿಯಲ್ಲಿ ಒಂದು ತಿಂಗಳವರೆಗೆ ಹೊತ್ತಿ ಉರಿದು ಗಲಾಟೆ ಪ್ರತಿಭಟನೆಗಳು ಭೀಕರ ಭಾಷಣಗಳು ನಡೆಯುತ್ತಿತ್ತು. ಆದರೆ ಈ ಸಂತೋಷನನ್ನೀಗ ಬಾಯಿಗೆ ಬೆರಳಿಟ್ಟರೂ ಚೀಪಲು ತಿಳಿಯದಂತಹ ಅಮಾಯಕನೆಂದು ಚಿತ್ರಿಸಿ ಆತನಿಗೆ ಸುಲಭದಲ್ಲಿ ಜಾಮೀನನ್ನೂ ಕೊಡಿಸಲಾಗಿದೆ. ನುಣುಚಿಕೊಳ್ಳಲು ಹೊಸೆಯಲಾದ ಕತೆಯ ಪ್ರಕಾರ ಈ ಸಂತೋಷ ಯಾವುದೋ ಹುಡುಗಿಯೊಂದಿಗೆ ಜಗಳವಾಡಿ ಚಾಲೆಂಜ್



ಹಾಕಿದ್ದನಂತೆ. ಅಲ್ಲಾ ಸ್ವಾಮಿ, ಯಾರಿಗೆ "ಪ್ರಕೃತಿಯ ಕರೆ" ಯಾವಾಗ ಬರುತ್ತದೆ ಎಂದು ಯಾರಿಗೆ ತಾನೆ ಹೇಳಲು ಸಾಧ್ಯ? ಚಾಲೆಂಜಿನ ಹುಡುಗಿಯಲ್ಲದೇ ಇತರರೇ ಟಾಯ್ಲೆಟ್ ಒಳಗೆ ಬಂದುಹೋಗುವ ಸಾಧ್ಯತೆಯೇ ಹೆಚ್ಚು. ಕೇವಲ ಜಗಳ ಚಾಲೆಂಜಿನ ಕಾರಣಕ್ಕೆ ಯಾರೂ ಕೂಡ ಇಂತಹ ಅನಾಹುತಕಾರಿ ಹಾಗು ಅಪಾಯಕಾರಿ ಕೆಲಸಕ್ಕೆ ಕೈ ಹಾಕರು. ಇಂತಹ ತಿಳಿಗೇಡಿಗೆ ತಕ್ಷಣ ಜಾಮೀನು ದೊರೆತಿದ್ದರಲ್ಲೇ ಖಂಡಿತ ಏನೋ ಮಸಲತ್ತಿರುವ ಹಾಗಿದೆ.


ಭಾರತದ ಉದ್ಧಾರಕ್ಕಾಗಿ ಧರೆಗಿಳಿದ ಅತಿಮಾನುಷ ವ್ಯಕ್ತಿಯ ಜನ್ಮದಿನ ಆಚರಿಸುವ ನೆಪದಲ್ಲಿ ದಲಿತ ಯುವನಾಯಕ ಜಿಗ್ನೇಶ್ ಮೇವಾನಿಯನ್ನು ವಿನಾಕಾರಣ ಬಂಧಿಸಲಾಯಿತು. (ಇದೇನೂ ಹೊಸದಲ್ಲ, ಕನ್ನಯ ಕುಮಾರ್ ಬಂಧನ ಮತ್ತು ರೋಹಿಂತ್ ವೇಮುಲ ಆತ್ಮಹತ್ಯೆಗೆ ಸಾಂಘಿಕ ಪ್ರಚೋದನೆ ಇತ್ಯಾದಿಗಳನ್ನು ಮರೆಯಲಾದೀತೇ?) ಕಾವೇರಿ ವಿವಾದ ಭುಗಿಲೆದ್ದಾಗ ಕಾಂಗ್ರೆಸ್ಸಿನ ಸಿದ್ಧರಾಮಯ್ಯನ ಪೀಕಲಾಟ ಕಂಡು ಮನಸಲ್ಲೇ ಖುಷಿಪಡುವ ಪ್ರಧಾನಿ "ಮಾತುಕತೆಯಿಂದ ನೀವು ನೀವೇ ಇದನ್ನು ಪರಿಹರಿಸಿಕೊಳ್ಳಿ" ಎಂದು ಬಿಟ್ಟಿ ಸಲಹೆ ಕೊಡುತ್ತಾರೆಯೇ ಹೊರತು ತಮಿಳರೇ ತುಂಬಿಕೊಂಡಿರುವ ಕನ್ನಡದ ಬೆಂಗಳೂರಿನಲ್ಲಿ ದ್ವೇಷದ ಬೆಂಕಿಯನ್ನು ನಂದಿಸುವ ಯಾವ ಪ್ರಾಮಾಣಿಕ ಪ್ರಯತ್ನಕ್ಕೂ ಇಳಿಯಲಿಲ್ಲ. ಆದರೆ ಚುನಾವಣೆಯ ದೂ(ದು)ರಾಲೋಚನೆಯಿಟ್ಟುಕೊಂಡು ದೂರದ ಕೇರಳದಲ್ಲಿ ಪಟಾಕಿ ಶಬ್ದ ಕೇಳಿಬಂದಾಗ ಇದೇ ಪ್ರಧಾನಿಗಳು ಓಡಿಬಂದಿದ್ದರು.

ಯಾಕೆಂದರೆ, ಆಗ ಮಾತ್ರ ಪ್ರಧಾನಿಗೆ ದಕ್ಷಿಣದ ಕೇರಳ ಇಂಡಿಯಾದ ಭಾಗವಾಗಿತ್ತು; ಕಾವೇರಿಗೆ ಬೆಂಕಿ ಹಚ್ಚಿಕೊಂಡಾಗಲಲ್ಲ, ಇಂತಹವರಿಂದ ಆಳಿಸಿಕೊಳ್ಳುತ್ತಿರುವ ಇವತ್ತಿನ ಸಂದರ್ಭದಲ್ಲಿ ಈ ನೆಲದ ಕಾನೂನು ನ್ಯಾಯಾಧಿಕಾರಗಳೆಲ್ಲ ಉಳ್ಳವರ ಕಡೆಗೆ ಮುಖಮಾಡುತ್ತಿರುವುದನ್ನು ಕಂಡಾಗ ಮೇಲಿನ ಬಸವಣ್ಣನ ವಚನ ಬೇಡವೆಂದರೂ ನೆನಪಿಗೆ ಬಂದು ಕಾಡುತ್ತದೆ.

-ಓದುಗ

ಬಳ್ಳಾರಿ ದರ್ಬಾರ್ ಅನ್ನೋದು ಮತ್ತೊಂದು ತೂಫಾನ್: ಸ್ಟೈಲ್ ಶ್ರೀನು

ನಾಲ್ಕು ವರ್ಷಗಳ ಹಿಂದೆ 'ತೂಫಾನ್' ಚಿತ್ರದ ಮೂಲಕ ಸ್ಯಾಂಡಲ್‌ವುಡ್‌ನಲ್ಲಿ ಗುರುತಿಸಿಕೊಂಡಿದ್ದರು ನಿರ್ದೇಶಕ ಸ್ಟೈಲ್ ಶ್ರೀನು. ಆನಂತರ ತೆಲುಗು ಇಂಡಸ್ಟ್ರಿಯತ್ತ ಮುಖ ಮಾಡಿದ್ದರು. ಈಗ ಮತ್ತೊಂದು ಸಿನಿಮಾದೊಂದಿಗೆ ಕನ್ನಡಕ್ಕೆ ವಾಪಸ್ಸಾಗಿದ್ದಾರೆ. ಈ ಬಾರಿ ಅವರು ಬಳ್ಳಾರಿಯಲ್ಲಿ ನಡೆದಿದ್ದ ದರ್ಬಾರ್ ಅನ್ನು ತೆರೆಯ ಮೇಲೆ ತರುತ್ತಿದ್ದಾರೆ.



'ತೂಫಾನ್' ಚಿತ್ರದ ಮೂಲಕ ಸ್ಯಾಂಡಲ್‌ವುಡ್‌ನಲ್ಲಿ ಗುರುತಿಸಿಕೊಂಡವರು ನಿರ್ದೇಶಕ ಸ್ಟೈಲ್ ಶ್ರೀನು. ಬಾಕ್ಸ್ ಆಫೀಸ್‌ನಲ್ಲಿ ತಕ್ಕಮಟ್ಟಿಗೆ ಸದ್ದು ಮಾಡಿದ್ದ 'ತೂಫಾನ್' ಸಿನಿಮಾ ವಿಮರ್ಶಕರ ಮೆಚ್ಚುಗೆಗೂ ಪಾತ್ರವಾಗಿತ್ತು. ಅದರಲ್ಲೂ ಆ ಸಿನಿಮಾದ ಕ್ಲೈಮ್ಯಾಕ್ಸ್ ಸನ್ನಿವೇಶಕ್ಕೆ ಪ್ರೇಕ್ಷಕರೂ ಫಿದಾ ಆಗಿದ್ದರು. ಇಂತಹ ಚಿತ್ರದ ನಿರ್ದೇಶಕರು ಮತ್ತೆ ಕನ್ನಡದಲ್ಲಿ ಸಿನಿಮಾ ಮಾಡಲಿಲ್ಲ, ತೆಲುಗು ಚಿತ್ರರಂಗದತ್ತ ಮುಖ ಮಾಡಿದ್ದವರು, ಬರೋಬ್ಬರಿ ನಾಲ್ಕು ವರ್ಷಗಳ ನಂತರ ಮತ್ತೆ ಸ್ಯಾಂಡಲ್‌ವುಡ್‌ಗೆ ವಾಪಸ್ಸಾಗಿದ್ದಾರೆ. ಅಂದು 'ತೂಫಾನ್'ಗೆ ಡೈರೆಕ್ಷನ್ ನೀಡಿದ್ದ ಇವರು, ಇಂದು 'ಬಳ್ಳಾರಿ ದರ್ಬಾರ್' ಅನ್ನು ಬೆಳ್ಳಿತೆರೆಯ ಮೇಲೆ ತೋರಿಸಲಿದ್ದಾರೆ. ಮೇಲ್ನೋಟಕ್ಕೆ ಕಾಂಟ್ರೋವರ್ಸಿ ಕತೆ ಎಂದು ತೋರುತ್ತಿರುವ ಈ ಚಿತ್ರದ ಬಗ್ಗೆ ನಿರ್ದೇಶಕರು ಮಾತಾಡಿದ್ದಾರೆ.

** ನಾಲ್ಕು ವರ್ಷಗಳ ಹಿಂದೆ 'ತೂಫಾನ್' ಚಿತ್ರವನ್ನು ನಿರ್ದೇಶನ ಮಾಡಿದವರು ಆನಂತರ ಸ್ಯಾಂಡಲ್‌ವುಡ್‌ನಲ್ಲಿ ಯಾಕೆ ಸಿನಿಮಾ ಮಾಡಲಿಲ್ಲ?*

ಮಾಡಬಾರದು ಅಂತೇನೂ ಇರಲಿಲ್ಲ. ತೆಲುಗಿನಲ್ಲಿ ಸಿನಿಮಾ ಮಾಡಲು ಆಫರ್ ಬಂತು. ಅಲ್ಲದೇ ಆ ಕತೆಯು ಆ ನೆಲಕ್ಕೆ ಒಪ್ಪುವಂಥದ್ದಾಗಿತ್ತು. ಹೀಗಾಗಿ ತೆಲುಗಿಗೆ ಹೋದೆ. ಈಗ ಮತ್ತೆ ಕನ್ನಡದಲ್ಲೇ ಸಿನಿಮಾ ಮಾಡುತ್ತಿದ್ದೇನೆ. ಅದು ನನ್ನದೇ ನೆಲದ ಕತೆ. ಹೊಸ ಕಲಾವಿದರ ಜತೆ ಕೆಲಸ ಮಾಡಿದ್ದೇನೆ. ಅವರ ಮೂಲಕ ಬಳ್ಳಾರಿ ನೆಲದ ಸ್ಟೋರಿಯನ್ನು ಹೇಳುತ್ತಿದ್ದೇನೆ.

** 'ಬಳ್ಳಾರಿ ದರ್ಬಾರ್' ಅಂದರೇನು? ಯಾವ ಕಾರಣಕ್ಕೆ ಇಂಥದ್ದೊಂದು ಶೀರ್ಷಿಕೆ ಇಟ್ಟಿದ್ದೀರಿ?*

ಬಳ್ಳಾರಿ ಅಂದಾಕ್ಷಣ ಥಟ್ಟನೆ ನೆನಪಾಗುವುದು ಅಲ್ಲಿನ ರಾಜಕೀಯ ಮತ್ತು ಮೈನಿಂಗ್. ಈ ಎರಡೂ ನನ್ನ ಸಿನಿಮಾದಲ್ಲಿವೆ. ಹಾಗಾಗಿಯೇ ಚಿತ್ರಕ್ಕೆ 'ಬಳ್ಳಾರಿ ದರ್ಬಾರ್' ಎಂದು ಹೆಸರಿಟ್ಟಿದ್ದೇನೆ. ಹಾಗಂತ ಯಾರನ್ನೋ ಟಾರ್ಗೆಟ್ ಮಾಡಿರುವ ಚಿತ್ರವಂತೂ ಇದಲ್ಲ. ನೈಜ ಘಟನೆಗಳನ್ನು ಸಿನಿಮಾದಲ್ಲಿ ತಂದಿದ್ದೇನೆ. ಯಾರಿಗೂ ನೋಯಿಸದಂತೆ ಚಿತ್ರ ಮಾಡಿದ್ದೇನೆ.

** ಬಳ್ಳಾರಿಯ ರಾಜಕೀಯ ಅಂದಾಕ್ಷಣ ಮೂರ್‍ನಾಲ್ಕು ಜನರ ಹೆಸರು ನೆನಪಾಗುತ್ತವೆ. ಅವರ ಕತೆ ಸಿನಿಮಾದಲ್ಲಿ ಇದೆಯಾ?*

ಕತೆಯ ಬಗ್ಗೆ ಏನೂ ಹೇಳಲಾರೆ. ಆಗಲೇ ಹೇಳಿದಂತೆ ಇಲ್ಲಿ ಯಾರನ್ನೂ ನೋಯಿಸುವಂಥ ಕೆಲಸ ಮಾಡಿಲ್ಲ. ಈಗಾಗಲೇ ನಡೆದಿರುವ ಘಟನೆಗಳನ್ನು ಚಿತ್ರಕತೆಯಲ್ಲಿ ಬಳಸಿಕೊಂಡಿದ್ದೇನೆ. ಮೈನಿಂಗ್‌ನಿಂದಾಗಿ ಮಧ್ಯಮ ವರ್ಗದ ಕುಟುಂಬದ ಮೇಲೆ ಆದ ಪರಿಣಾಮ ಕೂಡ ಚಿತ್ರದಲ್ಲಿದೆ. ಸದ್ಯದ ಸ್ಥಿತಿಯನ್ನೂ ಹಿಡಿದಿಡುವ ಪ್ರಯತ್ನ ಮಾಡಿದ್ದೇನೆ.

** 'ಬಳ್ಳಾರಿ ದರ್ಬಾರ್'ನ ವಿಶೇಷತೆ ಏನು? ಯಾತಕ್ಕಾಗಿ ನಿಮ್ಮ ಸಿನಿಮಾವನ್ನು ಜನರು ನೋಡಬೇಕು?*

ಕತೆಯೇ ವಿಭಿನ್ನವಾಗಿದೆ. ಇಲ್ಲಿ ಹೀರೋ ಅಥವಾ ಹೀರೋಯಿನ್ ಅಂತೇನೂ ಇಲ್ಲ, ಎಲ್ಲ ಪಾತ್ರಗಳು ಪ್ರಮುಖವಾಗಿವೆ. ಪಾತ್ರಗಳ ಸುತ್ತಲೇ ಕತೆಯನ್ನು ಹೇಳಿದ್ದೇನೆ. ಮೂರ್‍ನಾಲ್ಕು ಪಾತ್ರಧಾರಿಗಳ ಹೊರತಾಗಿ, ಉಳಿದವರೆಲ್ಲರೂ ಹೊಸಬರು. ನಟನಾ ತರಬೇತಿಯನ್ನು ಪಡೆದವರು. ಅಲ್ಲದೇ ರಂಗಭೂಮಿಯ ಕಲಾವಿದರೂ ಇದ್ದಾರೆ. ತೆಲುಗಿನ ಇಂಡಸ್ಟ್ರಿಯಲ್ಲಿ ಗುರುತಿಸಿಕೊಂಡಿರುವ ತಂತ್ರಜ್ಞರೂ ಸಿನಿಮಾಗಾಗಿ ಕೆಲಸ ಮಾಡಿದ್ದಾರೆ. ಹೇಳೋಕೆ 'ಬಳ್ಳಾರಿ ಕತೆ ಅಂತ ಅನಿಸಿದರೂ, ಆ ಘಟನೆಗಳು ಎಲ್ಲರ ಅನುಭವಕ್ಕೂ ಬಂದಿರಬಹುದು. ಅದನ್ನೇ ವಿಭಿನ್ನವಾಗಿ ಹೇಳುತ್ತಿದ್ದೇನೆ. ಮೊನ್ನೆಯಷ್ಟೇ ಪ್ರಮೋಷನ್ ಪೋಸ್ಟರ್ ರಿಲೀಸ್ ಮಾಡಿದ್ದೇವೆ. ಪ್ರೇಕ್ಷಕರು ಉತ್ತಮವಾದ ಪ್ರತಿಕ್ರಿಯೆ ನೀಡಿದ್ದಾರೆ.

** ಕಲಾವಿದರು ಮತ್ತು ತಂತ್ರಜ್ಞರ ವಿಶೇಷತೆ ಏನು?*

ಕಾರ್ತಿಕ್ ಸುಬ್ರಮಣ್ಯ ಸಿನಿಮಾಟೋಗ್ರಫಿ ಚಿತ್ರಕ್ಕಿದೆ. ಚರಣ್ ಅರ್ಜುನ್ ಅವರ ಸಂಗೀತದಲ್ಲಿ ಹಾಡುಗಳು ಮೂಡಿಬಂದಿದ್ದು, ನಾಗೇಂದ್ರಪ್ರಸಾದ್ ಮತ್ತು ನಾನು ಸಾಹಿತ್ಯ ಬರೆದಿದ್ದೇವೆ. ಪೋಲಾ ಶ್ರೀನಿವಾಶ್ ಬಾಬು, ಆಜಿ ಬಾಬಾ ಖಾನ್, ಮಮತಾ ರಾಹುತ್, ಶುಭ ರಕ್ಷಾ, ಸುಭಾಶ್ಚಂದ್ರ, ಹಾಶಿಣಿ, ಐಶ್ವರ್ಯ ಮುಂತಾದವರು ತಾರಾಗಣದಲ್ಲಿದ್ದಾರೆ.

** ಈ ಸಿನಿಮಾದ ನಂತರ ಮುಂದಿನ ಚಿತ್ರದ ಬಗ್ಗೆ ಪ್ಲಾನ್ ಏನಾದರೂ ಮಾಡಿದ್ದೀರಾ?*

ಕನ್ನಡದ ಈ ಸಿನಿಮಾ ಥಿಯೇಟರ್‌ಗೆ ಬರುತ್ತಿದ್ದಂತೆಯೇ ಮತ್ತೊಂದು ತೆಲುಗು ಸಿನಿಮಾ ಮಾಡುತ್ತಿದ್ದೇನೆ. ಈಗಾಗಲೇ ಸ್ಕ್ರಿಪ್ಟ್ ಕೆಲಸ ನಡೆಯುತ್ತಿದೆ. 'ಬಳ್ಳಾರಿ ದರ್ಬಾರ್' ಸಿನಿಮಾ ರಿಲೀಸ್ ಆದನಂತರ ಮುಹೂರ್ತ ಮತ್ತು ಮತ್ತಿತರ ಕೆಲಸದಲ್ಲಿ ತೊಡಗಿಕೊಳ್ಳುವೆ. ಅಲ್ಲಿನ ಹೆಸರಾಂತ ನಟರ ಜತೆ ಮಾತುಕತೆ ಕೂಡ ನಡೆಯುತ್ತಿದೆ. ■

ಭೂತಾರಾಧನೆ

16 ⏮

ಭ್ರಷ್ಟಗೊಳಿಸುವುದು ಮತ್ತು ಇದು ಇನ್ನೊಂದು ರಿಲಿಜನ್‌ನ ಅಡಿಯಾಳು ಎಂದು ಭಾವಿಸುವುದು ನಮ್ಮ ನಂಬಿಕೆಗೆ, ನಮ್ಮ ಆಚರಣಾ ವಿಧಿವಿಧಾನಗಳಿಗೆ ಮಾಡುವ ಅಪಚಾರ ಹಾಗೂ ವಂಚನೆ; ಈ ನೆಲದ ಮೂಲಗುಣಕ್ಕೆ ಮಾಡುವ ಅಪಮಾನ. ಭೂತಾರಾಧನೆ ನಡೆಯುವಲ್ಲಿ ಸ್ಥಳಶುದ್ಧಿ ಮಾಡುವುದೆಂದರೆ ನಮ್ಮ ದೈವಾರಾಧನೆಗೆ ಮೌಲ್ಯವಿಲ್ಲ, ದೈವಕ್ಕೆ ಶಕ್ತಿ ಇಲ್ಲ ಎಂದೇ ಅರ್ಥ. ದೈವಾರಾಧನೆಗೆ ಇದಕ್ಕಿಂತ ದೊಡ್ಡ ಅಪಚಾರ ಬೇರೆ ಬೇಕೆ? ನಮ್ಮ ಗ್ರಾಮೀಣ ಭೂತಗಳಿಗೆ ಹೊಸದಾದ ಪುರಾಣಗಳನ್ನು ರಚಿಸಿ, ವೈದಿಕತೆಯ ಚೌಕಟ್ಟನ್ನು ಹಾಕುವ ಪ್ರಯತ್ನ ಹಿಂದೆಯೂ ನಡೆದಿದೆ ಈಗಲೂ ನಡೆಯುತ್ತಿದೆ. ನಮ್ಮ ನಂಬಿಕೆಯ ವಿಷಯವನ್ನು ಬಳಸಿಕೊಂಡು ಮೌಢ್ಯವನ್ನು ಬಿತ್ತುವ ಕೆಲಸ ಮೊದಲು ನಿಲ್ಲಬೇಕು.

ದೈವಾರಾಧನೆ ಪರಂಪರೆಯ ಎಲ್ಲ ಜಾತಿಗಳೂ ಸಮಾನವಾದವು ಎಂದು ನಾನು ಬಗೆಯುತ್ತೇನೆ. ಕುಲಕಸುಬಿನ ಆಧಾರದಲ್ಲಿ ಪ್ರತ್ಯೇಕ ಸಮುದಾಯಗಳು ಇದ್ದಿರಬಹುದು, ಆದರೆ ಮಾನವನನ್ನು ಜಾತಿ ಆಧಾರದಲ್ಲಿ ಮೇಲುಕೀಳೆಂದು ವಿಭಜಿಸುವ ಪದ್ಧತಿ ಇಲ್ಲಿನ ಮೂಲನಿವಾಸಿಗಳಾದ ಹುಬಾಸಿಕ, ನಂದರು ಆಳಿದ ಈ ಮಣ್ಣಿನಲ್ಲಿ ಇದ್ದಿರಲು ಸಾಧ್ಯವಿಲ್ಲ; ಈ ಶ್ರೇಣೀಕರಣದ ವ್ಯವಸ್ಥೆಯೆಲ್ಲ ಇಲ್ಲಿಗೆ ಪರಕೀಯವಾದುದು, ಆ ತರಹದ ತಾರತಮ್ಯದ ಬದುಕನ್ನು ಸೃಷ್ಟಿಸಿದವರು ಇಲ್ಲಿಗೆ ಆಗಮಿಸಿದ ನಂತರದ ಬೆಳವಣಿಗೆ. ಜಾತಿ ಶ್ರೇಣೀಕರಣವನ್ನು ವಿರೋಧಿಸಿದ ನಾರಾಯಣ ಗುರು ತರಹದವರು ನಮಗೆ ಆದರ್ಶವಾಗಬೇಕು; ಅವರ ಫೋಟೋ ಅಲ್ಲ!

ಅಂದಹಾಗೆ, ನಾನು ಬಳಸಿದ ಕುವೆಂಪು ಕಾವ್ಯ 'ನೂರು ದೇವರನೆಲ್ಲ ನೂಕಾಚೆ ದೂರ, ಭಾರತಾಂಬೆಯೇ ದೇವಿ ನಮಗಿಂದು ಪೂಜಿಸುವ ಬಾರಾ' ಇದು ದೇಶಭಕ್ತಿಯ ಸಾಹಿತ್ಯ; ಭಾರತಾಂಬೆಯನ್ನು ಹಾಡಿಹೊಗಳುವ ಕವನ. ದೇಶಭಕ್ತಿ ಗೀತೆಯೇ ಅಸ್ಪೃಶ್ಯವಾಗುತ್ತಿರುವುದು ಕುಚೋದ್ಯದ ವಿಚಾರ! ಅಂದರೆ ಯಾವುದು ದೇಶಪ್ರೇಮ?! 1980ರಲ್ಲಿ ಮೈಸೂರಿನಲ್ಲಿ ನಡೆದ ವಿಶ್ವ ಕನ್ನಡ ಸಮ್ಮೇಳನದ ಅಧ್ಯಕ್ಷರಾದ ಕುವೆಂಪು, "ಬ್ರಾಹ್ಮಣಿಕೆ ಈ ದೇಶದ ಅನಿಷ್ಟ" ಎಂದು ಕರೆದರು. ಅವರನ್ನು ದೇಶ ಬಿಟ್ಟು ಓಡಿಸಬೇಕು ಎಂದು ಕೆಲವು ಅಪಕ್ವ ಮನಸ್ಸುಗಳು ಆಗ ರಾಡಿ ಎಬ್ಬಿಸುವ ಪ್ರಯತ್ನ ಮಾಡಿದರು. ಕನ್ನಡನಾಡಿನ ಪ್ರಬುದ್ಧ ಸಾಹಿತಿಗಳು ಮತ್ತು ಪ್ರೌಢ ಮನಸ್ಸುಗಳು -ಅವರಲ್ಲಿ ಬಹುತೇಕರು ಬ್ರಾಹ್ಮಣರು- ಕುವೆಂಪು ಹೇಳಿಯಲ್ಲಿ ಸತ್ಯಾಂಶವಿದೆ, ತಪ್ಪೇನೂ ಇಲ್ಲ ಎಂದು ಹೇಳಿ ಅವರನ್ನು ಸಮರ್ಥಿಸಿದರು. ಕುವೆಂಪು ಎಂದೂ ಬ್ರಾಹ್ಮಣ ದ್ವೇಷಿಯಾಗಿರಲಿಲ್ಲ. ಜ್ಞಾನಪೀಠ ಪ್ರಶಸ್ತಿ ಲಭಿಸಿದ 'ರಾಮಾಯಣ ದರ್ಶನಂ' ಕೃತಿಯನ್ನು ಅವರು ತಮ್ಮ ಗುರು ಬ್ರಾಹ್ಮಣ ಸಮುದಾಯಕ್ಕೆ ಸೇರಿದ ಟಿ.ಎಸ್. ವೆಂಕಣ್ಣಯ್ಯನವರಿಗೆ ಅರ್ಪಿಸಿದ್ದರು.



ನಾನು ಸಹ ಬ್ರಾಹ್ಮಣ ದ್ವೇಷಿ ಅಲ್ಲ ಎಂಬುದನ್ನು ಮತ್ತೆ ಸಮರ್ಥಿಸಿಕೊಳ್ಳುವ ಅಗತ್ಯವಿಲ್ಲ. ನಿರಂಜನ, ಶಿವರಾಮ ಕಾರಂತ ನನ್ನ ಮೆಚ್ಚಿನ ಸಾಹಿತಿಗಳು. ಕುದ್ಮಲ್ ರಂಗರಾಯರು ಓಡಾಡಿದ ಈ ಮಣ್ಣಿನಲ್ಲಿ ನಾನು ಜನ್ಮ ತಳೆದಿದ್ದೇನೆ ಎಂಬುದು ನನಗೆ ಎಂದೂ ಹೆಮ್ಮೆಯ ವಿಚಾರ. ಆದರೆ ಉಳಿದ ಜಾತಿಯವರನ್ನು, ದಲಿತ ಸಮುದಾಯಗಳನ್ನು ಧರ್ಮ ಮತ್ತು ಸಂಪ್ರದಾಯದ ಹೆಸರಲ್ಲಿ ಪ್ರಪಾತಕ್ಕೆ ತಳ್ಳುವ ಬ್ರಾಹ್ಮಣಿಕೆಯ ವಿಷಯವೇ ಬೇರೆ. ನಾನಂತೂ ನನ್ನ ಜಾತಿಯು ಬ್ರಾಹ್ಮಣ ಜಾತಿಯಿಂತ ಕೆಳಗಿನ ಜಾತಿ ಎಂದು ಹೇಳಲು ಸಿದ್ಧನಿಲ್ಲ, ನಮಗೆಲ್ಲ ಆತ್ಮಾಭಿಮಾನ ಬೇಕು. ನಮ್ಮ ಜಾತಿಯನ್ನೇ ಕೀಳು ಎಂದು ಗ್ರಹಿಸುವ ಮನಃಸ್ಥಿತಿಗೆ ಏನನ್ನಬೇಕೋ?!!! ದಾಸ್ಯಕ್ಕೆ ಒಗ್ಗಿದ ಮನಸ್ಸು ಹೊಸ ಆಲೋಚನೆಯತ್ತ ಸಾಗಬೇಕು. ನಮ್ಮ ಸಂವಿಧಾನ ಅದನ್ನೇ ಘೋಷಿಸುತ್ತದೆ. ನಮ್ಮ ದೇಶಪ್ರೇಮವೆಂದರೆ ಪವಿತ್ರ ಗ್ರಂಥವಾದ ಸಂವಿಧಾನಕ್ಕೆ ಬದ್ಧರಾಗಿರುವುದು. ಪೊಳ್ಳು ದೇಶಪ್ರೇಮದ ಸೊಲ್ಲುಗಳನ್ನು ಧಿಕ್ಕರಿಸುವುದು ಇಂದಿನ ಈ ಭವ್ಯ ದೇಶದ ತುರ್ತು ಅಗತ್ಯ.

ತೆಯ್ಯಂ, ತಿರೆ, ಭೂತಾರಾಧನೆಗಳ ಕುರಿತಾದ ಅಧ್ಯಯನಾತ್ಮಕ ಒಳನೋಟಕ್ಕೆ ಸಂಬಂಧಿಸಿದಂತೆ ಡಾ. ಪೀಟರ್ ಜೆ. ಕ್ಲಾಸ್, ಡಾ. ಹೆಡ್ರನ್ ಬ್ರಕ್ನರ್ ಮೊದಲಾದ ಯುರೋಪಿಯನ್ ವಿದ್ವಾಂಸರ, ಕೇರಳದ ಡಾ. ಕೆ.ಕೆ.ಎನ್. ಕುರುಪ್, ಇಲ್ಲಿಯವರಾದ ಡಾ. ಬಿ. ವಿವೇಕ ರೈ, ಶ್ರೀ ಅಮೃತ ಸೋಮೇಶ್ವರ, ಡಾ. ಕೆ. ಚಿನ್ನಪ್ಪ ಗೌಡ, ಡಾ. ಪುರುಷೋತ್ತಮ ಬಿಳಿಮಲೆ- ಹೀಗೆ ಹಲವು ಸಂಶೋಧಕರ ಕೃತಿಗಳ ಅಧ್ಯಯನ ಅಗತ್ಯವಾಗಿದೆ. ಇದರಿಂದ ನಮ್ಮ ಸಂಸ್ಕೃತಿಯ ಸ್ವಂತಿಗೆ ನಮಗೆ ಸ್ಪಷ್ಟವಾಗುತ್ತದೆ.

ನಂಬಿಕೆಯ ಹೆಸರಲ್ಲಿ ನಾವು ಮೌಢ್ಯಕ್ಕೆ ಜೋತು ಬೀಳಕೂಡದು. ಇಂದು ಸಮಯದ ಪ್ರವಾಹದಲ್ಲಿ ಮುಂದೆ ಸಾಗಬೇಕಿದೆ.

ನಮಸ್ಕಾರ, ನಾವು ನಂಬಿರುವ ಕಾರಣಿಕದ ದೈವಗಳು ನಿಮಗೆ ಒಳಿತನ್ನು ಮಾಡಲಿ."

■ ಕೆ.ಆರ್.ವಿದ್ಯಾಧರ, ಮಡಿಕೇರಿ

Registered No.RNP/KA/BGS/2036/2014-16 Posted at :Bangalore, PSO, Mysore Road BG-560026 Thursday R B P LANKESH, Kannada Weekly 19-10-2016 RNI No. KARKAN2005/1



ರಾಜ್‌ಕುಮಾರ ಗಲಾಟೆ

ಪುನೀತ್ ರಾಜ್‌ಕುಮಾರ್ ನಟನೆಯ 'ರಾಜಕುಮಾರ' ಸಿನಿಮಾದ ಟೀಸರ್ ಮೊನ್ನೆಯಷ್ಟೇ ರಿಲೀಸ್ ಆಗಿದೆ. ಬಿಡುಗಡೆಯಾಗಿ ಒಂದೇ ಗಂಟೆಗೆ ಆ ಟೀಸರ್ ವಿವಾದಕ್ಕೆ ಕಾರಣವಾಗಿದೆ. ಬಹುತೇಕ ಸಾಹಸ ದೃಶ್ಯಗಳನ್ನೇ ಬಳಸಿಕೊಂಡು ಟೀಸರ್ ರೆಡಿ ಮಾಡಿರುವ ನಿರ್ದೇಶಕ ಆನಂದ್‌ರಾಮ್, ಪವರ್‌ಫುಲ್ ಡೈಲಾಗ್ ಅನ್ನು ಅದಕ್ಕಾಗಿ ಬಳಸಿಕೊಂಡಿದ್ದಾರೆ. ಆ ಸಂಭಾಷಣೆಗಳೇ ದರ್ಶನ್ ಅಭಿಮಾನಿಗಳನ್ನು ಕೆರಳಿಸಿವೆ.

ನಾಯಕನ ಪಾತ್ರವನ್ನು ಹೊಗಳಿ ಅಟ್ಟಕ್ಕೇರಿಸುವ ಡೈಲಾಗ್ ಹೀಗಿದೆ: "ಬಿಡ್ರೋ.. ನೀವೆಲ್ಲ ಅಣ್ಣ, ಬಾಸು ಅಂತ ಬೇರೆಯವರ ಹೆಸರು ಹೇಳ್ಕೊಂಡು ಪವರ್‌ಗೆ ಬಂದಿರೋದು. ಆದರೆ ಅವರ ಹೆಸರು ಜೊತೇಲೆ ಪವರ್ ಇರೋದು ಪುನೀತ್‌ಗೆ". ಈ ಡೈಲಾಗ್ ಈಗ ಸಾಮಾಜಿಕ ಜಾಲತಾಣಗಳಲ್ಲಿ ಸಖತ್ ಸದ್ದು ಮಾಡುತ್ತಿದೆ. ಟೀಸರ್ ಬಗ್ಗೆ ಪರ ಮತ್ತು ವಿರೋಧದ ಮಾತುಗಳು ಕೇಳಿಬರುತ್ತಿವೆ.

ಮೊನ್ನೆಯಷ್ಟೇ ಪುನೀತ್ ಅವರ 'ದೊಡ್ಮನೆ ಹುಡುಗ' ಸಿನಿಮಾ ರಿಲೀಸ್ ಆಗಿದೆ. ಆ ಖುಷಿಯಲ್ಲಿರುವ ಪುನೀತ್‌ಗೆ ಈ ವಿವಾದ ಬಿಸಿ ತುಪ್ಪದಂತಾಗಿದೆ. 'ರಾಜಕುಮಾರ' ಸಿನಿಮಾದ ಬಹುತೇಕ ಶೂಟಿಂಗ್ ಮುಗಿದಿದ್ದು, ಇನ್ನೆರಡು ತಿಂಗಳಲ್ಲಿ ಈ ಸಿನಿಮಾ ತೆರೆಗೆ ಬರಲಿದೆ.

ನಮ್ಮೊಳಗಿನ ರಾಮಾಯಣ

ಪ್ರಕಾಶ್ ರೈ ನಿರ್ದೇಶಿಸಿ, ನಟಿಸಿರುವ 'ಇದೊಳ್ಳೆ ರಾಮಾಯಣ' ಸಿನಿಮಾ ಈ ವಾರ ಬಿಡುಗಡೆ ಆಗುತ್ತಿದೆ. ಅಪರೂಪದ ಕತೆಯೊಂದಿಗೆ ಪ್ರಕಾಶ್ ಮತ್ತೆ ಕನ್ನಡದ ಪ್ರೇಕ್ಷಕರಿಗೆ ಮುಖಾಮುಖಿ ಆಗಿದ್ದಾರೆ. ವಿಭಿನ್ನ ಪೋಸ್ಟರ್‌ನಿಂದಾಗಿ ಗಮನ ಸೆಳೆದಿರುವ ಚಿತ್ರದಲ್ಲಿ ಅನೇಕ ಹೊಸ ವಿಷಯಗಳು



ಇವೆಯಂತೆ. ಅದನ್ನು ಪ್ರಕಾಶ್ ರೈ ಬಣ್ಣಿಸುವುದು ಹೀಗೆ: "ಪ್ರತಿಯೊಬ್ಬ ಮನುಷ್ಯನಲ್ಲಿ ರಾಮ ಇರುತ್ತಾನೆ. ಮಾತ್ರವಲ್ಲ ರಾವಣನೂ ಜತೆಯಾಗುತ್ತಾನೆ. ನಮ್ಮೊಳಗಿನ ರಾಮ ಮತ್ತು ರಾವಣನ ಕತೆಯನ್ನು ಇಲ್ಲಿ ಹೇಳುತ್ತಿದ್ದೇನೆ. ಮನುಷ್ಯ ಸ್ವಭಾವವನ್ನು ವಿಶ್ಲೇಷಿಸುತ್ತಲೇ, ಬೇರೆ ಪ್ರಪಂಚಕ್ಕೆ ನೋಡುಗರನ್ನು ಕರೆದುಕೊಂಡು ಹೋಗಲಿದ್ದೇನೆ." ತುಂಬಾ ಸೀರಿಯಸ್ ಆಗಿರುವ ವಿಷಯ ಚಿತ್ರಕತೆಯಲ್ಲಿದ್ದರೂ, ನಗುವಂಥ ಹ್ಯೂಮರ್ ಚಿತ್ರದಲ್ಲಿದೆಯಂತೆ. ರಾಮನವಮಿಯ ಎರಡು ದಿನಗಳಲ್ಲಿ ಹಳ್ಳಿಯೊಂದರಲ್ಲಿ ನಡೆಯುವ ಘಟನೆಗಳಿಗೆ ಕ್ಯಾಮೆರಾ ಹಿಡಿದಿದ್ದಾರೆ ನಿರ್ದೇಶಕರು. ಸಶಕ್ತ ಗ್ರಾಮೀಣ ಕಥನಗಳು ಸಿನಿಮಾಗಳಲ್ಲಿ ಇಂದು ಅಪರೂಪವಾಗುತ್ತಿವೆ.


ಅವನ್ನೆಲ್ಲ ಈ ಸಿನಿಮಾದ ಮೂಲಕ ಕಟ್ಟಿಕೊಡುತ್ತಿದ್ದಾರೆ. ಪ್ರಿಯಾಮಣಿ ನಾಯಕಿಯಾಗಿ ನಟಿಸಿದ್ದು, ಅಚ್ಯುತ್ ಕುಮಾರ್, ಅರವಿಂದ್ ಮುಂತಾದವರ ತಾರಾಬಳಗವಿದೆ. ಇಳಯರಾಜ ಸಂಗೀತದಲ್ಲಿ ಹಾಡುಗಳು ಮೂಡಿಬಂದಿದ್ದು, ಜಯಂತ್ ಕಾಯ್ಕಿಣಿ ಸಾಹಿತ್ಯ ಬರೆದಿದ್ದಾರೆ.



ವಿಮಾನ ಏರಿದ ಲಾಯರ್ ರಚಿತಾ

ರಮೇಶ್ ಅರವಿಂದ್ ನಟನೆಯ 'ಪುಷ್ಪಕ ವಿಮಾನ' ಸಿನಿಮಾದಲ್ಲಿ ರಚಿತಾ ರಾಮ್ ನಟಿಸುತ್ತಿರುವ ವಿಷಯವನ್ನು ಈ ಹಿಂದೆ ಪತ್ರಿಕೆ ಪ್ರಕಟಿಸಿತ್ತು, ಆದರೆ ಅವರು ಎಂತಹ ಪಾತ್ರವನ್ನು ನಿರ್ವಹಿಸಲಿದ್ದಾರೆ ಅನ್ನುವ ಮಾಹಿತಿ ಹೊರ ಬಿದ್ದಿರಲಿಲ್ಲ, ಈಗ ಆ ಕುತೂಹಲಕ್ಕೂ ತೆರೆ ಎಳೆದಿದೆ ಸಿನಿಮಾ ತಂಡ. ಅ.3ರಂದು ರಚಿತಾ ರಾಮ್ ಹುಟ್ಟುಹಬ್ಬವನ್ನು ಆಚರಿಸಿಕೊಂಡಿದ್ದು, ಅವರ ಬರ್ತ್‌ಡೇಗಾಗಿ ಸಿನಿಮಾದ ಸ್ಟಿಲ್ ರಿಲೀಸ್ ಮಾಡಿದ್ದಾರೆ. ಆ ಫೋಟೋದಲ್ಲಿ ರಚಿತಾ ಲಾಯರ್ ಆಗಿ ಮಿಂಚಿದ್ದಾರೆ.

ರಮೇಶ್ ಮುಖ್ಯ ಭೂಮಿಕೆಯ ಈ ಚಿತ್ರದಲ್ಲಿ ತಂದೆ ಮತ್ತು ಮಗಳ ಬಾಂಧವ್ಯದ ಸುತ್ತ ಕತೆ ಹೆಣೆಯಲಾಗಿದೆ. ರಮೇಶ್ ತಂದೆಯ ಪಾತ್ರ ಮಾಡಿದ್ದು, ಬಾಲನಟಿ ಪಾರ್ಥವಿ ಮಗಳಾಗಿ ನಟಿಸಿದ್ದಾರೆ. 'ಗೋಧಿ ಬಣ್ಣ ಸಾಧಾರಣ ಮೈಕಟ್ಟು' ಚಿತ್ರದ ನಂತರ ಈ ಚಿತ್ರಕ್ಕೆ ಸಂಗೀತ ನೀಡಿದ್ದಾರೆ ಚರಣ್ ರಾಜ್. ಮೊನ್ನೆಯಷ್ಟೇ ಸಿನಿಮಾದ ಹಾಡುಗಳು ರಿಲೀಸ್ ಆಗಿವೆ. ಎಸ್.ರವೀಂದ್ರನಾಥ್ ನಿರ್ದೇಶನ ಚಿತ್ರಕ್ಕಿದ್ದು, ಭುವನ್ ಗೌಡ ಅವರ ಸಿನಿಮಾಟೋಗ್ರಫಿ ಇದೆ. ತುಂಬಾ ವರ್ಷಗಳ ನಂತರ ಜೂಹಿ ಚಾವ್ಲಾ ಕನ್ನಡ ಸಿನಿಮಾರಂಗಕ್ಕೆ ವಾಪಸ್ಸಾಗಿದ್ದಾರೆ. ಅಲ್ಲದೇ ಅವರು ವಿಶೇಷ ಹಾಡೊಂದರಲ್ಲಿ ಕಾಣಿಸಿಕೊಂಡಿದ್ದಾರೆ.



ದೀಪಾವಳಿಗೆ ಬರ್ತಾನೆ ಸಂ[illegible]

ಯಶ್ ಮತ್ತು ರಾಧಿಕಾ ಪಂಡಿತ್ ಮೊನ್ನೆಯಷ್ಟೇ ಯುರೋಪ್ [illegible] ಮುಗಿಸಿಕೊಂಡು ಬೆಂಗಳೂರಿಗೆ ಆಗಮಿಸಿದ್ದಾರೆ. ನಿಶ್ಚಿತಾರ್ಥ ಮುಗಿದ [illegible] ದಿನಕ್ಕೆ ಫ್ಲೈಟ್ ಏರಿದ್ದ ಈ ಜೋಡಿಯು ಅಮೆರಿಕದಲ್ಲಿ ನಡೆದ ಅಕ್ಕ ಸಮ್ಮೇ[illegible] ಭಾಗವಹಿಸಿತ್ತು, ಅಲ್ಲಿಂದ ಯುರೋಪ್‌ನ ಹಲವು ಕಡೆ ನಡೆದ [illegible] ಸಿನಿಮಾದ ಶೂಟಿಂಗ್‌ನಲ್ಲಿ ಪಾಲ್ಗೊಂಡಿತ್ತು. ಎಂಗೇಜ್‌ಮೆಂಟ್ ನಂತರ [illegible] ವಿರಾಮವನ್ನೂ ಪಡೆಯದೇ ಈ ಜೋಡಿಯು ಶೂಟಿಂಗ್‌ನಲ್ಲಿ ಪಾಲ್ಗೊ[illegible] ಕಾರಣವೊಂದಿದೆ. ಇದೇ ದೀಪಾವಳಿಗೆ 'ಸಂತು' ಸಿನಿಮಾವನ್ನು [illegible] ಮಾಡುವ ಪ್ಲಾನ್ ಮಾಡಿದ್ದಾರೆ ನಿರ್ಮಾಪಕ ಕೆ.ಮಂಜು. ಹೀಗಾಗಿ ತರಾತು[illegible] ಚಿತ್ರೀಕರಣವನ್ನು ಮುಗಿಸಿದ್ದಾರೆ. ಹಾಡೊಂದರ ಶೂಟಿಂಗ್ ಹೊರತು[illegible] ಬಹುತೇಕ ಶೂಟಿಂಗ್ ಮುಗಿದಿದೆ. ಅಲ್ಲದೇ ಇನ್ನಷ್ಟೇ ಹಾಡುಗಳ ಲೋ[illegible] ಕೂಡ ಆಗಲಿದೆ. ಶೀಘ್ರದಲ್ಲೇ ಸೆನ್ಸಾರ್ ಬಾಗಿಲಿಗೂ 'ಸಂತು' ಹೋಗ[illegible]

'ಮಿಸ್ಟರ್ ಅಂಡ್ ಮಿಸೆಸ್ ರಾಮಾಚಾರಿ' ನಂತರ ಯಶ್ [illegible] ರಾಧಿಕಾ ಮತ್ತೆ ಒಂದಾಗಿದ್ದಾರೆ. ಹೀಗಾಗಿ ಸಿನಿಮಾದ ಬಗ್ಗೆ ಈಗಾಗಲೇ [illegible] ಹೆಚ್ಚಾಗಿದೆ. ಯಶ್ ಅವರ ಇತ್ತೀಚಿನ ಚಿತ್ರಗಳು ದೀಪಾವಳಿಯ ಆ[illegible] ರಿಲೀಸ್ ಆಗಿದ್ದರಿಂದ, ಆ ಸೆಂಟಿಮೆಂಟ್‌ಗಾಗಿ ಬೆಳಕಿನ ಹಬ್ಬದಂದೇ [illegible] ಥಿಯೇಟರ್‌ಗೆ ಬರಲಿದ್ದಾನೆ ಎನ್ನಲಾಗುತ್ತಿದೆ. ಇದು ಮಹೇಶ್ ರಾವ್ ನಿದೇ[illegible] ಚಿತ್ರ. ವಿ.ಹರಿಕೃಷ್ಣ ಸಂಗೀತದಲ್ಲಿ ಹಾಡುಗಳು ಮೂಡಿಬಂದಿದ್ದು, ಯೋ[illegible] ಭಟ್ ಗೀತರಚನೆ ಮಾಡಿದ್ದಾರೆ.

ಗಣೇಶ್ ಈಗ ಸುಂದರಾಂಗ ಜಾ[illegible]

ಗಣೇಶ್ ನಟನೆಯ, ರಾಕ್‌ಲೈನ್ ವೆಂಕಟೇಶ್ ನಿರ್ಮಾಣದಲ್ಲಿ ತಯಾರ[illegible] ಚಿತ್ರಕ್ಕೆ ಈ ಹಿಂದೆ 'ಬಹದ್ದೂರ್ ಗಂಡು' ಎಂದು ಹೆಸರಿಡಲಾಗಿತ್ತು. ಕೊ[illegible] ಕ್ಷಣದಲ್ಲಿ ಸಿನಿಮಾ ತಂಡ ಶೀರ್ಷಿಕೆಯನ್ನು ಬದಲಾಯಿಸಿದೆ. 'ಬಹ[illegible] ಗಂಡು' ಬದಲಾಗಿ 'ಸುಂದರಾಂಗ ಜಾಣ' ಎಂದು ಟೈಟಲ್ ಇಡ[illegible] ಚಿತ್ರತಂಡವು ಸಡನ್ನಾಗಿ ಇಂಥದ್ದೊಂದು ತೀರ್ಮಾನಕ್ಕೆ ಬರಲು ಕಾರಣ ನಿ[illegible] ರಮೇಶ್ ಅವರಿಗೆ ಶೀರ್ಷಿಕೆಯ ಬಗ್ಗೆ ಸಮಾಧಾನ ಇರಲಿಲ್ಲವಂತೆ. [illegible] ಚಿತ್ರದ ಕತೆಗೂ ಮತ್ತು ಶೀರ್ಷಿಕೆಗೂ ಹೊಂದಾಣಿಕೆ ಆಗದ ಕಾರಣ, ಇಂಥದ[illegible] ಬದಲಾವಣೆ ಆಗಿದೆಯಂತೆ. ಆದರೆ ಗಾಂಧಿನಗರದಲ್ಲಿ ಹರಡಿರುವ ಸು[illegible] ಬೇರೆ. ಗಣೇಶ್ ಇತ್ತೀಚೆಗೆ ಜ್ಯೋತಿಷಿಗಳನ್ನು ನಂಬುತ್ತಿದ್ದಾರೆ. ಅವರ ನಿರ್ದೇಶ[illegible] ಟೈಟಲ್ ಚೇಂಜ್ ಆಗಿದೆ ಎನ್ನಲಾಗುತ್ತಿದೆ.

ಅಂದಹಾಗೆ 'ಸುಂದರಾಂಗ ಜಾಣ' ಚಿತ್ರವು ತೆಲುಗಿನ 'ಭಲೇ [illegible] ಮಗಾಡಿವೋಯ್' ಸಿನಿಮಾದ ರೀಮೇಕ್. ಪಕ್ಕಾ ಫ್ಯಾಮಿಲಿ ಎಂಟರ್‌[illegible] ಆಗಿರುವ ಸಿನಿಮಾಗೆ ಗೋಲ್ಡನ್ ಸ್ಟಾರ್ ಗಣೇಶ್ ನಾಯಕನಾದರೆ 'ಮಾಸ್ಟರ್[illegible] ಖ್ಯಾತಿಯ ಶಾನ್ವಿ ಶ್ರೀವಾಸ್ತವ್ ನಾಯಕಿ.

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427,
Fax : 26604536, E-mail :lankesh70@rediffmail.com